ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—೧೯೮೬ನೇ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೬ನೇ ಇಸವಿಯ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಪ್ರಕಟಣೆ

ಅಧ್ಯಕ್ಷರು.—ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ೯ನೇ ನಿಯಮದ ಮೇರೆಗೆ ನಾನು ವಿಧಾನಸಭೆಯ ಅಧ್ಯಕ್ಷತೆ ವಹಿಸುವವರ ಹೆಸರುಗಳ ಪಟ್ಟಿಯಲ್ಲಿರುವ ಶ್ರೀ ಹೆಚ್.ಟಿ. ಕೃಷ್ಣಪ್ಪನವರ ಸ್ಥಾನದಲ್ಲಿ ಶ್ರೀ ಹೆಚ್.ಜಿ. ಗೋವಿಂದೇಗೌಡರನ್ನು ನಾಮನಿರ್ದೇಶನ ಮಾಡಿರುತ್ತೇನೆ.

ನಿಯಮ ೬೯ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ಗೋಲೀಬಾರ್ ಹಾಗೂ ಕೋಮು ಘರ್ಷಣೆ ಮತ್ತು ಭಾಷಾ ವಿವಾದಗಳ ಬಗ್ಗೆ

೩-೦೦ ಪಿ. ಎಂ.

ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲೆ ಅಲ್ಪಕಾಲಾವಧಿ ಚರ್ಚೆ

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದವರಾದ ನಾವು ಒಂದು ನಿಲುವಳಿ ಸೂಚನೆಯನ್ನು ಈ ಸದನದ ಕಾರ್ಯಕಲಾಪಗಳು ಪ್ರಾರಂಭ ಆದಾಗ ತಮ್ಮ ಗಮನಕ್ಕೆ ತಂದೆವು. ಅದು ಬಹಳ ಪ್ರಮುಖವಾಗಿರ ತಕ್ಕಂಥ ವಿಚಾರ. ಕರ್ನಾಟಕ ರಾಜ್ಯದಲ್ಲಿ ಮೂರು ಕಡೆಗಳಲ್ಲಿ ಗೋಲೀಬಾರ್ ಆಗಿರುವ ವಿಚಾರ. ಈ ಸದನ ಈ ಸಾರಿ ಸೇರುವುದಕ್ಕಿಂತ ಮೊದಲು

MR. DEPUTY SPEAKER.—In the Chair.

ರಾಮನಗರ, ಗುಲ್ಬರ್ಗಾ ಜಿಲ್ಲೆಯ ಆಳಂದ್ ಹಾಗೂ ಬೆಳಗಾಂ ಜಿಲ್ಲೆಯಲ್ಲಿ ಗೋಲೀಬಾರ್ ಆಗಿರ ತಕ್ಕಂಥ ವಿಚಾರದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಮ್ಮ ಗಮನಕ್ಕೆ ನಾವು ಕಳುಹಿಸಿದ್ದೆವು. ತಾವು ನಾವು ಪ್ರಾಸ್ತಾವಿಕವಾಗಿ ಮಾತನ್ನು ಹೇಳುವುದಕ್ಕಿಂತ ಮುಂಚಿತವಾಗಿ ಒಂದು ತೀರ್ಮಾನಕ್ಕೆ ಬಂದಿದ್ದೀರಿ. ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ, ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಬಹುದು ಎಂಬ ಒಂದು ತೀರ್ಮಾನ ಮಾಡಿದ್ದೇವೆ ಎಂಬ ಮಾತನ್ನು ಅಧ್ಯಕ್ಷರಾದ ತಾವು ತಿಳಿಸಿದ್ದೀರಿ. ನಾವು ಅದನ್ನು ಒಪ್ಪಲಿಲ್ಲ. ಅನಂತರ ಒಂದು ಚರ್ಚೆ ಈ ಸದನದಲ್ಲಿ ಆಗಬೇಕು, ಈ ವಿಷಯ ಚರ್ಚೆ ಆಗ ತಕ್ಕಂಥ ಸಂದರ್ಭದಲ್ಲಿ ಈ ಸದನದ ಮಾನ್ಯ ಸದಸ್ಯರುಗಳು, ಈ ಕಡೆ ಕುಳಿತಿರತಕ್ಕಂಥ ಮಾನ್ಯ ಸದಸ್ಯರುಗಳು ಈ ಒಂದು ಚರ್ಚೆಯಲ್ಲಿ ಭಾಗವಹಿಸಿ, ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುವ ಸದವಕಾಶ ತಾವು ಮಾಡಿಕೊಟ್ಟಿದ್ದೀರಿ. ಅದಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿಯಮಾವಳಿ ೬೯ರ ಪ್ರಕಾರ ಇದನ್ನು ಮಾಡಿಕೊಟ್ಟಿದ್ದೀರಿ.

ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರತಕ್ಕಂಥ ಪ್ರಶ್ನೆ, ಕರ್ನಾಟಕ ರಾಜ್ಯದಲ್ಲಿ ಮೂರು ಕಡೆಗಳಲ್ಲಿ ಗೋಲೀಬಾರ್ ಆಗಿ ಜನರು ಸತ್ತಿರತಕ್ಕಂಥ ವಿಚಾರದ ಬಗ್ಗೆ ಚರ್ಚೆ. ಒಟ್ಟು ಸತ್ತಿರತಕ್ಕಂಥ ಜನರ ಸಂಖ್ಯೆ, ಗುಲ್ಬರ್ಗಾ ಜಿಲ್ಲೆಯ ಆಳಂದ್‌ನಲ್ಲಿ ಮೂರು ಸಾವು, ಗೋಲೀಬಾರ್‌ನಲ್ಲಿ ಸತ್ತಿರ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತಕ್ಕಂಥಾದ್ದು, ಅನಂತರ ರಾಮನಗರದಲ್ಲಿ ನಾಲ್ಕು ಸಾವು, ಗೋಲೀಬಾರ್ ಮತ್ತು ಜನಗಳ ಹಿಂಸಾಚಾರದಿಂದ ಸತ್ತಿರತಕ್ಕಂಥಾದ್ದು ಸೇರಿ, ರಾಮನಗರದಲ್ಲಿ ಗೋಲೀಬಾರ್‌ನಿಂದ ಸತ್ತಿರತಕ್ಕಂಥಾದ್ದು ಒಂದು ಎಂಬುದು ತಮ್ಮ ಅಭಿಪ್ರಾಯ, ಆದರೆ ಬೇರೆ ಅಭಿಪ್ರಾಯಗಳೂ ಇವೆ. ಒಂದು ಅಥವಾ ಎರಡು ಇರಬಹುದು. ಅನಂತರ ಬೆಳಗಾಂ ಜಿಲ್ಲೆಯಲ್ಲಿ. ಸತ್ತಿರತಕ್ಕಂಥವರ ಒಟ್ಟು ಸಂಖ್ಯೆ ೯ ಎನ್ನತಕ್ಕಂಥಾದ್ದು. ೯ ಕಿಂತ ಒಂದು ಕಡಿಮೆ ಆಗಬಹುದು ಒಂದು ಜಾಸ್ತಿ ಆಗಬಹುದು. ಈ ಸಂದರ್ಭದಲ್ಲಿ ಅಧಿಕೃತವಾಗಿ ಪತ್ರಿಕಾ ವರದಿಗಳ ಪ್ರಕಾರ ಒಮ್ಮೊಮ್ಮೆ ೬–೭–೮–೯ ಹೀಗೆಲ್ಲಾ ಬರುತ್ತದೆ. ಅವರಿಗೆ ವರದಿಗಳು ಬಂದಹಾಗೆ ಪ್ರಕಟಿಸುತ್ತಿರುತ್ತಾರೆ. ನಮಗೆ ಗೊತ್ತಾಗಿರತಕ್ಕ ವಿಚಾರ ಇದು. ತಮ್ಮ ವರದಿ ಪ್ರಕಾರ ಅಧಿಕೃತವರದಿ ಪ್ರಕಾರ ಎಷ್ಟು ಸಾವುಗಳು ಈ ಮೂರು ಸ್ಥಳಗಳಲ್ಲಿ ಆಗಿದೆ ಎಂಬುದನ್ನು ತಮ್ಮ ಅಂಕಿ ಅಂಶಗಳಿಂದ ತಮ್ಮ ಉತ್ತರದಲ್ಲಿ ಹೇಳುತ್ತೀರಿ ಎಂಬ ನಂಬಿಕೆ ಇಟ್ಟಿದ್ದೇನೆ.

ಈ ಗೋಲೀಬಾರ್ ಪ್ರಕರಣಗಳು ನಡೆದಿರತಕ್ಕಂಥಾದ್ದು ಕರ್ನಾಟಕ ರಾಜ್ಯದಲ್ಲಿ ಹೊಸದೇನೂ ಅಲ್ಲ. ಯಾವುದೇ ಸರಕಾರ ಇದ್ದರೂ ಕೂಡಾ ಕೆಲವೊಮ್ಮೆ ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಗೋಲೀಬಾರ್ ಪ್ರಕರಣಗಳು ನಡೆಯುತ್ತವೆ. ಯಾವಾಗ ಗೋಲೀಬಾರ್ ಮಾಡುವ ಮಟ್ಟಕ್ಕೆ ಪರಿಸ್ಥಿತಿ ಹೋಗುತ್ತದೆ ಎಂದರೆ, ಜನತೆ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಾಗ ಅಥವಾ ಅಲ್ಲಿರತಕ್ಕಂಥ ಇಲಾಖೆ ಇದನ್ನು ಸಂಪೂರ್ಣ ತೋಟಿಗೆ ಹತರಲು ಸಾಧ್ಯವಾಗದೇ ಇದ್ದಾಗ. ಪೋಲೀಸ್ ಇಲಾಖೆ ಯಾವಾಗಲೂ ಕೂಡಾ ಇದನ್ನು ನಿಭಾಯಿಸಬೇಕಾಗುತ್ತದೆ, ಆದರೆ ಪರಿಸ್ಥಿತಿ ಹತೋಟಿಗೆ ಬಾರದೆ ಕೈಮೀರಿ ಹೋದಾಗ, ಗೋಲೀಬಾರ್ ಮಾಡದೇ ಇದ್ದರೆ ಇನ್ನೂ ಕೆಟ್ಟ ಪರಿಸ್ಥಿತಿ ಉದ್ಭವವಾಗುತ್ತದೆ, ಅದರಿಂದ ಅನೇಕ ಜನರ ಸಾವು ನೋವುಗಳು ಆಗಬಹುದು ಎಂಬ ಪರಿಸ್ಥಿತಿ ಬಂದಾಗ, ಅಂಗಡಿಳು ವಾಸದಮನೆಗಳ ಲೂಟಿಗಳು ಆದಾಗ, ಬೆಂಕಿ ಹಚ್ಚುವ ಪ್ರಕರಣಗಳು ನಡೆದಾಗ, ಇವು ಹತೋಟಿ ಮೀರಿ ಹೋದಾಗ ಗೋಲೀಬಾರ್ ಮಾಡುವ ಪರಿಸ್ಥಿತಿ ಬರುತ್ತದೆ. ಇಲ್ಲದೇ ಹೋದರೆ ಗೋಲೀಬಾರ್ ಮಾಡತಕ್ಕಂಥ ಪರಿಸ್ಥಿತಿ ಬರಬಾರದು. ಇದು ಒಂದು ನೀತಿ ನಾವು ಇಟ್ಟುಕೊಳ್ಳುವುದು. ಅದಿಲ್ಲದೆ ತಕ್ಷಣ ಗೋಲೀಬಾರ್ ಮಾಡುವ ಹಾಗೆ ಇದ್ದರೆ, ಕಾನೂನು ಮತ್ತು ಸುವ್ಯವಸ್ಥೆಯನ್ನು ಪರಿಪಾಲನೆ ಮಾಡತಕ್ಕಂಥ ಜವಾಬ್ದಾರಿಯನ್ನು ಒಂದು ಇಲಾಖೆಗೆ ಕೊಡತಕ್ಕಂಥ ಪ್ರಮೇಯ ಏನಿಲ್ಲ. ಪರಿಸ್ಥಿತಿಯನ್ನು ಹತೋಟಿಗೆ ತರತಕ್ಕಂಥ ವಿಚಾರದಲ್ಲಿ, ಯಾವುದೇ ಕಾರಣಕ್ಕಾಗಿ ಒಂದು ಪರಿಸ್ಥಿತಿ, ವಿಷಮ ಸ್ಥಿತಿಗೆ ಮುಟ್ಟತಕ್ಕಂಥ ಸಂದರ್ಭ ಬಂದಾಗ, ಅಂತಹ ಪರಿಸ್ಥಿತಿಯನ್ನು ಹತೋಟಿಗೆ ತರತಕ್ಕಂಥ ಶಕ್ತಿ ಒಂದು ಇಲಾಖೆಗೆ ಇರಬೇಕು. ಬೇರೆ ಬೇರೆ ದಾರಿಗಳ ಮುಖಾಂತರವೂ ಕೂಡಾ ಪ್ರಾಮಾಣಿಕವಾಗಿ ಪ್ರಯತ್ನ ಪಟ್ಟಾಗಲೂ ಕೂಡಾ ಇದು ಸಾಧ್ಯವಿಲ್ಲದಿದ್ದರೆ, ಅನಂತರ ಸಾಧ್ಯವಾದರೆ ಗೋಲೀಬಾರ್ ಇತ್ಯಾದಿ ಮಾಡಬೇಕು, ಹಾಗೂ ಅಪ್ಪಿತಪ್ಪಿ ಏನಾದರೂ ಒಬ್ಬಿಬ್ಬರು ಸತ್ತರೂ ಕೂಡಾ ನೂರಾರು ಜನರ ಪ್ರಾಣವನ್ನು ಉಳಿಸತಕ್ಕಂಥ ಪ್ರಮೇಯ ಇದರಿಂದ ಬರಬೇಕು. ಇಲ್ಲ ಎಂಬ ಮಾತನ್ನು ನಾನು ಹೇಳುವುದಿಲ್ಲ. ಸುಮಾರಾಗಿ ರಾಮನಗರ ಮತ್ತು ಆಳಂದ್ ವಿಚಾರಗಳು ಒಂದೇ ರೀತಿಯಾಗಿ ಬಂದಿರತಕ್ಕಂಥ ವಿಚಾರಗಳು. ಬೆಳಗಾಂ ವಿಚಾರ ಬೇರೆ. ನಮಗೆ ಬಂದಿರತಕ್ಕಂಥ ವರದಿಗಳ ಪ್ರಕಾರ ಇವೆರಡೂ ಒಂದೇ ರೀತಿಯ ವಿಚಾರಗಳು. ಪತ್ರಿಕೆಗಳಲ್ಲಿ ವರದಿಗಳನ್ನು ಬರೆಯತಕ್ಕಂಥ ವಿಚಾರದಲ್ಲೂ ಕೂಡಾ ನಾನು ಇಲ್ಲಿ ಪತ್ರಿಕೆಗಳನ್ನು ಅಭಿನಂದಿಸುತ್ತೇನೆ. ಜನಗಳು ಯಾವ ಗುಂಪಿಗೆ ಸೇರಿರುತ್ತಾರೆ, ಅವರು ಯಾವ ಮತ ಯಾವ ಗುಂಪು ಎಂಬುದನ್ನು ಅವರು ಬರೆಯುತ್ತಾ ಹೋಗಿಬಿಟ್ಟರೆ, ಮತ್ತೊಂದು ಕಡೆ ಇಂತಹದೇ ಪರಿಸ್ಥಿತಿ ಉದ್ಭವವಾದೀತು ಎಂಬ ದೃಷ್ಟಿಯಿಂದ ಅವರು ಬರೆಯುವುದಿಲ್ಲ. I must thank the entire Press. ಎರಡು ಗುಂಪುಗಳು ಎಂಬ ಮಾತನ್ನು ಸಹಜವಾಗಿ ಅವರು ಬರೆಯುತ್ತಾರೆ. ನಮ್ಮ ಹತ್ತಿರ ನಿಮ್ಮ ಹತ್ತಿರ ಇರತಕ್ಕಂಥ ವರದಿಗಳು ಒಂದೊಂದು ರೀತಿಯ ವರದಿಗಳು ನಾನು ರಾಮನಗರ ಹಾಗೂ ಆಳಂದ್‌ಗೆ ಸೀಮಿತಗೊಳಿಸಿ ಮಾತನಾಡುತ್ತಿದ್ದೇನೆ. ಈ ಘಟನೆಗಳು ಕೋಮುಗಲಭೆಗಳು, ಕೋಮು ದ್ವೇಷ, ಕೋಮು ಭಾವನೆಯಿಂದ ಉದ್ಭವವಾಗಿರತಕ್ಕಂಥ ಒಂದು ಪರಿಸ್ಥಿತಿ. ಇದು ಅಂತಿಮವಾಗಿರತಕ್ಕಂಥ ಒಂದು ಪರಿಸ್ಥಿತಿ. ಇದು ಅಂತಿಮವಾಗಿ ಗೋಲೀಬಾರ್‌ನಲ್ಲಿ ಪರ್ಯವಸಾನವಾಯಿತು. ಜನರ ಸಾವಿನಲ್ಲಿ ಪರ್ಯವಸಾನವಾಯಿತು. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಮ್ಮ ಸಮಾಜದಲ್ಲಿ ಶಾಂತಿಯುತ ವಾತಾವರಣವನ್ನು ನಿರ್ಮಾಣ ಮಾಡದಿದ್ದರೆ, ಕೋಮು ಭಾವನೆ ಕೆಲವೊಮ್ಮೆ ದಳ್ಳುರಿಯಾಗಿ, ಕೆಲವೊಮ್ಮೆ ವಿಷಮ ಪರಿಸ್ಥಿತಿಯಾಗಿ, ಪ್ರಕೋಪಕ್ಕೆ ತೆಗೆದುಕೊಂಡು ಹೋಗತಕ್ಕಂಥ ಪರಿಸ್ಥಿತಿ ಉದ್ಭವವಾದರೆ ಬಹಳ ಕಷ್ಟ. ಸಹಜವಾಗಿ ಇದು ಮತ್ತೆ ಇನ್ನೊಂದು ಕಡೆಗೆ ಬೇರೆ ಕಡೆಗಳಿಗೆ ಹರಡತಕ್ಕಂಥ ಸಾಧ್ಯತೆ ಇದೆ. ರಾಮನಗರದಲ್ಲಿ ಪ್ರಾರಂಭವಾದುದು ಚನ್ನಪಟ್ಟಣಕ್ಕೆ ಹರಡಿದುದನ್ನು ಕೇಳಿದ್ದೇವೆ. ಘಾಸಲೇ ದೃಷ್ಟಿಯಿಂದ ದೂರದ ದೃಷ್ಟಿ

ಯಿಂದ ದೂರದ ದೃಷ್ಟಿಯಿಂದ ಇವೆರಡೂ ಹತ್ತಿರ ಇರತಕ್ಕಂಥ ಸ್ಥಳಗಳು. ಈ ರೀತಿಯಾಗಿ ಇದರ ಪರಿಣಾಮ ಹತ್ತಿರ ಇರತಕ್ಕಂಥ, ದೂರ ಇರತಕ್ಕಂಥ ಪ್ರದೇಶಕ್ಕೂ ಹರಡಬಹುದು. ಅಲ್ಲೂ ಇದು ಪ್ರಾರಂಭವಾಗಬಹುದು. ಈ ಸಂದರ್ಭದಲ್ಲಿ ಅಹಮದಾಬಾದ್ ನನ್ನ ನೆನಪಿಗೆ ಬರುತ್ತದೆ. ಹೀಗೆ ಅಲ್ಲಿ ಇವೆಲ್ಲಾ ಪ್ರಾರಂಭವಾಗಿ ಯಾವರೀತಿ ಹಬ್ಬಿತು ಎಂಬ ವಿಚಾರ ಗೊತ್ತಾಗುತ್ತದೆ. ಅದರ ವಿವರಣೆಗೆ, ಆಳವಾದ ವಿಶ್ಲೇಷಣೆಗೆ ನಾನು ಹೋಗುವುದಿಲ್ಲ.

ಆದರೆ ಮಾನ್ಯ ಸಭಾಧ್ಯಕ್ಷರೇ ಇವೆಲ್ಲಕ್ಕೂ ಕಾರಣವನ್ನು ನಾವು ಹುಡುಕುತ್ತಾ ಹೋದರೆ ನಮಗನ್ನಿಸುತ್ತದೆ, ಯಾವ ಕೋಮುಗಳ ಮಧ್ಯೆ ಶಾಂತಿಭಾವನೆಯನ್ನು ಸಹೋದರಭಾವನೆಯನ್ನು ಅಥವಾ ಭಾತೃತ್ವವನ್ನು ಯಾವಾಗಲೂ ಕೂಡಾ ಮಾನಸಿಕವಾಗಿ ಮತ್ತು ಕಾರ್ಯಾಚರಣೆಗೆ ತರಬೇಕು, ಅದು ಯಾವಾಗ ನಿಷ್ಫಲವಾಗುತ್ತದೆ, ಯಾವಾಗ ಅದಕ್ಕೆ ಹೆಚ್ಚಿನ ಬೆಲೆ ಸಮಾಜದಲ್ಲಿ ಬರುವುದಿಲ್ಲ, ಆಗ ಸಹಜವಾಗಿ ಯಾರಾದರೂ ಒಬ್ಬ ಕಿಡಿಗೇಡಿಗಳು, ಯಾರೇ ಇರಬಹುದು ಅವರು ಪ್ರಯತ್ನ ಮಾಡಿದಾಗ ಇದು ಸಹಜವಾಗಿ ತನ್ನದೇ ಆದಂತಹ ರೂಪವನ್ನು ತಾಳಿ ತನ್ನದೇ ಹಾಗಿರತಕ್ಕಂತಹ ರೂಪವನ್ನು, ತಾಳಿ ತನ್ನದೇ ಆಗಿರತಕ್ಕಂಥ ಒಂದು ಛಾಯೆಯನ್ನು ಸಮಾಜದ ಮೇಲೆ ಬಿಟ್ಟುಬಿಡುತ್ತವೆ ಪರಿಣಾಮವನ್ನು ಬಿಟ್ಟು ಬಿಡುತ್ತದೆ. ಅದಕ್ಕೆ ನಾವು ಅವಕಾಶ ಕೊಡಬಾರದು. ಇದರಲ್ಲಿ ಸಮಾಜದ ಸ್ಪಷ್ಟತೆಯನ್ನು ಅರಿಯಬೇಕಾಗುತ್ತದೆ. ಇದು ಒಂದು ಅಪರೂಪವಾದ ಸಮಾಜ. ಪ್ರಪಂಚದಲ್ಲಿ ಯಾವುದೇ ದೇಶದಲ್ಲಿಯಾಗಲೀ ಇಂಥ ಸಮಾಜ ಸಿಕ್ಕುವುದಿಲ್ಲ. ಕೆಲವು ಕಡೆ ಇರಬಹುದು. ಐರ್‌ಲ್ಯಾಂಡ್ ದೇಶದಲ್ಲಿ ಬೆಲ್‌ಫಾಸ್ಟ್ ಎಂಬ ಜಾಗದಲ್ಲಿ ಪ್ರಾಟೆಸ್ಟೆಂಟ್‌ನವರ ಮತ್ತು ಕ್ಯಾಥೊಲಿಕ್‌ನವರ ನಡುವೆ ಹಲವಾರು ವರ್ಷಗಳಿಂದ ಕೋಮು ಭಾವನೆಯ ದ್ವೇಶವನ್ನು ನಾವು ಕಾಣುತ್ತಿದ್ದೇವೆ ಪ್ರಪಂಚದ ಬೇರೆ ಬೇರೆ ದೇಶಗಳಲ್ಲೂ ಇಂತಹ ಕೋಮು ಭಾವನೆಯ ದ್ವೇಶ ಇರಬಹುದು. ಸೌತ್ ಆಫ್ರಿಕಾದಲ್ಲೂ ಕೋಮು ದ್ವೇಶ ಇದೆ. ದಕ್ಷಿಣ ಆಫ್ರಿಕದಲ್ಲಿ ಬಣ್ಣ ಬಣ್ಣದ ಮಧ್ಯೆ ಇರತಕ್ಕಂಥ ದ್ವೇಶವಾದರೆ ಇಲ್ಲಿ ಆ ರೀತಿ ಏನೂ ಅಲ್ಲ. ಇಲ್ಲಿ ಇರುವವರೆಲ್ಲರೂ ನಮ್ಮ ಸಹೋದರರೇ, ಎಲ್ಲರ ಬಣ್ಣವೂ ಒಂದೇ ತೆರವಾಗಿದೆ. ಬೇರೆ ದೇಶಗಳಲ್ಲಿ ಒಂದು ಅಥವಾ ಎರಡು ತರಹ ಕೋಮುಗಳು ಇದ್ದರೆ ನಮ್ಮಲ್ಲಿ ನೂರಾರು ಕೋಮುಗಳು ಇವೆ. ಮಹಾತ್ಮ ಗಾಂಧೀಜಿಯವರನ್ನು ನಾವು ಇಂದು ನೆನಪಿಗೆ ತಂದುಕೊಳ್ಳಬೇಕಾಗುತ್ತದೆ. ಮಹಾತ್ಮ ಗಾಂಧೀಜಿಯವರು ಕೋಮು ಕೋಮುಗಳ ನಡುವೆ ವಿರಸವಿರುವುದನ್ನು ತೊಡೆದು ಹಾಕಲು ಅಮರಣಾಂತ ಉಪವಾಸವನ್ನು ಕೈಗೊಂಡಿದ್ದರು. ಕೋಮು ಕೋಮುಗಳ ನಡುವೆ ವಿರಸ ಬಂದಾಗ ಅದನ್ನು ತೊಡೆಯಲು ಅಂತಿಮವಾಗಿ ಅಮರಣಾಂತ ಉಪವಾಸದ ಅಸ್ತ್ರವನ್ನು ಉಪಯೋಗಿಸುತ್ತಿದ್ದರು. ಆಂಗ್ಲರ ಆಡಳಿತದ ವಿರುದ್ಧವಾಗಿಯೂ ಪ್ರತಿಭಟನೆ ತೋರಿಸಲು ಸಹ ಗಾಂಧೀಜಿಯವರು ಅಮರಣಾಂತ ಉಪವಾಸವನ್ನು ಕೈಗೊಂಡಿದ್ದರು. ಜನರಲ್ಲಿ ಪ್ರೀತಿ, ವಿಶ್ವಾಸ, ಪ್ರೇಮ ಭಾವನೆಯನ್ನು ನಾವು ಉಂಟು ಮಾಡಬೇಕು. ಇವತ್ತು ನಾವು ಅನೇಕ ಧರ್ಮಗಳನ್ನು, ಜಾತಿಗಳನ್ನು, ಭಾಷೆಗಳನ್ನು ಸಮಾಜದಲ್ಲಿ ಕಾಣುತ್ತಿದ್ದೇವೆ. ನಮ್ಮ ದೇಶ ಭೌಗೋಳಿಕವಾಗಿ ಬಹಳ ದೊಡ್ಡದಾಗಿರುವುದರಿಂದ ಅನೇಕ ಭಾಷೆಯ ಜನರು ನಮ್ಮ ಸಮಾಜದಲ್ಲಿ ಇದ್ದಾರೆ. ಯೂನಿಟಿ ಇನ್ ಡೈವರ್‌ಸಿಟಿ ತರದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಈ ವಿಷಯದ ಬಗ್ಗೆ ಸಮರೋಪಾದಿಯಲ್ಲಿ ಪರಿಹಾರವನ್ನು ಕಂಡುಹಿಡಿಯಬೇಕು ಮತ್ತು ಇದನ್ನು ಸಾಧಿಸಬೇಕು. ಈ ಸಾಧನೆಯನ್ನು ಒಬ್ಬ ವ್ಯಕ್ತಿ ಮಾಡುವುದಕ್ಕಾಗುವುದಿಲ್ಲ. ವ್ಯಕ್ತಿಗಳಿಗೆ ಪೂರಕವಾಗಿ ಯಾವ ಒಂದು ಸರ್ಕಾರ ಇರುತ್ತದೆಯೋ ಅದು ಮಾಡಬೇಕು ಆದರೆ ಸರ್ಕಾರ ಆ ಕೆಲಸವನ್ನು ಮಾಡುವಲ್ಲಿ ವಿಫಲಗೊಂಡಿದೆ ಎನ್ನತಕ್ಕ ಮಾತನ್ನು ಹೇಳಬೇಕಾಗುತ್ತದೆ ಹಾಗೂ ಅದೇ ರೀತಿ ಅಂತಿಮ ತೀರ್ಮಾನಕ್ಕೆ ಬರಬೇಕಾಗುತ್ತದೆ. ಈ ಮಾತನ್ನು ಪೂರ್ವಪೀಠಿಕೆಯಾಗಿ ಏಕೆ ಇಡುತ್ತಿದ್ದೇನೆ ಎಂದರೆ ಇದು ಸರ್ವಕಾಲಕ್ಕೂ ಕೂಡ ಅತಿ ಅವಶ್ಯವಾಗಿ ಬೇಕಾಗಿರತಕ್ಕ ವಿಚಾರ. ನಮ್ಮ ಸಮಾಜದಲ್ಲಿ ಇರುವವರೆಲ್ಲರೂ ನಮ್ಮ ಸಹೋದರರು ಹಾಗೂ ತಂದೆ ತಾಯಿಗಳೇ ಆಗಿದ್ದಾರೆ. ನಾವು ಮೊನ್ನೆ ಚನ್ನಪಟ್ಟಣಕ್ಕೆ ನಮ್ಮ ಸ್ನೇಹಿತ ಶಾಸಕರೊಡನೆ ಹೋಗಿದ್ದೆವು. ಅಲ್ಲಿ ನೋಡಿದಾಗ ಹಿಂದೆ ಇದ್ದ ಅದೇ ಬಡತನ, ಅದೇ ಹಳೆಯ ಮನೆಗಳು ಇವೆ. ಅವರು ಹಿಂದುಗಳಾಗಲೀ, ಮುಸ್ಲಿಮರಾಗಲೀ, ಹರಿಜನರಾಗಲೀ, ಒಕ್ಕಲಿಗರಾಗಲೀ, ಲಿಂಗಾಯಿತರಾಗಲೀ. ಅವರು ಮಾತ್ರ ಬಡತನದಿಂದ ಹೊರಗೆ ಬಂದಿಲ್ಲ. ನಾನು ತಿಳಿದುಕೊಂಡಿರುವ ಹಾಗೆ ಎರಡೇ ಎರಡು ಕೋಮುಗಳು ಇವೆ. ಅವು ಯಾವುವೆಂದರೆ, ''ಹ್ಯಾವ್ಸ್ ಅಂಡ್ ಹ್ಯಾವ್ ನಾಟ್ಸ್'' ಅಂದರೆ ಉಳ್ಳವರು ಮತ್ತು ಉಳ್ಳದೇ ಇರುವವರು. ಇವರಿಬ್ಬರ ಮಧ್ಯೆ ಇರುವ ಕಂದಕವನ್ನು ನಾವು ಹೋಗಲಾಡಿಸಬೇಕು. ಜಾತಿ ಹೆಸರಿನಲ್ಲಿ, ಕೋಮುವಿನ ಹೆಸರಿನಲ್ಲಿ ಯಾರದೋ ಹಿತಕ್ಕೋಸ್ಕರ, ಯಾರೋ ಮತಾಂಧರು ಪ್ರಾರಂಭ ಮಾಡತಕ್ಕ ಗಲಾಟೆಗೆ ನಾವು ಅವಕಾಶವನ್ನು ಮಾಡಿಕೊಡಬಾರದು.

ಜಾತಿ ಹೆಸರಿನಲ್ಲಿ ಉಂಟಾಗುವ ಯಾವ ಕೆಟ್ಟ ವಿಚಾರಕ್ಕೂ ಇಂಬುಕೊಡಬಾರದು ಹಾಗೂ ಬೆಂಬಲ ಕೊಡಬಾರದು. ಅದು ಆಗದ ಹಾಗೆ ನೋಡಿಕೊಳ್ಳಬೇಕು. ಈ ರೀತಿ ಅಹಿತಕರ ಘಟನೆ ಆಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ ಮಾತ್ರ ಅಲ್ಲ ಸಮಾಜದಲ್ಲಿರತಕ್ಕ ಎಲ್ಲಾ ಜನರು ನೋಡಿ ಕೊಳ್ಳಬೇಕು. ನಾನು ಬಹಳ ಪ್ರಾಮುಖ್ಯವಾದ ವಿಚಾರವನ್ನು ಸರ್ಕಾರಕ್ಕೆ ಹೇಳಬೇಕಾಗಿದೆ. ಇದನ್ನು ಸಮಾಜದಲ್ಲಿರತಕ್ಕ ಎಲ್ಲರೂ ಅರಿತುಕೊಳ್ಳಬೇಕು. ಮೊನ್ನೆ ರಾಮನಗರದಲ್ಲಿ ಗೋಲಿಬಾರ್ ಆಗಿದೆ. ಇದರಲ್ಲಿ ಸರ್ಕಾರದ ಜವಾಬ್ದಾರಿ ಏನೂ ಇಲ್ಲವೆ? ಇವತ್ತು ಸರ್ಕಾರ ನಡೆಸತಕ್ಕ ಅಧಿಕಾರ ನಿಮ್ಮ ಕೈಯಲ್ಲಿ ಇದೆ. ಪ್ರತಿಯೊಂದು ಊರಿನಲ್ಲೂ ಪ್ರತಿಯೊಬ್ಬನಿಗೂ ಒಬ್ಬೊಬ್ಬ ಪೋಲೀಸಿ ನವನನ್ನು ಇಡುವುದಕ್ಕಾಗುವುದಿಲ್ಲ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಎಲ್ಲೆಲ್ಲಿ ಏನೇನು ಆಗುತ್ತದೆ ಎಂಬುದನ್ನಾದರೂ ತಿಳಿದುಕೊಳ್ಳುವುದಕ್ಕೆ ಪೋಲೀಸ್ ಠಾಣೆಗಳು ಇಲ್ಲವೆ? ಪೋಲೀಸ್ ಔಟ್‌ಪೋಸ್ಟ್‌ಗಳು ಇಲ್ಲವೆ? ಸಬ್ ಇನ್ಸ್‌ಪೆಕ್ಟರ್‌ಗಳು, ಸರ್ಕಲ್ ಇನ್ಸ್‌ಪೆಕ್ಟರುಗಳು, ಎಸ್.ಪಿ. ಗಳು, ಡಿ.ಐ.ಜಿ.ಗಳು, ಡಿ.ಜಿ.ಪಿ.ಗಳನ್ನು ಪೋಲೀಸ್ ಇಲಾಖೆಯಲ್ಲಿ ಇಟ್ಟಿಲ್ಲವೇ? ಇವರುಗಳಿಗೆ ಪೂರಕವಾಗಿ ಇಂಟೆಲಿಜೆನ್ಸ್ ಅಂದರೆ ಗುಪ್ತದಳ ಇಲ್ಲವೇ? ಯಾವುದೇ ಅಹಿತಕರ ಘಟನೆ ನಡೆಯಲಿ ಅದನ್ನು ತಕ್ಷಣ ತಿಳಿದುಕೊಂಡು ಮೊಳಕೆಯಲ್ಲೇ ಚಿವುಟಿ ಹಾಕಬೇಕು. ಅದು ಬಿಟ್ಟು ದೊಡ್ಡದಾಗಿ ಬೆಳೆದ ಮೇಲೆ ಅದನ್ನು ತಡೆಗಟ್ಟುವುದಕ್ಕೆ ಹೋದರೆ ಸಾವುನೋವುಗಳು ಉಂಟಾಗುತ್ತವೆ. ಸರ್ಕಾರವು ತನ್ನ ಆಡಳಿತವನ್ನು ಜವಾಬ್ದಾರಿಯುತವಾಗಿ ನಡೆಸದೇ ಇದ್ದರೆ ಇಂತಹ ಅನಾಹುತಗಳಿಗೆಲ್ಲಾ ಕಾರಣ ವಾಗುತ್ತದೆ. ಯಾವುದಾದರೂ ಒಂದು ಸಣ್ಣ ಘಟನೆ ನಡೆದರೆ ಇದು ಏನು ಮಹಾ ದೊಡ್ಡ ವಿಷಯ ವಲ್ಲ ಎಂದು ಪರಿಗಣಿಸಿದರೆ, ಅದು ಅಂತಿಮವಾಗಿ ಕೆಟ್ಟ ರೂಪ ತಾಳಿ ಬೃಹದಾಕಾರವಾಗಿ ಬೆಳೆಯು ವುದಕ್ಕೆ ಅವಕಾಶವಾಗುತ್ತದೆ. ಸರ್ಕಾರ ತನ್ನ ಜವಾಬ್ದಾರಿಯಿಂದ ವಿಫಲವಾಗಿ ಹೋಗಿದೆ, ತನ್ನ ಕರ್ತವ್ಯದಲ್ಲಿ ವಿಫಲಗೊಂಡಿದೆ. ಇದರ ಪರಿಣಾಮವಾಗಿ ಅನೇಕ ಕಡೆ ಗೋಲಿಬಾರ್‌ಗಳು ನಡೆದು ಅಂತಿಮವಾಗಿ ಜನರ ಸಾವುನೋವಿನಲ್ಲಿ ಕೊನೆಗೊಂಡಿದೆ ಎಂದು ಸ್ಪಷ್ಟವಾಗಿ ಕಾಣುತ್ತಿದೆ. ಈಗ ಒಂದು ವಿಚಾರ ಮಾಡೋಣ. ತಾವು ಅಧಿಕಾರಕ್ಕೆ ಬಂದಾಗ ತಾವು ಏನು ಹೇಳಿದ್ದೀರಿ ಎಂದರೆ, ಹಿಂದಿನ ಸರ್ಕಾರಗಳು, ಹಿಂದಿನ ಸರ್ಕಾರಗಳು ಅಂದರೆ, ಗುಂಡೂರಾವ್ ಸರ್ಕಾರ ಇರಬಹುದು, ದೇವರಾಜ್ ಅರಸರ ಸರ್ಕಾರ ಇರಬಹುದು, ವೀರೇಂದ್ರ ಪಾಟೀಲರ ಸರ್ಕಾರ ಇರಬಹುದು ನಿಜಲಿಂಗಪ್ಪನವರ ಸರ್ಕಾರ ಇರಬಹುದು. ಈ ಎಲ್ಲಾ ಸರ್ಕಾರಗಳಿಗೂ ತಮ್ಮ ಮಾತು ಅನ್ವಯ ವಾಗುತ್ತದೆ. ಈ ಸರ್ಕಾರಗಳು ಇದ್ದಾಗ ಗೋಲಿಬಾರ್‌ಗಳು ನಡೆದಿದ್ದವು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾವು ಗೋಲಿಬಾರ್ ಮಾಡುವುದಿಲ್ಲ ಗಲಾಟೆಗಳೇನಾದರೂ ಆದಾಗ ಸುಮ್ಮನೆ ಬೆದರು ಗುಂಡುಗಳು ಅದರಲ್ಲೂ ರಬ್ಬರ್ ಗುಂಡುಗಳನ್ನು ಹೊಡೆಯುತ್ತೇವೆಂದು ಹೇಳಿದ್ದೀರಿ. ಜನರು ತುಂಬಾ ಗಲಾಟೆ ಮಾಡಿದಾಗಲೂ ಸಹ ಗುಂಡು ಹೊಡೆಯದೇ ಬೆದರು ಗುಂಡು ಅಥವಾ ರಬ್ಬರು ಗುಂಡುಗಳಿಂದ ಹೆದರಿಸಿ ದೂರ ಸರಿಯುವಂತೆ ಮಾಡುತ್ತೇವೆಂದು ಹೇಳಿದ್ದೀರಿ. ಆ ಮಾತನ್ನು ತಾವುಗಳು ಮರೆತುಬಿಟ್ಟಿದ್ದೀರಿ. ನೀವು ಅಧಿಕಾರದಲ್ಲಿ ಬಂದ ಮೇಲೆ ಬಳ್ಳಾರಿಯಲ್ಲಿ ಗೋಲಿಬಾರ್ ಆಯಿತು, ಬಿಜಾಪುರದಲ್ಲಿ ಗೋಲಿಬಾರ್ ಆಯಿತು, ಬೆಳಗಾಮ್‌ನಲ್ಲಿ ಆಯಿತು, ರಾಮನಗರದಲ್ಲೂ ಆಯಿತು, ಈ ಜಾಗಗಳಲ್ಲಿ ಎಷ್ಟು ರಬ್ಬರ್ ಗುಂಡುಗಳನ್ನು ಉಪಯೋಗಿಸಲಾಯಿತು? ನಿಮ್ಮ ಹತ್ತಿರ ರಬ್ಬರ್ ಗುಂಡುಗಳು ಎಷ್ಟು ಸ್ಟಾಕ್ ಇಟ್ಟಿದ್ದೀರಿ ಎಂದು ನಾನು ಮೊದಲೇ ಪ್ರಶ್ನೆಯನ್ನು ತಮ್ಮ ಬಳಿ ಕೇಳಿದ್ದೆ. ಅದಕ್ಕೆ ತಾವು ಉತ್ತರವನ್ನೂ ಕೊಟ್ಟಿದ್ದೀರಿ. ಬಹುಶಃ ಈಗ ಅದನ್ನು ಮರೆತಿದ್ದೀರೆಂದು ಕಾಣುತ್ತದೆ. ಇದು ಯಾವುದೋ ಒಂದು ಸಾಧಾರಣವಾಗಿ ರತಕ್ಕಂಥ ಮಾತು ಅಲ್ಲ. ಇದು ಬಹಳ ಜವಾಬ್ದಾರಿಯಾಗಿರತಕ್ಕಂಥ ಮಾತು. ರಾಮನಗರವ್, ಆಲಂದ್, ಬೆಳಗಾಮ್‌ನಲ್ಲಿ ನೋಡಿದರೆ, ಅಂದರೆ ರೀಸೆಂಟ್ ಆಗಿ ನಡೆದಿರತಕ್ಕಂಥ ಗೋಲಿಬಾರ್ ಪ್ರಕರಣಗಳಲ್ಲಿ ಎಷ್ಟು ರಬ್ಬರ್ ಗುಂಡುಗಳನ್ನು ಹೊಡೆದಿದ್ದೀರಿ? ರಬ್ಬರ್ ಗುಂಡುಗಳನ್ನು ಪ್ರಯೋಗ ಮಾಡಿದ್ದೀರಾ ? ಮಾಡಿದ್ದರೆ ನಿಮ್ಮ ಅಧಿಕೃತ ದಾಖಲೆಗಳಲ್ಲಿ ಬರಬೇಕಾಗಿತ್ತಲ್ಲವೇ? ಪೋಲೀಸ್ ಗೋಲಿಬಾರ್‌ನಲ್ಲಿ ರಬ್ಬರ್ ಗುಂಡುಗಳನ್ನು ಉಪಯೋಗಿಸಲಾಗಿತ್ತು ಎಂದು ನಿಮ್ಮ ಪೋಲೀಸ್ ಅಧಿಕಾರಿಗಳು ಹೇಳಿಕೆ ಕೊಡುವಾಗ ಆ ವಿಷಯ ಇರಲಿಲ್ಲವಲ್ಲವೇ ? ಹಾಗೂ ಪತ್ರಿಕೆ ಗಳ ವರದಿಗಳಲ್ಲೂ ಬರಲಿಲ್ಲ. ಪತ್ರಿಕಾ ವರದಿಗಾರರು ಕೂಡ ಆ ಸ್ಥಳಗಳಿಗೆ ಭೇಟಿ ಕೊಟ್ಟಾಗ ಕೂಡ ಆ ಸ್ಥಳಗಳಲ್ಲಿ ಬೆದರು ಗುಂಡುಗಳ ಪ್ರಯೋಗವನ್ನು ಜನತಾ ಸರಕಾರ ಮಾಡಿದೆ, ಜನರನ್ನು ಕೊಲ್ಲತಕ್ಕಂತಹ ಉದ್ದೇಶವು ಈ ಸರಕಾರಕ್ಕೆ ಇಲ್ಲ, ಇರಲಿಲ್ಲ, ಎಂದು ಅವರು ಬರೆಯುತ್ತಾ ಇದ್ದರು. ನನಗೆ ಗೊತ್ತಿರುವ ಹಾಗೆ ಸರಕಾರ ರಚನೆ ಆಗಿರತಕ್ಕಂತಹ ಕಾಲದಲ್ಲಿ ಆಡಿರತಕ್ಕಂಥ ಮಾತುಗಳು, ಆ ನಿಮ್ಮ ಮಾತುಗಳಿಗೆ ಹೆಚ್ಚಿನ ಅರ್ಥವನ್ನು ಕಲ್ಪನೆ ಮಾಡಬಾರದು, ನೀವುಗಳು ಆಡಿದ ಆ ಮಾತುಗಳು ಜವಾಬ್ದಾರಿಯ ಒಂದು ಅರ್ಥ ಉಳ್ಳ ಮಾತುಗಳು ಅಲ್ಲ ಎಂದು ಕರ್ನಾಟಕ

ರಾಜ್ಯದ ಜನತೆ ಮತ್ತು ನಾವು ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಮತ್ತು ನಿಮ್ಮ ಕಡೆಯಿಂದಲೂ ಕೂಡ ಅನೇಕ ಜನರು ಈ ಮಾತನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ನಾನು ಈ ಮಾತನ್ನು ಏಕೆ ಹೇಳುತ್ತೇನೆ ಅಂದರೆ, ಜನರ ಜೀವದ ಬಗ್ಗೆ ಮಾತ್ರ ಅವರ ಆಸ್ತಿಗಳ ಬಗ್ಗೆ ನಾನು ಹೇಳುವುದಿಲ್ಲ. ಇವೊತ್ತು ರಬ್ಬರ್ ಗುಂಡುಗಳನ್ನು ಹಾರಿಸತಕ್ಕಂತಹ ವಿಚಾರ ಏತಕ್ಕೆ ಎಂದರೆ, ಜನರ ಜೀವಗಳನ್ನು ಹಾಳು ಮಾಡಬಾರದು ಎಂಬ ಕಾರಣದಿಂದ. ರಬ್ಬರ್ ಗುಂಡುಗಳನ್ನು ಹಾರಿಸುವ ಮುಖಾಂತರ ಪರಿಸ್ಥಿತಿಯನ್ನು ಹತೋಟಿಗೆ ತಂದು, ಅಂತಹ ಸಮಯದಲ್ಲಿ ಜನರ ಜೀವ ಉಳಿಯುವ ಹಾಗಿದ್ದರೆ ಆ ಪ್ರಯೋಗ ಒಳ್ಳೆಯದು ಎಂದು ಜೀವಕ್ಕೆ ಬೆಲೆ ಕೊಡತಕ್ಕಂತಹ ವಿಚಾರ ವನ್ನು ಇಲ್ಲಿ ಕಾಣಬಹುದು. ಇವೊತ್ತು ರಬ್ಬರ್ ಗುಂಡುಗಳನ್ನು ಪ್ರಯೋಗ ಮಾಡಿ ಜೀವಕ್ಕೆ ಬೆಲೆ ಕೊಡತಕ್ಕಂತಹವರು. ನೀವು ಆ ಜೀವದ ಬೆಲೆಯನ್ನು ಮರೆತಿದ್ದೀರಿ. ಈ ವಿಚಾರವನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ಜನರ ಜೀವಗಳನ್ನು ತೆಗೆಯುವುದಕ್ಕೆ ನೇರವಾಗಿ ನೀವು ಕೈಹಾಕಿದ್ದೀರಿ ಎಂದು ಈಗ ನಾನು ಹೇಳಬೇಕಾಗುತ್ತದೆ. ಈ ವಿಚಾರವನ್ನು ನಾನು ಈಗ ಅಲ್ಲಿಗೆ ಬಿಡುತ್ತೇನೆ. ಈ ವಿಚಾರವನ್ನು ನಾನು ಇಲ್ಲಿ ಏಕೆ ಹೇಳಿದ್ದೇನೆ ಎಂದರೆ, ನಿಮ್ಮ ವಿಚಾರಧಾರೆಯನ್ನು ಪೋಲೀಸ್ ಇಲಾಖೆಯ ಮುಖಾಂತರ ವ್ಯಕ್ತ ಮಾಡಿದ್ದೀರಿ ಎನ್ನತಕ್ಕಂತಹ ವಿಚಾರವನ್ನು ಕರ್ನಾಟಕ ರಾಜ್ಯದ ಜನತೆಗೆ, ಸದನಕ್ಕೆ, ಗೊತ್ತಾಗಲಿ ಎಂದು ಹೇಳಿದ್ದೇನೆ. ಗೋಲಿಬಾರ್ ನಡೆದ ಸಂಖ್ಯೆಗಳೆಷ್ಟು, ಸತ್ತವರು ಎಷ್ಟು, ಜನತಾ ಸರಕಾರ ಅಸ್ತಿತ್ವಕ್ಕೆ ಬರುವುದಕ್ಕಿಂತ ಮೊದಲು ಇದ್ದ ಸರಕಾರ ಗಳಲ್ಲಿ ನಡೆದ ಗೋಲಿಬಾರ್‌ಗಳ ಸಂಖ್ಯೆ ಎಷ್ಟು ಇತ್ಯಾದಿಯಾಗಿ ಈ ಸದನದಲ್ಲಿ ಪ್ರಶ್ನೆಗಳು ಬಂದು, ಅದಕ್ಕೆ ಉತ್ತರಗಳು ಕೂಡ ಬಂದಿವೆ. ಆ ಸಂದರ್ಭಗಳಲ್ಲಿ ಸತ್ತಿರತಕ್ಕಂತಹವರ ಸಂಖ್ಯೆಯನ್ನು ಕೂಡ ಇಲ್ಲಿ ನೀವು ಕೊಟ್ಟಿದ್ದೀರಿ. ಅನತಿ ಕಾಲದಲ್ಲಿ ನಿಮ್ಮ ಸರಕಾರವು ಅಧಿಕಾರಕ್ಕೆ ಬಂದಮೇಲೆ, ಎಷ್ಟು ಸಾವುಗಳು ಗೋಲಿಬಾರ್‌ನಿಂದ ನಡೆಯಿತು ಎಂದು ಹೋಲಿಕೆ ಮಾಡಿದಾಗ ಸಂಖ್ಯೆಯ ದೃಷ್ಟಿಯಿಂದ, ಕಾಂಗ್ರೆಸ್ ಸರಕಾರವು ಆಡಳಿತದಲ್ಲಿದ್ದಾಗ ಗೋಲಿಬಾರ್ ಪ್ರಕರಣಗಳು ಎಷ್ಟು ನಡೆದಿವೆ, ಅದನ್ನು ಮೀರಿ ನೀವು ಈಗ ಹೋಗಿದ್ದೀರಿ ಎನ್ನತಕ್ಕಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಶೇಕಡಾವಾರು ದೃಷ್ಟಿಯಿಂದ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಸರಕಾರದ ಪರವಾಗಿ ಒಂದು ಮಾತನ್ನು ಹೇಳಿದ ಮೇಲೆ, ನಿರ್ದಿಷ್ಟವಾಗಿರತಕ್ಕಂತಹ ಒಂದು ನೀತಿ ನಿಮಗೆ ಇರಬೇಕು. ಅದು ಕೋಮುವಾರು ಗಲಭೆಯೇ ಇರಬಹುದು. ಆ ಸಂದರ್ಭದಲ್ಲಿ ನಿಮ್ಮ ವಿಚಾರಧಾರೆ ಏನು ಎನ್ನುವ ಸ್ಪಷ್ಟತೆಯನ್ನು ಮತ್ತು ನಿಮ್ಮ ನೀತಿ ಏನು ಎನ್ನುವುದನ್ನು ಸರಿಯಾಗಿ ನಿರೂಪಿಸಿಲ್ಲ. ಇದರ ಬಗ್ಗೆ ತಮಗೆ ಅನುಮಾನವೂ ಇರಬಹುದು ಎಂದು ಒಂದು ಅನುಮಾನದ ತೀರ್ಮಾನಕ್ಕೆ ಈ ವಿಚಾರದಲ್ಲಿ ನಾವು ಬರಬೇಕಾಗುತ್ತದೆ. ಪೋಲೀಸ್ ಗುಪ್ತದಳದ ಬಗ್ಗೆ ಸೂಕ್ಷ್ಮವಾಗಿ ಮಾತನಾಡುತ್ತೇನೆ. ಈ ಪೋಲೀಸ್ ಗುಪ್ತದಳಗಳನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಇಟ್ಟಿದ್ದೀರಿ. ಅವುಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಒಂದು ವಿಚಾರದಲ್ಲಿ ಮಾತ್ರ. ಅದು ಏನೆಂದರೆ ಬಂಗಾರಪ್ಪನವರು ನರಸಿಂಹಮೂರ್ತಿಯವರು, ಇತರ ವಿರೋಧ ಪಕ್ಷದವರು ಎಲ್ಲೆಲ್ಲಿಗೆ ಹೋಗುತ್ತಾರೆ, ಆಸ್ಕರ್ ಫರ್ನಾಂಡೀಸ್‌ರವರು ಎಲ್ಲೆಲ್ಲಿಗೆ ಹೋಗುತ್ತಾರೆ ಎಂದು ತಿಳಿದುಕೊಂಡು ಅಲ್ಲಿಗೆ ಹೋಗುವುದು. ನಾನು ಯಾವ ಹಳ್ಳಿಗೆ ಹೋದರೂ ಕೂಡ ಅಲ್ಲಿಗೆ ಗುಪ್ತದಳದವರು ಬರುತ್ತಾರೆ. ನಾವು ನಮ್ಮ ಕ್ಷೇತ್ರಕ್ಕೆ ಹೋಗಬೇಕಾಗುತ್ತದೆ, ಇತರ ಸ್ಥಳಗಳಿಗೂ ಹೋಗಬೇಕಾಗುತ್ತದೆ. ನಮ್ಮ ಕ್ಷೇತ್ರದ ಜನರು ನಮಗೆ ಮತವನ್ನು ಕೊಟ್ಟು ನಮ್ಮನ್ನು ಆರಿಸಿ ಕಳುಹಿಸಿರುತ್ತಾರೆ. ಅವರನ್ನು, ಅವರ ಕುಂದುಕೊರತೆಗಳನ್ನು ನಾವು ವಿಚಾರಿಸಿಕೊಳ್ಳಲು ಹೋಗಬೇಕಾಗುತ್ತದೆ. ಅಲ್ಲಿ ಸಭೆಗಳನ್ನುದ್ದೇಶಿಸಿ ಮಾತನಾಡಲಿಕ್ಕೆ ಹೋಗುತ್ತೇವೆ. ಅಲ್ಲಿಯೂ ಗುಪ್ತದಳದವರು ಬರುತ್ತಾರೆ. ಹೀಗೆ ನಮ್ಮ ಹಿಂದೆ ಗುಪ್ತದಳದವರನ್ನು ಏಕೆ ಕಳುಹಿಸುತ್ತೀರಿ ಎಂದಾಗ ಹಿಂದೆ ಒಮ್ಮೆ ಮಾನ್ಯ ರಾಮಕೃಷ್ಣ ಹೆಗಡೆಯವರು ಉತ್ತರಿಸುತ್ತಾ, ನಿಮಗೆ ತೊಂದರೆಯಾಗುತ್ತದೆಂದೂ, ಹಾಗೂ ನಿಮ್ಮ ರಕ್ಷಣೆಗೋಸ್ಕರವಾಗಿ ಕಳುಹಿಸಿದ್ದೇವೆ ಎಂದೂ ಹೇಳಿದ್ದರು. ನಮ್ಮ ರಕ್ಷಣೆಗೊಸ್ಕರವಾಗಿ ನಾವುಗಳು ಹೋದಲೆಲ್ಲಾ ಗುಪ್ತದಳವನ್ನು ಇವರು ಕಳುಹಿಸುತ್ತಾರೆ, ಇದು ಬಹಳ ಒಳ್ಳೆಯ ವಾದ. ಇಂತಹ ವಿಚಾರಗಳಲ್ಲಿ ಮಾತನಾಡುವಾಗ, ಸಾಮಾನ್ಯವಾಗಿ ಒಂದೊಂದು ಹೆಜ್ಜೆಯನ್ನು ಇತರರು ಇಟ್ಟರೆ, ಇವರು ಒಮ್ಮೆಗೆ ೮–೧೦ ಹೆಜ್ಜೆಯಷ್ಟು ಮುಂದೆ ಹೋಗಿ ಇಡುವಂತಹ ವಾದ ಇವರದ್ದು. ನಿಮ್ಮ ಪಕ್ಷದ ಒಬ್ಬ ಸದಸ್ಯಣಿಯವರ ಬಗ್ಗೆಯೇ ನಾವು ರಕ್ಷಣೆಯನ್ನು ಕೊಡಿ ಎಂದು ಹೇಳಿದ್ದೇವೆ. ಆದರೆ ಬಂಗಾರಪ್ಪನವರಿಗೆ, ನರಸಿಂಹಮೂರ್ತಿಯವರಿಗೆ, ಆಸ್ಕರ್ ಫರ್ನಾಂಡೀಸ್‌ರವರಿಗೆ ರಕ್ಷಣೆ ಕೊಡಿ ಎಂದು ನಿಮ್ಮನ್ನು ಯಾರಾದರೂ ಕೇಳಿದ್ದರೇ? ಗಲಭೆಗಳು ನಡೆಯುವುದಕ್ಕಿಂತ ಮುಂಚಿತವಾಗಿ ಅದರ ಸುಳಿವನ್ನು ತಿಳಿದು, ಅದನ್ನು ತಡೆಗಟ್ಟಲು ಸಹಕಾರಿಯಾಗುವುದು. ಗುಪ್ತ ದಳದ ಕೆಲಸವಾಗಿದೆ. ಪೋಲೀಸ್ ಇಲಾಖೆಯಲ್ಲಿ ಆ ಸುಳಿವನ್ನು ಪಡೆಯುವಂತಹ

ಉದ್ದೇಶಕ್ಕೋಸ್ಕರವಾಗಿ ಈ ದಳವು ಇರಬೇಕು. ಆದರೆ ಅಂತಹ ಮುಖ್ಯವಾದ ಕೆಲಸವನ್ನು ಅವರು ಬಿಟ್ಟು ಎಲ್ಲೆಲ್ಲಿ ಯಾರ್ಯಾರು ಹೋಗುತ್ತಾರೆ, ಅಲ್ಲಿಗೆ ಅವರು ಬರುತ್ತಾರೆ. ಇದೇ ಕೆಲಸವನ್ನು ದಳದವರು ಇಷ್ಟು ಜವಾಬ್ದಾರಿಯಿಂದ ಚಾಕಚಕ್ಯತೆಯಿಂದ ರಾಮನಗರಂ ದಲ್ಲಿ, ಆಳಂದ್‌ನಲ್ಲಿ, ಬೆಳಗಾವಿಯಲ್ಲಿ ಮಾಡಿದ್ದರೆ ಅನ್ಯಾಯವಾಗಿ ಸತ್ತುಹೋಗಿರುವಂತಹ ಬಡಪಾಯಿಗಳ ಜೀವವನ್ನು ಉಳಿಸಬಹುದಾಗಿತ್ತು. ರಾಮನಗರದಲ್ಲಿ ಏನಾಯಿತು ? ಅಲ್ಲಿ ಒಂದೇ ಸಾರಿಗೆ ಪರಿಸ್ಥಿತಿ ಯೇನೂ ವಿಕೋಪಕ್ಕೆ ಹೋಗಿರಲಿಲ್ಲ. ಇದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. ಆಗ ನಿಮ್ಮ ಗುಪ್ತದಳವು ಎಲ್ಲಿತ್ತು ? ರಾಜಕಾರಣಿಗಳ ಹಿಂದೆ ನಿಮ್ಮ ಗುಪ್ತದಳವನ್ನು ಬಿಟ್ಟು ಯಾವ ರೀತಿಯಿಂದ ನೀವು ಚಾಕಚಕ್ಯತೆಯಿಂದ ನೀವು ಕೆಲಸವನ್ನು ಮಾಡುತ್ತೀರೋ ಅದೇ ರೀತಿಯಲ್ಲಿ ಈ ಗಲಭೆಗಳಲ್ಲಿ ನಿಮ್ಮ ದಳವು ಚಾಕಚಕ್ಯತೆಯಿಂದ ಕೆಲಸವನ್ನು ನಿರ್ವಹಿಸಿದ್ದರೆ, ಇಂತಹ ಕೋಮುವಾರು ಗಲಭೆಗಳಲ್ಲಿ ಮುಂಚಿತವಾಗಿ ಹೆಚ್ಚಿನ ಗಮನವನ್ನು ಕೊಟ್ಟಿದ್ದರೆ, ಆ ಗಲಭೆಗಳನ್ನು ತಪ್ಪಿಸಿ, ಜನರ ಜೀವಗಳನ್ನು ಉಳಿಸಬಹುದಾಗಿತ್ತು. ಅಂಗಡಿಗಳನ್ನು, ಬಡಪಾಯಿಗಳ ಗುಡಿಸಲುಗಳನ್ನು ನಾಶಪಡಿಸುವುದನ್ನು ತಪ್ಪಿಸಬಹುದಾಗಿತ್ತು, ಬಡಪಾಯಿಗಳಿಗೆ ನಷ್ಟ ಆಗಿರತಕ್ಕಂಥಾದ್ದನ್ನು ತಪ್ಪಿಸಬಹುದಾಗಿತ್ತು. ರಾಮನಗರಂನಲ್ಲಿ ನಡೆದ ಗಲಾಟೆ ಸಂದರ್ಭದಲ್ಲಿ ಸುತ್ತಮುತ್ತಲಿನ ೮-೧೦ ಹಳ್ಳಿಗಳಿಗೆ ಕರ್ಫ್ಯೂವನ್ನು ಹಾಕಿದ್ದೀರಿ. ಅಲ್ಲಿನ ಗಲಭೆಯು ರಾಮನಗರಂಗೆ ಮಾತ್ರ ಸೀಮಿತವಾಗಿರತಕ್ಕಂತಹ ಗಲಭೆಯಾಗಿರಲಿಲ್ಲ. ಅದು ಸುತ್ತಲಿನ ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಿಕೊಂಡು ಹೋಯಿತು. ಬಡಪಾಯಿಗಳು ಅದಕ್ಕೆ ಬಲಿ ಬಿದ್ದರು. ಸುಳ್ಳು ವದಂತಿಗಳು, ಅಸತ್ಯ ವರದಿಗಳು, ಸತ್ಯಕ್ಕೆ ದೂರವಾದಂತಹ ವಿಚಾರ ಗಳನ್ನು ಜನರಲ್ಲಿ ಯಾರ್ಯಾರು ಹಬ್ಬಿಸುತ್ತಿದ್ದರೋ, ಎಂದರೆ ಸಮಾಜಘಾತುಕ ಶಕ್ತಿಗಳು ಯಾರಿದ್ದರೋ ಅಂತಹವರ ಸುಳಿವನ್ನು ಪಡೆದು, ಸೂಕ್ತ ಕಾಲದಲ್ಲಿ ಕ್ರಮವನ್ನು ಕೈಗೊಂಡಿದ್ದರೆ, ಆ ಕೋಮುವಾರು ಗಲಭೆಗಳು ನಡೆಯತಕ್ಕಂತಹ ಪರಿಸ್ಥಿತಿಯು ಇರುತ್ತಿರಲಿಲ್ಲ. ನಿಮ್ಮ ಗುಪ್ತದಳಗಳನ್ನು ಈ ಗಲಭೆಗಳು ನಡೆಯದಿರುವ ಹಾಗೆ ನೋಡಿಕೊಳ್ಳುವಲ್ಲಿ ಸೂಕ್ತವಾಗಿ ಬಳಸಿಕೊಳ್ಳಬಹುದಾಗಿತ್ತು. ರಾಜ್ಯದಲ್ಲಿ ಕೋಮುವಾರು ಗಲಭೆಗಳು ಆದರೆ, ಗೋಲೀಬಾರ್‌ಗಳು ಆದರೆ, ಲಾಠಿ ಚಾರ್ಜ್‌ಗಳು ಆದರೆ ಅದರಿಂದ ರಾಜಕೀಯವಾಗಿ ಯಾವ ರೀತಿಯ ಲಾಭವೂ ನಿಮಗೆ ಇಲ್ಲ. ಅದರ ಬದಲು ನಿಮ್ಮ ಗುಪ್ತ ದಳವನ್ನು ಇವೊತ್ತು ಯಾರ್ಯಾರು ವಿರೋಧ ಪಕ್ಷದವರು ಇದ್ದಾರೆ, ಎಂದರೆ ಬಿ.ಜೆ.ಪಿ, ಪಕ್ಷದವರು ಇರಬಹುದು, ಕಮ್ಯೂನಿಸ್ಟ್ ಪಕ್ಷದವರು ಇರಬಹುದು, ಯಾವುದೇ ಇತರ ಪಕ್ಷಗಳು ಇರಬಹುದು. ನಿಮಗೆ ವಿರೋಧ ವಾಗಿರತಕ್ಕಂತಹವರು ಯಾರ್ಯಾರು ಇದ್ದಾರೆ, ಅವರ ಮೇಲೆ, ನಿಮ್ಮ ಗುಪ್ತದಳದವರನ್ನು ಹಾಕಿ ಸಂಪೂರ್ಣವಾಗಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದೀರಿ ಎಂದು ಅನಿವಾರ್ಯವಾಗಿ ನಾನು ಹೇಳಬೇಕಾಗಿದೆ. ರಾಮನಗರಂದಲ್ಲಿನ ಗಲಭೆಯ ಹುಟ್ಟು, ಬೆಳವಣಿಗೆ, ಮತ್ತು ಅದು ತನ್ನ ಪರಾಕಾಷ್ಟತೆಗೆ ಯಾವ ಸಂದರ್ಭದಲ್ಲಿ ಮುಟ್ಟಿತು, ಮತ್ತು ಮೊದಲು ಅದರ ವೇಗ ಅಷ್ಟು ಗಣನೀಯ ವಾಗಿರಲಿಲ್ಲ ಅನಂತರ ಅದರ ವೇಗವು ವಿಪರೀತವಾಗಿ ಹೆಚ್ಚಿತು. ಇದನ್ನು ಗಮನಿಸಿದರೆ ಇಷ್ಟೊಂದು ವಿಪರೀತ ಮಟ್ಟಕ್ಕೆ ಹೋಗಿದ್ದನ್ನು ನೋಡಿದರೆ, ಇದರ ಬಗ್ಗೆ ಸರಕಾರ ತಡೆಗಟ್ಟಲು ಯಾವ ರೀತಿಯ ಕ್ರಮವನ್ನು ಹಾಕಿಕೊಂಡಿಲ್ಲ ಎಂಬುದು ಗೊತ್ತಾಗುತ್ತದೆ. ರಾಮನಗರಂ ವಿಚಾರದಲ್ಲಿ ಸಂಪೂರ್ಣವಾಗಿ ಹೇಳುವುದಾದರೆ ಗಂಟೆಗಟ್ಟಲೆ ಸಮಯ ಹಿಡಿಯುತ್ತದೆ. ಅಲ್ಲಿ ಕರಗ ದೇವತೆಯನ್ನು ತೆಗೆದುಕೊಂಡು ಹೋಗುತ್ತಾ ಇದ್ದರು, ಒಂದು ಧರ್ಮಕ್ಕೆ ಸೇರಿದಂತಹವರು ಮತ್ತೊಂದು ಧರ್ಮಕ್ಕೆ ಸೇರಿದಂತಹ ವಿಶೇಷ ಸಂದರ್ಭಗಳಲ್ಲಿ ಹೋಗತಕ್ಕಂಥದ್ದೂ ಇದೆ. ಹಿಂದೂಗಳು ಮಸೀದಿಗೆ ಹೋಗುತ್ತಾರೆ, ಮುಸ್ಲಿಮ್ ಬಂಧುಗಳು ಹಿಂದೂ ದೇವತೆಗೆ ನಮಸ್ಕಾರ ಮಾಡುತ್ತಾರೆ. ಜನರಲ್ಲಿನ ಈ ಒಳ್ಳೆಯ ಭಾವನೆಯನ್ನು ನಾವು ಇವೊತ್ತಿಗೂ ನಮ್ಮ ಹಳ್ಳಿಗಳಲ್ಲಿ ಕಾಣುತ್ತಾ ಇದ್ದೇವೆ.

೩-೩೦ ಪಿ. ಎಂ.

ನಾವು ಚಿಕ್ಕಮಕ್ಕಳಾಗಿದ್ದಾಗ ನಮಗೆಲ್ಲಾ ಏನು ಒಂದು ಭಾವನೆ ಇತ್ತು ಎಂದರೆ ನಾವೆಲ್ಲಾ ಸಹೋದರರು ಎನ್ನುವುದು ಅಂಥ ಜನ ನಾವು. ಇಂಥ ಜನರು ಇವೊತ್ತಿನ ದಿವಸ ಕೋಮು ದ್ವೇಷಗಳಿಗೆ ಬಲಿಯಾಗುತ್ತಿದ್ದಾರೆ ಎಂದರೆ ಎಂತಹ ಕೆಟ್ಟ ಪರಿಸ್ಥಿತಿ ನಿಮ್ಮ ಆಡಳಿತ ಕಾಲದಲ್ಲಿ ಉದ್ಭವವಾಗಿದೆ, ಇದು ಯಾವ ರೂಪಕ್ಕೆ ಯಾವ ಪ್ರಮಾಣಕ್ಕೆ ತಲುಪಿರಬಹುದು, ಈ ವಿಚಾರವನ್ನು ತಮಗೇ ಬಿಟ್ಟುಬಿಡುತ್ತೇನೆ, ಸದಸ್ಯರಿಗೇ ಬಿಟ್ಟುಬಿಡುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಅಲ್ಲಿಯ ಪರಿಸ್ಥಿತಿ ಯಾವರೀತಿ ಉದ್ಭವವಾಗಿದೆ ಎಂದು ಹೇಳಬೇಕಾದರೆ ಅಲ್ಲಿ ಕರಗ ತೆಗೆದುಕೊಂಡು ಏನು ಹೋಗಬೇಕಾಗಿತ್ತೋ ಅದನ್ನು ಯಾವ ಜಾಗದಲ್ಲಿ ತೆಗೆದುಕೊಂಡು ಹೋಗಬೇಕು ಬಿಡಬೇಕು ಅನ್ನುವ ವಿಚಾರ ಬಂದಿರಬಹುದು, ಇಲ್ಲವೇ ಆ ಜಾಗ ವಕ್ಫ್ ಪ್ರಾಪರ್ಟಿಗೆ ಮಂಜೂರಾಗಿರತಕ್ಕಂಥಾದ್ದು ಎನ್ನುವ ವಿಚಾರ ಬಂದಿರಬಹುದು, ಇಲ್ಲವೇ ಆ ಜಾಗ ಅಲ್ಪಸಂಖ್ಯಾತರಿಗೆ ಸೇರಿದ್ದು ಎಂದು ಹೇಳ

ತಕ್ಕಂಥ ವಿಚಾರ ಇರಬಹುದು. ಒಟ್ಟಿನಲ್ಲಿ ಅವರ ಬಗ್ಗೆ ಸ್ವಲ್ಪ ವ್ಯತ್ಯಾಸವಾಗಿದೆ. ಇದೇ ಸಂದರ್ಭದಲ್ಲಿ ನಾವು ಮತ್ತೊಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ನಾವೆಲ್ಲರೂ ಸಹೋದರರು ಎನ್ನುವ ಭಾವನೆಯನ್ನು ಇಟ್ಟುಕೊಂಡು ಕೆಲಸ ಮಾಡಬೇಕು. ಈ ಬಗ್ಗೆ ಶಾಂತಿ ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಅಂಥ ಕಡೆಗಳಲ್ಲಿ ಶಾಂತಿಯನ್ನು ಕಾಪಾಡುವುದು, ಶಾಂತಿಯನ್ನು ಬೆಳೆಸತಕ್ಕಂಥಾದ್ದು ಎಲ್ಲಾ ಪಕ್ಷಗಳ ಜವಾಬ್ದಾರಿ ಹಾಗೂ ಸಮಾಜದ ಎಲ್ಲಾ ವರ್ಗಕ್ಕೂ ಸೇರಿದ ಜವಾಬ್ದಾರಿ. ಈ ಜವಾಬ್ದಾರಿಯನ್ನು ಎಲ್ಲರೂ ತೆಗೆದುಕೊಂಡು ಆ ದಿಸೆಯಲ್ಲಿ ಕೈಹಾಕಬೇಕು. ರಾಮನಗರದಲ್ಲಿ ಶಾಂತಿಯನ್ನು ಕಾಪಾಡುವ ಬಗ್ಗೆ ಪ್ರಾಮಾಣಿಕತೆ ನಿಮ್ಮಿಂದ ಸರಿಯಾಗಿ ನಡೆಯಲಿಲ್ಲ, ಇಲಾಖಾ ವತಿಯಿಂದಲೂ ಸರಿಯಾಗಿ ನಡೆಯಲಿಲ್ಲ, ಸರ್ಕಾರದ ವತಿಯಿಂದಲೂ ಸರಿಯಾಗಿ ನಡೆಯಲಿಲ್ಲ ಎಂದು ಹೇಳಬೇಕಾಗಿದೆ. ಆದರೆ ನನ್ನ ಪಕ್ಷದ ವತಿಯಿಂದ ಆ ಸಂದರ್ಭದಲ್ಲಿ ನಾನು ಹೋಗುವುದಕ್ಕಾಗಲಿಲ್ಲ. ನಮ್ಮ ಪಕ್ಷದ ಶ್ರೀ ವೀರಪ್ಪ ಮೊಯ್ಲಿ ಅವರು, ಶ್ರೀ ಆಸ್ಕರ್ ಫರ್ನಾಂಡಿಸ್ ಅವರು ಮತ್ತು ವಿರೋಧ ಪಕ್ಷದ ನಾಯಕರಾದ ಶ್ರೀ ಟಿ. ಎನ್. ನರಸಿಂಹಮೂರ್ತಿಯವರು ಆ ದಿವಸ ರಾಮನಗರಕ್ಕೆ ಹೋಗಿ ಬಂದಿದ್ದಾರೆ. ಅಲ್ಲಿಯ ವಿಚಾರವನ್ನು ಅವರು ತಿಳಿದುಕೊಂಡು ಬಂದಿದ್ದಾರೆ. ಇದನ್ನು ವಿಚಾರ ಮಾಡಿ ನೋಡಿದಾಗ ಸರ್ಕಾರ ತನ್ನ ಕರ್ತವ್ಯವನ್ನು ಸರಿಯಾಗಿ ಪ್ರಾಮಾಣಿಕತೆಯಿಂದ ನಡೆಸಿಲ್ಲ ಎನ್ನತಕ್ಕಂಥ ಮಾತನ್ನು ಆಡಿದ್ದಾರೆ. ಮತ್ತೊಮ್ಮೆ ಏನು ಹೇಳುತ್ತಾರೆ ಎಂದರೆ ಈ ಗೋಲಿಬಾರ್ ಪ್ರಕರಣ ನಡೆದಾಗ ಆ ಜಾಗಕ್ಕೆ ವಿರೋಧ ಪಕ್ಷದವರು ಏತಕ್ಕೆ ಹೋಗಿ ಬರಲಿಲ್ಲ ಎಂದು ? ಆದರೆ ನಾನು ಈ ಸಂದರ್ಭದಲ್ಲಿ ಹೇಳಬೇಕಾದರೆ ಅಂಥಾ ಜಾಗಕ್ಕೆ ಹೋಗಿ ಬರುವುದು ನಿಮ್ಮ ಜವಾಬ್ದಾರಿ. ನಾವು ಏತಕ್ಕೆ ಹೋಗುತ್ತೇವೆಂದರೆ ಅಲ್ಲಿ ನಡೆದಿರತಕ್ಕಂಥ ವಿವರಗಳನ್ನು, ವಿಚಾರಗಳನ್ನು ತಿಳಿದುಕೊಂಡು ಬರುತ್ತೇವೆ. ನಮಗಿಂತ ಹೆಚ್ಚಿನ ಜವಾಬ್ದಾರಿ ನಿಮಗೆ ಇದೆ. ಏತಕ್ಕೆಂದರೆ ನಾವು ಅಧಿಕಾರದಲ್ಲಿಲ್ಲ, ನಾವು ಆಡಳಿತ ನಡೆಸುತ್ತಾ ಇಲ್ಲ, ನಮಗೆ ಅಷ್ಟು ಅಧಿಕಾರ ಇಲ್ಲ. ಕರ್ನಾಟಕದ ಜನ ನಿಮಗೆ ಬಹುಮತದಲ್ಲಿ ಆರಿಸಿ ನಿಮ್ಮನ್ನು ಕಳುಹಿಸಿದ್ದಾರೆ. ಬಹುಮತದ ಆಧಾರದ ಮೇಲೆ ನೀವು ಸರ್ಕಾರ ರಚನೆ ಮಾಡಿದ್ದೀರಿ. ಆದುದರಿಂದ ನಿಮ್ಮ ಮೇಲೆ ಇರತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಅಷ್ಟು ಇಲ್ಲ ಎಂದು ಹೇಳುತ್ತೇನೆ. ನನಗೆ ತಿಳಿದಮಟ್ಟಿಗೆ ರಾಮನಗರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೋಗಿ ಬಂದ ಹಾಗೆ ಕಾಣಲಿಲ್ಲ. ಇಲ್ಲಿಂದ ರಾಮನಗರಕ್ಕೆ ಅರ್ಧ ಗಂಟೆ ಪ್ರಯಾಣ ಆದರೂ ಮುಖ್ಯಮಂತ್ರಿಗಳು ಹೋಗಿಲ್ಲ. ಮಾನ್ಯ ರಾಚಯ್ಯನವರು ಅಲ್ಲಿಗೆ ಹೋಗಿದ್ದರು ಎನ್ನುವ ವಿಚಾರ ನನಗೆ ತಿಳಿದುಬಂದಿದೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮೈಸೂರಿಗೆ ಹೋಗುವಾಗ ಹಾಗೆಯೇ ಹೋಗಿದ್ದರು

ಶ್ರೀ ಎಸ್. ಬಂಗಾರಪ್ಪ.—ಮೈಸೂರಿಗೆ ಹೋಗುವಾಗಲಾದರೂ ಹೋಗಲಿ ಯಾವಾಗಲಾದರೂ ಹೋಗಲಿ ಒಟ್ಟಿನಲ್ಲಿ ಅವರು ಅದಕ್ಕಾಗಿಯೇ ಆ ರಾಮನಗರಕ್ಕೆ ಹೋಗಿದ್ದರು ಎನ್ನುವ ಭಾವನೆಯನ್ನು ನಾವು ಇಟ್ಟುಕೊಳ್ಳೋಣ. ಸಾಮಾನ್ಯವಾಗಿ ಗೃಹಮಂತ್ರಿಗಳ ಜವಾಬ್ದಾರಿ, ಆದರಿಂದ ಅವರು ಹೋಗಿದ್ದಾರೆ. ಅಂಥ ಜಾಗಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹೆಗಡೆಯವರು ಹೋದಾಗ ಏನಾಗಬಹುದು, ಗೃಹ ಸಚಿವರು ಹೋದಾಗ ಏನಾಗಬಹುದು, ಅಥವಾ ಬೇರೆ ಮಂತ್ರಿಗಳೇ ಹೋಗಲಿ ಅವರು ಹೋದರೆ ಏನಾಗಬಹುದು, ಇವೆಲ್ಲ ವಿಚಾರ ತೆಗೆದುಕೊಂಡರೆ ಸ್ವಲ್ಪ ವ್ಯತ್ಯಾಸ ಆಗಬಹುದು. ಮಾನ್ಯ ಹೆಗಡೆಯವರು ಹೋದರೆ ಆ ಎರಡು ಕೋಮುಗಳಿಗೆ ಇರತಕ್ಕಂಥ ವ್ಯತ್ಯಾಸ ತಣ್ಣಗಾಗಬಹುದು, ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ಅವರು ಪ್ರಯತ್ನ ಮಾಡಬಹುದು. ಬೇರೆ ಯಾರೇ ಹೋಗಲಿ ಮುಖ್ಯಮಂತ್ರಿಗಳು ಹೋದಾಗ ನಾವು ಹಿಂದೆ ನಡೆದಿರತಕ್ಕಂಥ ವಿದ್ಯಮಾನಗಳನ್ನು ತುಲನೆ ಮಾಡಿ ನೋಡಿದಾಗ ಇವೊತ್ತಿನ ದಿವಸವೂ ಮಾನ್ಯ ಮುಖ್ಯಮಂತ್ರಿಗಳು ಗ್ರಾಮಾಂತರ ಪ್ರದೇಶಕ್ಕೆ ಹೋದಾಗ ಅವರ ಬಗ್ಗೆ ಯಾವರೀತಿಯಾಗಿ ಪರಿಣಾಮ ಬೀಳಬಹುದು. ಯಾವ ಸಮಾಜದವರೇ ಇರಲಿ, ಯಾವ ಕೋಮುಗಳೇ ಆಗಲಿ ಯಾವ ರೀತಿಯಾಗಿ ಪರಿಣಾಮ ಬೀಳುತ್ತದೆ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ ಅವರ ಮಾತನ್ನು ನಾವೆಲ್ಲ ಕೇಳಬೇಕು ಎನ್ನುವ ಭಾವನೆ ಜನ ಸಾಮಾನ್ಯರಲ್ಲಿ ಮೂಡಿರುವುದು ನಾವು ಕಂಡಿದ್ದೇವೆ. ಇವೊತ್ತಿನ ದಿವಸ ಮುಖ್ಯಮಂತ್ರಿಗಳು ಗ್ರಾಮಾಂತರ ಪ್ರದೇಶಕ್ಕೆ ಹೋದರೆ ಆ ಗ್ರಾಮದ ಜನರು ಯಾರೇ ಆಗಿರಲಿ ಅವರ ಮಾತಿಗೆ ಗಮನ ಕೊಡುವುದು ಪರಿಪಾಠವಾಗಿರುವುದನ್ನು ನಾವು ಇಟ್ಟುಕೊಂಡಿದ್ದೇವೆ. ಆದುದರಿಂದ ನಾನು ಹೇಳುವುದು ಮಾನ್ಯ ಮುಖ್ಯಮಂತ್ರಿಗಳು ಹೋಗಿ ಬಂದಿದ್ದರೆ ಚೆನ್ನಾಗಿತ್ತು ಎಂದು. ಇದು ಜವಾಬ್ದಾರಿ ಪ್ರಶ್ನೆ ಅದಕ್ಕಾಗಿ ಚೆನ್ನಾಗಿತ್ತು ಎಂದು ಹೇಳಿದ್ದು, ಅಲ್ಲಿಗೆ ಹೋಗಿ ಬರದೇ ಇದ್ದುದೇ ಚೆನ್ನಾಗಿತ್ತು ಎನ್ನುವ ಅಭಿಪ್ರಾಯ ಅವರೇನಾದರೂ ಇಟ್ಟುಕೊಂಡಿದ್ದರೆ, ಗೃಹ ಸಚಿವರೇ ಹೋದರೆ ಒಳ್ಳೆಯ ಪರಿಣಾಮವಾಗುತ್ತದೆ ಎಂದು ಏನಾದರೂ ಅವರಲ್ಲಿ ಭಾವನೆ ಇದ್ದರೆ ಅದಕ್ಕಾಗಿ ಗೃಹ ಸಚಿವರು ಹೋಗಿದ್ದರು ಎನ್ನುವ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ.

ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿದ್ದರೆ ಒಳ್ಳೆಯ ಪರಿಣಾಮವಾಗುತ್ತಿರಲಿಲ್ಲ ಎಂದು ಇದ್ದರೆ ಅನಿವಾರ್ಯವಾಗಿ ಗೃಹಸಚಿವರೇ ಹೋಗಿದ್ದಾರೆ ಎನ್ನುವ ತೀರ್ಮಾನವನ್ನೇ ನಾವು ಇಟ್ಟುಕೊಳ್ಳೋಣ. ಅದೇನೇ ಇರಲಿ, ಅಲ್ಲಿಗೆ ಹೋಗಿಬರತಕ್ಕಂಥ ಜವಾಬ್ದಾರಿ ತಮ್ಮ ತಲೆ ಮೇಲೆ ಇತ್ತು. ಆ ಕರ್ತವ್ಯದಲ್ಲಿ ನೀವು ವಿಫಲರಾಗಿದ್ದೀರಿ. ಹೋಗಲಿ ತಾವು ಆಳಂದ್‌ಗಾದರೂ ಹೋಗಿ ಬಂದಿದ್ದೀರಾ? ಮೊನ್ನೆ ತಾನೇ ತಾವು ಗುಲ್ಬರ್ಗ, ಬೀದರ್, ರಾಯಚೂರು ಎಲ್ಲಾ ಕಡೆಗೆ ಹೋಗಿದ್ದಿರಿ, ಆಗ ಏನಾದರೂ ಆಳಂದ್‌ಗೆ ಹೋಗಿದ್ದೀರಾ? ಇಲ್ಲವೇ ಆ ಪ್ರದೇಶಗಳಲ್ಲಿ ಬರಗಾಲ ಬಂದಾಗ ಅದನ್ನು ನೋಡುವುದಕ್ಕೆ ಹೆಚ್ಚು ಆಸ್ಥೆವಹಿಸಿ ಹೋಗಬೇಕಾಗಿತ್ತು. ನಮ್ಮ ಜನರು ಅಲ್ಲಿ ಬರಗಾಲಕ್ಕೆ ಏನು ಸಿಕ್ಕಿ ಹಾಕಿಕೊಂಡಿದ್ದಾರೆ, ಬಳ್ಳಾರಿ, ರಾಯಚೂರು, ಗುಲ್ಬರ್ಗ ನೀರಾವರಿ ಪ್ರದೇಶ ಬಿಟ್ಟು ಬಿಜಾಪುರ ಇತರ ಕಡೆಗಳಲ್ಲಿ ಆ ಜನರ ಕಷ್ಟ ಏನೆಂದು ತಿಳಿಯಲು ಆ ತಾಲ್ಲೂಕುಗಳಿಗೆಲ್ಲಾ ಹೋಗಿ ಬಂದಿದ್ದೀರಾ?

ಶ್ರೀ ಬಿ. ರಾಚಯ್ಯ.—ಬರಗಾಲ ಪೀಡಿತದಲ್ಲಿರತಕ್ಕಂಥ ಎಲ್ಲಾ ಜಿಲ್ಲೆಗಳಿಗೂ ಮಾನ್ಯ ಕಂದಾಯ ಮಂತ್ರಿಗಳು ಹೋಗಿ ಬಂದು ಅಲ್ಲಿ ಜನರ ಬರಗಾಲದ ಪರಿಸ್ಥಿತಿಯನ್ನು ವಿಚಾರ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಬರಗಾಲದ ಬಗ್ಗೆ ವಿಚಾರ ತಿಳಿಯಲು ಆ ಭಾಗಕ್ಕೆ ಮಾನ್ಯ ಕಂದಾಯ ಮಂತ್ರಿಗಳು ಹೋಗಿ ಬಂದಿದ್ದಾರೆ, ಸರಿ, ಆದರೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಏತಕ್ಕೆ ಮಾತನಾಡಿದ್ದಾರೆ? ಮಾನ್ಯ ಕಂದಾಯ ಮಂತ್ರಿಗಳು ಇದರ ಬಗ್ಗೆ ಮಾತನಾಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಬರಗಾಲ, ಮಳೆಗಾಲ, ಪ್ರವಾಹದ ಬಗ್ಗೆ ಮಾತನಾಡಿದ್ದಾರೆ. ನಿಮ್ಮ ಕಾಲದಲ್ಲಿ ಈಗ ಪ್ರವಾಹ ಕಡಿಮೆಯಾಗಿದೆ, ಬರಗಾಲ ಪ್ರಮಾಣ ಜಾಸ್ತಿ ಆಗಿದೆ. ಎಂದು ಜನ ಹೇಳುತ್ತಿದ್ದಾರೆ. ಜನತಾ ಸರ್ಕಾರ ಬಂದಮೇಲೆ ಬರಗಾಲ ಪ್ರಮಾಣ ಜಾಸ್ತಿಯಾಗಿದೆ ನಮ್ಮ ಪರಿಸ್ಥಿತಿ ಏನು ಎಂದು ಹೇಳುತ್ತಿದ್ದಾರೆ. ಅಲ್ಲದೆ ಈ ಜನತಾ ಸರ್ಕಾರ ಬಂದಮೇಲೆ ಈ ರಾಜಕೀಯ ಧುರೀಣರು ಬಂದಮೇಲೆ ಅವರು ಇರುವವರೆಗೂ ಈ ಬರಗಾಲ ಇರುತ್ತದೆ, ಬರಗಾಲ ಅವರು ಇರುವವರೆಗೂ ತಪ್ಪುವುದಿಲ್ಲ ಎಂದು ಜನ ಹೇಳುತ್ತಿದ್ದಾರೆ.

ಶ್ರೀ ಕೆ. ಮಲ್ಲಪ್ಪ.—ಹಿಂದಿನವರು ಮಾಡಿದ ಫಲ ಅದನ್ನು ನಾವು ಅನುಭವಿಸುತ್ತಾ ಇರುವುದು. ಈ ಬರಗಾಲಕ್ಕಾಗಿ ನಮ್ಮ ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಜನ ಆ ರೀತಿ ಹೇಳಿಲ್ಲ, ನಾವೂ ಕೇಳಿದ್ದೇವೆ, ಈ ಮಾತು ಜನ ಹೇಳಿದ್ದಲ್ಲ, ಇದು ಬಂಗಾರಪ್ಪನವರ ಸ್ಟೇಟ್‌ಮೆಂಟ್ ಅಷ್ಟೆ. ಜನ ಏನು ಹೇಳುತ್ತಿದ್ದಾರೆಂದರೆ ಜನತಾ ಸರ್ಕಾರ ಬಂದಮೇಲೆ ರಾಜ್ಯಕ್ಕೆ ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಬಂಗಾರಪ್ಪನವರು ಸಮಾಜವಾದಿಗಳು ಎಂದು ಜನರಲ್ಲಿ ಇನ್ನೂ ಮೂಢನಂಬಿಕೆ ಇದೆ. ಅದು ಗೊತ್ತೇ?

ಶ್ರೀ ಎಸ್. ಬಂಗಾರಪ್ಪ.—ನಂಜನಗೂಡಿನಲ್ಲಿ ಈಗ ಏನಾದರೂ ಮಳೆ ಬಿದ್ದಿದೆಯೇ?

ಶ್ರೀ ಡಿ. ಟಿ. ಜಯಕುಮಾರ್.—ಮಳೆ ಚೆನ್ನಾಗಿ ಬಿದ್ದಿದೆ.

ಶ್ರೀ ಎಸ್. ಬಂಗಾರಪ್ಪ.—ಅದೇನೇ ಇರಲಿ. ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಅಲ್ಲಿಂದ ಅರ್ಧ ಗಂಟೆ ಮುಕ್ಕಾಲು ಗಂಟೆ ಪ್ರಯಾಣ ಆಳಂದ್‌ಗೆ ಆಗುತ್ತಿತ್ತು, ಅಲ್ಲಿಗೇನಾದರೂ ಇವರು ಹೋಗಿ ಬಂದಿದ್ದೀರಾ? ಅಲ್ಲಿ ನೊಂದವರ ಕುಟುಂಬಗಳಿಗೆ ಏನು ಹಾನಿಯಾಗಿದೆ, ಅವರ ಆಸ್ತಿಪಾಸ್ತಿಗಳಿಗೆ ಏನು ನಷ್ಟವಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಅಲ್ಲಿಗೆ ಹೋಗಿದ್ದರೆ ಗೊತ್ತಾಗುತ್ತಿತ್ತು. ಅದರ ಬಗ್ಗೆ ಎಲ್ಲಾ ವಿವರಗಳನ್ನು ಇಲ್ಲೇ ಫೈಲು ತರಿಸಿಕೊಂಡು ನೋಡಬಹುದು ಎನ್ನುವುದಾದರೆ ವಿಧಾನಸೌಧದ ಮೂರನೇ ಮಹಡಿಯೇ ಸಾಕು, ಟೂರ್‌ಗೇನೂ ಹೋಗಬೇಕಾಗಿಲ್ಲ. ನಾವೂ ಪ್ರಶ್ನೆಯನ್ನು ಕೇಳುವ ಹಾಗಿಲ್ಲ. ಪ್ರವಾಸ ಬೇಡ ಎನ್ನುವ ಹಾಗಿದ್ದರೆ ಆ ಬಗ್ಗೆ ಕಾನೂನು ಮಾಡಿಕೊಂಡಿದ್ದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಕರ್ನಾಟಕದ ಜನತೆ ನಿಮ್ಮನ್ನು ಆರಿಸಿ ಕಳುಹಿಸಿದ್ದಾರೆ. ನಿಮಗೆ ಬಹುಮತ ಇದೆ, ಅದರಿಂದ ನೀವು ಅಧಿಕಾರದಲ್ಲಿದ್ದೀರಿ, ಇಲ್ಲಿರತಕ್ಕಂಥ ಪ್ರಶ್ನೆ ಏನೆಂದರೆ ಗೋಲಿಬಾರ್‌ಗಳು ನಡೆದಾಗ ಮುಂಚಿತವಾಗಿ ಅದನ್ನು ನಡೆಯದೇ ಇರುವುದಕ್ಕೆ ಆಗದೇ ಇರುವ ಹಾಗೆ ಮಾಡುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು

ಅದನ್ನು ಯಾವ ರೀತಿಯಾಗಿ ಹೇಗೆ ಮಾಡಬೇಕು ಎನ್ನುವುದನ್ನು ನೋಡಿಕೊಳ್ಳುವುದೇ ಜವಾಬ್ದಾರಿ ಪ್ರಶ್ನೆ. ಒಂದುವೇಳೆ ಆದರೆ ಅದು ಆಗುವುದಕ್ಕೆ ಕಾರಣ ಏನು ಎನ್ನತಕ್ಕಂಥಾದ್ದು ಒಂದು ಭಾಗ ಆದರೆ ಇನ್ನೊಂದು ಭಾಗ ಮುಂದೆ ಅದು ಆಗದೇ ಇರುವ ಹಾಗೆ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಅದೇರೀತಿಯಾಗಿ ಇವೊತ್ತು ಬರಗಾಲ ಪ್ರದೇಶದಲ್ಲಿ ಅನೇಕ ಜನರು ಊರು ಬಿಟ್ಟು ಹೋಗುತ್ತಾರೆ. ಅಂಥವರಿಗೆ ಅವರು ಊರು ಬಿಟ್ಟು ಹೋಗದೇ ಇರುವ ಹಾಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ. ಇದರ ಜೊತೆಗೆ ನೊಂದ ಜನರಿಗೆ ಪುನರ್ವಸತಿ ಸೌಲಭ್ಯವನ್ನೂ ಒದಗಿಸುವ ವಿಚಾರವನ್ನೂ ಯೋಚನೆ ಮಾಡಿ ಅವರಿಗೆ ಅನುಕೂಲ ಮಾಡಿಕೊಡಬೇಕು. ನೊಂದ ಕುಟುಂಬಗಳಿಗೆ ತಕ್ಕ ಪರಿಹಾರ ಕೊಡಬೇಕು. ಏನೋ ಬಂದು ಹೋದರು ಎನ್ನತಕ್ಕಂಥ ವಿಚಾರ ಇರಬಾರದು. ಈ ದೃಷ್ಟಿಯಿಂದ ಅಲ್ಲಿಗೆಲ್ಲಾ ಭೇಟಿ ಕೊಡುವುದು ಅತಿ ಅವಶ್ಯಕವಾಗಿರುತ್ತದೆ. ಅವರ ಮನಸ್ಸನ್ನು ಸಮಾಧಾನಪಡಿಸಿ, ಸಾಂತ್ವನಗೊಳಿಸಿ ಬರತಕ್ಕಂಥ ಜವಾಬ್ದಾರಿ ನಿಮ್ಮದಾಗಿತ್ತು. ಈ ಒಂದು ಜವಾಬ್ದಾರಿಯಿಂದ ಇವರು ಸಂಪೂರ್ಣವಾಗಿ ನುಣುಚಿಕೊಂಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ರಾಮನಗರದ ಸುತ್ತಮುತ್ತ ಈ ಗಲಭೆ ಹರಡುವವರೆಗೆ ಗುಪ್ತದಳ ಮಲಗಿತ್ತೇ. ಹಳ್ಳಿಗಳಲ್ಲಿ ಕರ್ಫ್ಯೂ ವಿಧಿಸಿರತಕ್ಕಂಥಾದ್ದು ಕರ್ನಾಟಕದಲ್ಲಿ ಅಪರೂಪ, ನನಗಂತೂ ನೆನಪಿಲ್ಲ. ನನಗೆ ಗೊತ್ತಿರುವ ಹಾಗೆ ಯಾವುದೇ ಸಮಸ್ಯೆ ಬಂದರೂ ಊರಿನ ಮುಖಂಡರನ್ನು ಸೇರಿಸಿ, ಅವರು ಯಾವುದೇ ಕೋಮಿಗೆ ಸೇರಿರಲಿ ಅವರನ್ನು ಸೇರಿಸಿ ಸಮಸ್ಯೆಯನ್ನು ಪರಿಹರಿಸಿಕೊಂಡು ಶಾಂತಿಯುತವಾಗಿ ಹೋಗತಕ್ಕ ಸಮಾಜ ಇದು. ಇಲ್ಲಿ ಕರ್ಫ್ಯೂ ೮–೧೦ ಹಳ್ಳಿಗಳಿಗೆ ವಿಸ್ತರಣೆ ಮಾಡತಕ್ಕಂಥ ಪರಿಸ್ಥಿತಿ ಉದ್ಭವವಾಗಿದ್ದರೆ ಆ ಲೋಪಕ್ಕೆ ಕಾರಣಕರ್ತರು ನಿಮ್ಮ ಅದಕ್ಷ ಆಡಳಿತ, ನೀವು ಜವಾಬ್ದಾರರು, ಈ ಜವಾಬ್ದಾರಿಯನ್ನು ನೀವು ಹೊರಬೇಕು. ನಿಮ್ಮ ಬೇಜವಾಬ್ದಾರಿಯಿಂದ, ಅದಕ್ಷ ಆಡಳಿತದಿಂದ ಇವತ್ತು ರಾಜ್ಯದಲ್ಲಿ ಕರ್ಫ್ಯೂ ಬಂದಿದೆ. ಕರ್ಫ್ಯೂ ಬಂದರೆ ಹೊರಗೆ ಹೋಗುವುದಕ್ಕಾಗುವುದಿಲ್ಲ. ರಾಮನಗರದ ಬಗ್ಗೆ ಪೋಲೀಸ್ ಮಹಾನಿರ್ದೇಶಕರ ಹೇಳಿಕೆಗಳು ಬಂದುವು, ''ಕಂಡಲ್ಲಿ ಗುಂಡು'' ಎಂದು. ಈ ಆರ್ಡರನ್ನು ಕೊಟ್ಟರಿ. ಇದಕ್ಕೆ ನಿಮ್ಮ ಬೇಜವಾಬ್ದಾರಿ ಮತ್ತು ಅದಕ್ಷತೆ ಕಾರಣವಾಗಿದೆ. ಇದಕ್ಕೆ ನಿಮ್ಮ ಪೋಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿರುವುದು ಕಾರಣ, ಗುಪ್ತದಳ ವಿಫಲವಾಗಿರುವುದು ಕಾರಣ. ಇದೇ ರೀತಿ ಆಳಂದ್‌ನಲ್ಲೂ ಕೂಡ ಆಗಿದೆ. ಅಲ್ಲೂ ಕೂಡ ಏನಾಯಿತು ಎಂದರೆ ಅಲ್ಲಿ ಕಾರು ಹುಣಿಮೆ ಹಬ್ಬ ಆಚರಣೆ ಮಾಡತಕ್ಕದ್ದು ಇದೆ. ಅಲ್ಲಿಗೆ ಬಾಂಬೆಯಿಂದ ಕೆಲವು ಜನ ಬರುತ್ತಾರೆ. ಆಳಂದದವರು ಬಾಂಬೆಯಲ್ಲಿ ವಾಸ ಮಾಡುತ್ತಾರೆ. ಬೊಂಬಾಯಿಯಿಂದ ಕಾರು ಹುಣಿಮೆ ಹಬ್ಬಕೋಸ್ಕರ ಬರುತ್ತಾರೆ. ಆಳಂದದಲ್ಲಿ ೩ ಜನ ಸತ್ತವರು ಏನಿದ್ದಾರೆ ಆ ಮೂರು ಜನರು ಬಾಂಬೆಯಿಂದ ಹಬ್ಬ ನೋಡಲಿಕ್ಕೆ ಬಂದವರು. ಅವರು ಸತ್ತು ಹೋದರು. ಅವರಿಗೆ ೨೦–೨೫–೩೦ ವರ್ಷ. ಸಾಮಾನ್ಯವಾಗಿ ಕಿಡಿಗೇಡಿಗಳು ಗುಂಡಿಗೆ ಸಿಕ್ಕುವುದಿಲ್ಲ. ಅವರು ಬಂದೂಕು, ಗುಂಡನ್ನು ನೋಡಿಕೊಂಡೇ ವ್ಯವಹಾರ ಮಾಡುತ್ತಾರೆ. ಹೀಗಾಗಿ ನಿರಪರಾಧಿಗಳು ಗುಂಡಿಗೆ ಎದುರಾಗಿ ಸಿಕ್ಕಿಹಾಕಿಕೊಳ್ಳುತ್ತಾರೆ. ನಿರಪರಾಧಿಗಳಿಗೆ ಗುಂಡು ತಾಗಿ ಸಾವಿನಲ್ಲಿ ಅಂತಿಮವಾಗುತ್ತದೆ. ಅದು ಎತ್ತಿನ ಬಂಡಿ ಹಬ್ಬ. ಅಲ್ಲಿ ಎತ್ತಿನ ಬಂಡಿಗಳಿಗೆ ಕಾಂಪಿಟಿಷನ್ ನಡೆಯುತ್ತದೆ. ಒಬ್ಬರಿಗೊಬ್ಬರಿಗೆ ಬೇಕಾದಷ್ಟು ಕಾಂಪಿಟಿಷನ್ ನಡೆಯುತ್ತದೆ, ಆ ಗಾಡಿ ಮುಂದೆ, ಈ ಗಾಡಿ ಮುಂದೆ ಎಂದು ಪೈಪೋಟಿ ನಡೆಯುತ್ತದೆ. ಇದು ಗ್ರಾಮಾಂತರ ಪ್ರದೇಶದಲ್ಲಿ ಅನುಚಾನವಾಗಿ ನಡೆದುಕೊಂಡು ಬಂದಿರತಕ್ಕ ಕಾರುಹುಣಿಮೆ ಹಬ್ಬ. ಇವೊತ್ತು ಆಳಂದ್ ಪಾಪ್ಯುಲೇಷನ್ ನೋಡಿದಾಗ ೪೦–೫೦ ಸಾವಿರ ಜನಸಂಖ್ಯೆ ಇರಬಹುದು, ಆಳಂದ್ ಟೌನ್ ದೊಡ್ಡ ಪಟ್ಟಣವೇ. ಸುಮಾರಾಗಿ ನನಗೆ ಗೊತ್ತಿರುವ ಹಾಗೆ ಒಂದು ಕೋಮು ೫೦ ಪರ್ಸೆಂಟ್, ಮತ್ತೊಂದು ಕೋಮು ೫೦ ಪರ್ಸೆಂಟ್ ಇರಬಹುದು ಎಂದು ಅಂದಾಜು. ಗುಲ್ಬರ್ಗ ಜಿಲ್ಲೆಯ ಜನರು, ಆಳಂದ್ ತಾಲ್ಲೂಕಿನವರು, ಈ ಗಲಭೆಗೆ ತುತ್ತಾಗಿ ಪೆಟ್ಟು ತಿಂದವರು ಹೇಳಿರತಕ್ಕ ಮಾತು, ಇದಕ್ಕೆ ಏನಾದರೂ ಕೋಮು ಭಾವನೆ ಹಚ್ಚಿ ಬಿಟ್ಟರೆ ಕಂಟ್ರೋಲ್ ಮಾಡುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಬರುತ್ತದೆ, ಲೋಕಲ್ ಪೋಲೀಸರು ಆ ದಿನ ತಕ್ಷಣ ಕಂಟ್ರೋಲ್ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿ ಗುಂಡು ಹಾರಸಿರತಕ್ಕಂಥಾದ್ದು. ಸಾಮಾನ್ಯವಾಗಿ ಕಂಟ್ರೋಲ್ ಮಾಡಿದರೆ ಇದು ಹತೋಟಿಗೆ ಬರುತ್ತದೆ. ಸರ್ಕಲ್ ಇನ್‌ಸ್ಪೆಕ್ಟರ್ ಆಫ್ ಪೋಲೀಸ್ ಅವರ ಆಫೀಸ್ ಅಲ್ಲೇ ಇದೆ. ಇದು ಪ್ರತಿವರ್ಷ ನಡೆಯತಕ್ಕ ಹಬ್ಬ. ಆದರೆ ಇಂತಹ ಘಟನೆ ನನಗೆ ಗೊತ್ತಿರುವ ಹಾಗೆ ಹಿಂದೆಂದೂ ನಡೆದಿಲ್ಲ. ಹೈದರಾಬಾದ್-ಕರ್ನಾಟಕದವರಾದ ಮಾನ್ಯ ಧರ್ಮಸಿಂಗ್ ಅವರು, ಮಾನ್ಯ ಖಾರ್ಗೆಯವರು ಹೇಳಬೇಕು. ಹೈದರಾಬಾದ್ ಕರ್ನಾಟಕದಲ್ಲಿ ಗೋಲಿಬಾರ್ ಆಗಿ ಸತ್ತಿರತಕ್ಕಂಥಾದ್ದು ಇದೇ ಮೊದಲು. ನನಗೆ ನೆನಪಿದ್ದ ಹಾಗೆ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಹಿಂದೆಂದೂ ಕೂಡ ಗೋಲೀಬಾರ್ ಆಗಿರಲಿಲ್ಲ. ಬೀದರ್, ಗುಲ್ಬರ್ಗ ಮತ್ತು ರಾಯಚೂರಿಗೆ ಸೀಮಿತಗೊಳಿಸಿ ನಾನು ಹೇಳುತ್ತಾ ಇದ್ದೇನೆ.

ಉಪಾಧ್ಯಕ್ಷರು.—ಒಂದು ಗಂಟೆ ಪೂರ್ಣ ನೀವೇ ಮಾತನಾಡುತ್ತೀರಾ ಹೇಗೆ ? ಬೇರೆಯವರು ನೋಟೀಸ್ ಕೊಟ್ಟವರು ಜಾಸ್ತಿ ಜನ ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಿಲ್ಲಿಸಬೇಕು ಎಂದರೆ ನಿಲ್ಲಿಸಿ ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು.—ನಿಮ್ಮ ಇಷ್ಟ. ನೀವು ಹೆಚ್ಚು ಸಮಯ ತೆಗೆದುಕೊಂಡರೆ ನಿಮ್ಮ ಪಕ್ಷದ ಸದಸ್ಯರಿಗೇ ಕಡಿಮೆಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನನ್ನ ಇಷ್ಟವಾದರೆ ರಾತ್ರಿ ೧೧ ಗಂಟೆವರೆಗೆ ಸಭೆಯನ್ನು ಕೂರಿಸುತ್ತೇನೆ.

ಉಪಾಧ್ಯಕ್ಷರು.—ಪೂರ್ಣಕಾಲ ನೀವೇ ತೆಗೆದುಕೊಂಡರೆ ನನ್ನ ಅಭ್ಯಂತರವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹೈದರಾಬಾದ್ ಕರ್ನಾಟಕಕ್ಕೆ ಸೀಮಿತಗೊಳಿಸಿ ಹೇಳುವುದಾದರೆ ಮೊದಲನೇ ಸಾರಿ ಜನತಾ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಗೋಲೀಬಾರ್ ಮಾಡಿ ಜನರನ್ನು ಸಾಯಿಸಿದವರು. ಹೈದರಾಬಾದ್ ಕರ್ನಾಟಕದಲ್ಲಿ ಎಂದರೆ ಬೀದರ್, ಗುಲ್ಬರ್ಗ, ರಾಯಚೂರುಗಳಲ್ಲಿ ಹಿಂದೆ ಗೋಲೀಬಾರ್ ಆಗಿರಲಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಕಾಂಗ್ರೆಸ್ ಪಕ್ಷದಲ್ಲಿದ್ದಾಗ ಏನಾದರೂ ಗೋಲೀಬಾರ್ ಆಗಿದ್ದರೆ, ಅದನ್ನು ಮರೆತಿದ್ದರೆ ಆ ಪ್ರಶ್ನೆ ಬೇರೆ, ನನಗೆ ಗೊತ್ತಿರುವ ಹಾಗೆ ಇಲ್ಲ. ಅವರು ಎರಡನೆಯ ಸಾರಿ ಹಣಕಾಸಿನ ಸಚಿವರಾದಾಗ ೧೯೬೭ನೇ ಇಸವಿಯಲ್ಲಿ ನಾನು ಶಾಸನಸಭೆಗೆ ಕಾಲಿಟ್ಟೆ. ಆಗಿನಿಂದಲೂ ನನಗೆ ಗೊತ್ತಿರುವ ಹಾಗೆ ಇಲ್ಲ. ತಮ್ಮ ಸರ್ಕಾರದಲ್ಲಿ ಗೋಲೀಬಾರ್ ಮಾಡಿ ಆಳಂದ್‌ನಲ್ಲಿ, ಗುಲ್ಬರ್ಗ ಜಿಲ್ಲೆಯಲ್ಲಿ ಈ ಸಾರಿ ೩ ಜನರನ್ನು ಬಲಿ ತೆಗೆದುಕೊಂಡಿದ್ದೀರಿ, ಮಾನ್ಯ ಸಭಾಧ್ಯಕ್ಷರೆ, ರಾಮನಗರದಲ್ಲಿ ಇರಬಹುದು, ಆಳಂದ್‌ನಲ್ಲಿ ಇರಬಹುದು. ಬೆಳಗಾಂನಲ್ಲಿ ಇರಬಹುದು ಕಿಡಿಗೇಡಿಗಳು ಸತ್ತಿಲ್ಲ, ನಿರಪರಾಧಿಗಳು ಸತ್ತು ಹೋಗಿದ್ದಾರೆ ಎನ್ನತಕ್ಕ ವಿಚಾರ ಸ್ಪಷ್ಟವಾಗಿ ನಮಗೆ ಗೊತ್ತಾಗಿರತಕ್ಕಂಥಾದ್ದು. ಮೈನಾರಿಟೀಸ್ ಯಾರು ಯಾರು ಇದ್ದಾರೆ ಅವರಿಗೆ ರಕ್ಷಣೆ ಕೊಡತಕ್ಕ ವಿಚಾರದಲ್ಲಿ ವಿಫಲರಾಗಿದ್ದೀರಿ. ರಾಮನಗರ, ಆಳಂದ್, ಇಂತಹ ಭಾಗದಲ್ಲಿ ಭಾಷಾ ಅಲ್ಪ ಸಂಖ್ಯಾತರಿದ್ದಾರೆ, ಜನಸಂಖ್ಯಾ ದೃಷ್ಟಿಯಿಂದ ಅಲ್ಪ ಸಂಖ್ಯಾತರಿದ್ದಾರೆ ಅವರಿಗೆ ರಕ್ಷಣೆ ಕೊಡತಕ್ಕ ವಿಚಾರದಲ್ಲಿ ನಿಮ್ಮ ಸರ್ಕಾರ ವಿಫಲವಾಗಿದೆ ಎನ್ನತಕ್ಕದ್ದು ಎಲ್ಲರಿಗೂ ವಿಧಿತವಾಗಿರತಕ್ಕ ವಿಚಾರ. ಮಾನ್ಯ ಸಭಾಧ್ಯಕ್ಷರೆ, ನಾನು ಬೆಳಗಾಂ ಬಗ್ಗೆ ಒಂದು ಮಾತು ಹೇಳಬೇಕು. ಅಲ್ಲಿ ೧೨-೩೦ಕ್ಕೆ ಗೋಲಿಬಾರ್ ಆಗಿದೆ. ಅಲ್ಲಿ ಗುಪ್ತದಳ ಕೆಲಸ ಮಾಡಲಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇವೊತ್ತು ಕೋಮು ಭಾವನೆಗಳಿಗೆ ಎಡೆ ಕೊಡತಕ್ಕಂಥ ಪರಿಸ್ಥಿತಿ ಇದೆ. ಇವತ್ತು ಎಷ್ಟು ಲಾಸ್ ಮಾಡಿದ್ದಾರೆಂದರೆ ರಾಮನಗರದಲ್ಲಿ ೫೦ ಲಕ್ಷಕ್ಕೂ ಮೇಲ್ಪಟ್ಟು ಆಸ್ತಿಪಾಸ್ತಿ ನಷ್ಟವಾಗಿದೆ. ಅಂಗಡಿಗಳ ಲೂಟಿ ನಡೆದುಹೋಗಿದೆ. ಪರಿಹಾರ ಕೊಡತಕ್ಕ ವಿಚಾರದಲ್ಲಿ ನೀವು ಇನ್ನೂ ಕೂಡ ಅನೇಕ ಜನರಿಗೆ ಪರಿಹಾರ ಕೊಟ್ಟಿಲ್ಲ, ಅಧಿಕಾರಿಗಳಿಂದ ವರದಿ ಬರುವವರೆಗೆ ಪರಿಹಾರ ಕೊಟ್ಟಿಲ್ಲ ಎನ್ನತಕ್ಕಂಥಾದ್ದು, ಮಹಜರ್ ಇದೆಲ್ಲಾ ಮಾಡಬೇಕು, ಸರಿಯಾದ ರೀತಿಯಲ್ಲಿ ಮಾಡಿಯೇ ಇಲ್ಲ ಎನ್ನುವ ವಿಚಾರ ಸ್ಪಷ್ಟವಾಗಿ ಬಂದಿದೆ. ಅದೇ ರೀತಿ ಆಳಂದ್‌ನಲ್ಲಿ ನಡೆದಿರತಕ್ಕ ಘಟನೆ ವಿಚಾರದಲ್ಲೂ ನೋಡಿದರೆ ಪೆಟ್ರೋಲ್ ಹಾಕಿ ಸುಡತಕ್ಕ ಮಟ್ಟಕ್ಕೆ ಜನರು ಹೋಗಿದ್ದಾರೆ. ಈ ಒಂದು ಮಟ್ಟಕ್ಕೆ ಜನರು ಹೋದಾಗ ಪೋಲೀಸರು ಏನು ಮಾಡುತ್ತಿದ್ದರು ಎನ್ನತಕ್ಕ ಪ್ರಶ್ನೆಯನ್ನ ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಆಳಂದ್ ಬಗ್ಗೆ ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಮಾಡಲಾಗುವುದು ಎಂದು ಡೆಪ್ಯುಟಿ ಕಮಿಷನರ್ ಹೇಳಿದರು. ಕೊನೆಗೆ ಜುಡಿಶಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಕಾನೂನು ಬದ್ಧವಾಗಿ ಮಾತನಾಡುವ ಹಾಗಿದ್ದರೆ ಅದಕ್ಕಿಂತ ದೊಡ್ಡ ಎನ್‌ಕ್ವೈರಿ ಇಲ್ಲ ನಮಗೆ. ಕರ್ನಾಟಕ ರಾಜ್ಯದಲ್ಲಿ ಮೈನಾರಿಟೀಸ್ ಯಾರಿದ್ದಾರೆ ಅವರಿಗೆ ಏನು ತೊಂದರೆಯಾಗಿದೆ ಎನ್ನುವುದರ ಬಗ್ಗೆ, ಘಟನೆಗಳ ಬಗ್ಗೆ ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳಿ. ನಿಮ್ಮ ಪೋಲೀಸ್ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ, ಪೋಲೀಸ್ ಇಲಾಖೆಯಿಂದ ಆಗಿರತಕ್ಕ ಆ ಧಾಳಿ ಎಲ್ಲಾ ವರ್ಗದ ಅಂದರೆ ಬಡವರ್ಗ, ಜನಸಾಮಾನ್ಯರು, ಅಲ್ಪಸಂಖ್ಯಾತರು, ಹರಿಜನ–ಗಿರಿಜನರು, ರೈತವರ್ಗ, ಜಾತಿ ಜಾತಿಗಳ ಮೇಲೆ ಏನಾಗಿದೆ ಅದನ್ನು ಸ್ವಲ್ಪ ಚಿಂತನಚಿಲುಮೆಯಲ್ಲಿ ಹಾಕಿ ಕಲಕಿ ನೋಡಿ ಅದರಿಂದ ಏನಾದರೂ ಹೊರಗೆ ಬರುತ್ತದೆಯೋ ಎಂದು ನೋಡಬಹುದಿತ್ತು. ಅದರಲ್ಲಿ ಲಿಂಗಾಯಿತರಿದ್ದಾರೆ, ಒಕ್ಕಲಿಗರಿದ್ದಾರೆ, ಹರಿಜನಗಿರಿಜನರಿದ್ದಾರೆ ಮುಸಲ್ಮಾನ ಭಾಂಧವರಿದ್ದಾರೆ, ಕ್ರಿಶ್ಚಿಯನ್‌ರಾದಿಯಾಗಿರಾದ್ದಾರೆ. ಇದು ಅವ್ಯಾಹತವಾಗಿ ನಡೆಯುತ್ತಿದೆ. ನಿಮ್ಮಲ್ಲಿರತಕ್ಕಂತಹ ಅಧಿಕಾರ ದುರುಪಯೋಗವಾಗಿ ಇದು ಸ್ಪಷ್ಟ

ವಾಗಿ ನಡೆದಿದೆಯೆಂದೂ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆಳಂದ್ ಟೌನ್ ಬಗ್ಗೆ ಕೆಲವು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಕೆಲವು ರಾಜಕೀಯವಾಗಿ, ನಿಮ್ಮ ಪಕ್ಷದವರಲ್ಲ, ನಮ್ಮ ಪಕ್ಷದವರೂ ಅಲ್ಲ. ಕೆಲವು ರಾಜಕೀಯ ಪಕ್ಷಕ್ಕೆ ಸೇರಿರತಕ್ಕಂತಹವರೆಂದು ಹೇಳಿದರೆ ಮತ್ತೆ ಗಲಾಟೆಯಾಗಿ ನಾಳೆ ಪತ್ರಿಕೆಯಲ್ಲಿ ಬರಬಹುದು. ಕೆಲವರು ಇದಕ್ಕೆ ಕಾರಣಕರ್ತ ರಾಗಿದ್ದಾರೆಂದು ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆ. ನಾನು ನೋಡಿದ ಮಟ್ಟಿಗೆ ಮಾನ್ಯ ರಾಚಯ್ಯನವರ ಸ್ವಭಾವವೇನೆಂದರೆ '' ಮಾರಿ ಕಣ್ಣು ಹೋತನ ಮೇಲೆ '' ಎಂದ ಹಾಗೆ, ಒಂದೇ ಸಾರಿಗೆ ನಮಗೆ ಗೊತ್ತು ರಾಜಕೀಯವಾಗಿ ಯಾರಿದ್ದಾರೆಂದು ಬಹಳ ದಿವಸದಿಂದ ಹೇಳುತ್ತಿದ್ದಾರೆ. ಮಾರಿ ಕಣ್ಣು ನಿಮ್ಮ ಸರ್ಕಾರ, ಹೋತದ ಮೇಲೆ ಎಂದರೆ ಕಾಂಗ್ರೆಸ್ ಪಕ್ಷದ ಮೇಲೆ ಎಂದು ಗೊತ್ತಿದೆ ನೀವು ಯಾರೂ ತಿಳಿದುಕೊಳ್ಳದೇ ಇರತಕ್ಕ ಹೊಸ ವಿಚಾರಧಾರೆಯನ್ನು ಈ ಶಾಸನ ಸಭೆಯಲ್ಲಿ ಪ್ರಸ್ತಾಪ ಮಾಡಿದರೆ ಅದಕ್ಕೆ ಬತ್ತಿ ಇಡತಕ್ಕಂತಹ ವಿಚಾರ ಬೇಡ. ನಿಮ್ಮ ವರದಿಯಲ್ಲಿ ಕಾರಣಕರ್ತರಿದ್ದರೆ ಸದನಕ್ಕೆ ತಿಳಿಸಬೇಕೆಂದೂ. ಇನ್ನು ಹೆಚ್ಚಿನ ವಿವರಗಳಿಗೆ ಹೋಗದೆ ಕೆಲವು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಯ ಪಕ್ಷ ಇನ್ನು ಮೇಲಾದರೂ ಕೂಡ ಕರ್ನಾಟಕದಲ್ಲಿರ ತಕ್ಕಂತಹ ಅಲ್ಪಸಂಖ್ಯಾತರು ಯಾರ್‍ಯಾರಿದ್ದಾರೆ ಅವರಿಗೆ ರಕ್ಷಣೆ ಕೊಡತಕ್ಕಂತಹ ವಿಚಾರದಲ್ಲಿ ಹೃದಯ ವಿಟ್ಟು ತೀರ್ಮಾನ ಮಾಡಿ. ಎಲ್ಲೆಲ್ಲಿ ಶಾಂತಿ ಸಮಿತಿಗಳು ಇರಬೇಕು ಅದನ್ನು ರಚನೆ ಮಾಡತಕ್ಕಂತಹ ಜವಾಬ್ದಾರಿಯನ್ನು ಹೊರಬೇಕು. ಇದರ ಕಡೆಗೆ ತತ್‌ಕ್ಷಣ ಗಮನ ಕೊಡಬೇಕು. ಇದನ್ನೆಲ್ಲಾ ಮೊಳಕೆಯಲ್ಲೇ ಚಿವುಟಿ ಹಾಕಬೇಕು. ಗುಪ್ತ ದಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡತಕ್ಕಂತಹ ಜವಾಬ್ದಾರಿಯನ್ನು ಈಗಲಾದರೂ ಹೊರಬೇಕೆಂಬ ಸೂಚನೆಯನ್ನು ಕೊಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಮಾನ್ಯ ಉಪಾಧ್ಯಕ್ಷರೆ, ನಿನ್ನೆಯ ದಿವಸ ಕೆಲವು ಮಾನ್ಯ ಸದಸ್ಯರುಗಳು ನಿಲುವಳಿ ಸೂಚನೆಯನ್ನು ಈ ಸದನದ ಮುಂದೆ ಇಟ್ಟಾಗ ಅದನ್ನು ಈ ದಿವಸ ವಿವರವಾಗಿ ಇಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ವಂದನೆಗಳು. ಇತ್ತೀಚೆಗೆ ರಾಮನಗರ, ಆಳಂದ ಮತ್ತು ಬೆಳಗಾಂ ಜಿಲ್ಲೆಯಲ್ಲಿ ನಡೆದಂತಹ ಘಟನೆಗಳ ವಿಚಾರವಾಗಿ ಬಹಳ ವಿವರವಾಗಿ ವಿಶ್ಲೇಷಣೆಯನ್ನು ಸನ್ಮಾನ್ಯ ಸದಸ್ಯರಾದಂತಹ ಬಂಗಾರಪ್ಪನವರು ಮಾಡಿದ್ದಾರೆ. ನಾನು ಅವರು ಹೇಳಿದಂತಹ ವಿಚಾರಗಳನ್ನು ಮತ್ತೆ ಪುನರ್ ಉಚ್ಚರಿಸಲಿಕ್ಕೆ ಹೋಗುವುದಿಲ್ಲ. ಏಕೆಂದರೆ ಅದರ ಬಗ್ಗೆ ಸಾಕಷ್ಟು ವಿಸ್ತಾರವಾಗಿ ಅವರು ಹೇಳಿದ್ದಾರೆ ಮತ್ತು ಈ ಘಟನೆಗಳ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿ ಬೇರೆ ಅನೇಕ ಸದಸ್ಯರು ಮಾತನಾಡುವವರಿದ್ದಾರೆ. ಬೆಳಗಾಂ ಜಿಲ್ಲೆಯಿಂದ, ಗುಲ್ಬರ್ಗಾ ಜಿಲ್ಲೆಯಿಂದ ಬಂದಿರತಕ್ಕಂತಹ ಶ್ರೀ ಧರ್ಮಸಿಂಗ್‌ರವರು, ಶ್ರೀ ವೆಂಕಟರಾಮಯ್ಯನವರು, ಶ್ರೀ ಎಂ.ಎಸ್. ಕೃಷ್ಣನ್‌ನವರು ಹಾಗೂ ಆ ಕಡೆ ಇರತಕ್ಕ ಸದಸ್ಯರೂ ಕೂಡ ಮಾತನಾಡುವವರು ಇರುವುದರಿಂದ ನಾನು ಕೆಲವು ಸೂಕ್ಷ್ಮ ವಿಚಾರಗಳಿಗೆ ಮಾತ್ರ ನನ್ನ ವಿಶ್ಲೇಷಣೆಯನ್ನು ಸೀಮಿತಗೊಳಿಸುತ್ತೇನೆ. ಈ ಮೂರು ಘಟನೆಗಳು ಒಂದು ರೀತಿಯಲ್ಲಿ ಏಕ ಸಮಾನವಾಗಿ ಇರತಕ್ಕಂತಹ ಘಟನೆಗಳು. ಆಳಂದ್, ರಾಮನಗರದ ಘಟನೆಗಳು ಮತೀಯ ಅಲ್ಪ ಸಂಖ್ಯಾತರಿಗೆ ಸಂಬಂಧಪಟ್ಟಿದ್ದುದು. ಬೆಳಗಾಂನಲ್ಲಿ ನಡೆದಿರತಕ್ಕಂತಹ ಘಟನೆಗಳು ಭಾಷಾ ಅಲ್ಪ ಸಂಖ್ಯಾತರಿಗೆ ಸಂಬಂಧಿಸಿದ್ದುದು. ಈಗ ಇದನ್ನು ಬರೀ ಒಂದು ಪೋಲೀಸ್ ಕುಸಿತವಾಗಿದೆ ಅಥವಾ ಒಂದು ಕಾನೂನು ವ್ಯವಸ್ಥೆಯಲ್ಲಿ ಸರಿಯಿಲ್ಲ ಅಥವಾ ಯಾರೇ ಕೆಲವು ಅಧಿಕಾರಿಗಳು ಕೇವಲ ಅವರ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಿಲ್ಲ. ಇಷ್ಟಕ್ಕೇ ನಾವು ಈ ವಾದವನ್ನು ಕೊನೆಗೊಳಿಸುವುದಿದ್ದರೆ ಅಥವಾ ಈ ವಿಶ್ಲೇಷಣೆಯಿಂದ ಇಲ್ಲವೇ ಸರ್ಕಾರ ಕೊಡತಕ್ಕ ಉತ್ತರದಿಂದ ನಾವು ತೃಪ್ತಿಪಟ್ಟುಕೊಂಡು ಕುಳಿತುಕೊಳ್ಳುವುದಿದ್ದರೆ, ಈ ವಿಚಾರಗಳನ್ನು ಚರ್ಚೆ ಮಾಡುವುದರಿಂದ ಈ ಸದನದ ಸಮಯವು ಸದುಪಯೋಗವಾಗುವುದಿಲ್ಲ. ಇದೊಂದು ವ್ಯಾಪಕವಾದಂತಹ ಪ್ರಶ್ನೆ ಅದರ ಸರಿಯಾದಂತಹ ವಿಚಾರದ ವಿಚಕ್ಷಣೆ ಈ ಸದನದ ಮುಂದೆ ಬಾರದೇ ಇದ್ದರೆ, ಇದರಿಂದಾಗಿ ಕರ್ನಾಟಕ ರಾಜ್ಯದ ಜನತೆ ಯಲ್ಲಿ, ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರಲ್ಲಿ ಒಂದು ರೀತಿಯಾದಂತಹ ಮನಸ್ಸಿಗೆ ನೆಮ್ಮದಿಯನ್ನು ಮತ್ತು ಸ್ಥಿರತೆಯನ್ನು ತಂದುಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಮಾಡತಕ್ಕಂತಹ ಈ ವಿಶ್ಲೇಷಣೆ ಸಹಕಾರಿಯಾಗಬೇಕು. ಸರ್ಕಾರ ಕೊಡತಕ್ಕಂತಹ ಉತ್ತರ ಕೂಡ ಸಮರ್ಪಕವಾದಂತಹ ಕಾರ್ಯಕ್ರಮವನ್ನು ಮಾಡಿದ್ದೇವೆಂದು ಹೇಳುವ ಮಟ್ಟಿಗೆ ಅಥವಾ ಪತ್ತೋಟಿಗೆ ತಂದಿದ್ದೇವೆಂದು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತಾವು ಬೆನ್ನು ಚಪ್ಪರಿಸಿಕೊಳ್ಳುತಕ್ಕಂತಹ ಒಂದು ರೀತಿಯಲ್ಲಿ ಮಾತನಾಡಿದರೆ ಅದು ಬಹಳ ಸೂಪರ್ ಫಿಷಿಯಲ್ ಆಗಬಹುದು. ಮತ್ತು ಮೂಲಭೂತವಾದಂತಹ ಸಮಸ್ಯೆಗಳನ್ನು ಪರಿಹಾರ ಮಾಡ ತಕ್ಕಂತಹ ಒಂದು ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ಆಗಿದೆಯೆಂದು ಹೇಳುವುದಕ್ಕೆ ನಮಗೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ. ರಾಮನಗರದ ವಿಚಾರಕ್ಕೆ ಹೋಗುವ ಮೊದಲು ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಮೂರು ಘಟನೆಗಳು ರಾಜಕೀಯ ಅಥವಾ ಸಾಮಾಜಿಕವಾದಂತಹ ವ್ಯವಸ್ಥೆಯಲ್ಲಿ ಒಂದು ರೀತಿಯ ಅಲ್ಲೋಲಕಲ್ಲೋಲವಾಗಿದೆ. ಭಾಷಾ ಅಲ್ಪಸಂಖ್ಯಾತರಲ್ಲಿ ಅಥವಾ ಮತೀಯ ಅಲ್ಪಸಂಖ್ಯಾತರಿರಲಿ ಯಾವಾಗ ಒಂದು ರೀತಿಯ ರಾಜಕೀಯ ಗೊಂದಲವಾಗುತ್ತದೆ ಆಗ ರಾಜಕೀಯ ಅಭದ್ರತೆಯಿರುತ್ತದೆ ಅಥವಾ ಆಳತಕ್ಕಂತಹ ರಾಜಕೀಯಲ್ಲಿ ಶಕ್ತಿಯಲ್ಲಿ ಒಂದು ರೀತಿಯಾದ ಕುಸಿತವಾಗುತ್ತದೆ. ಆಗ ಇಂತಹ ಘಟನೆಗಳು ಕೆಲವು ಕಡೆ ಉದ್ಭವವಾಗುತ್ತವೆ. ಆ ಘಟನೆಗಳಿಂದ ಗೊಂದಲವಾಗುತ್ತದೆ. ಟೆನ್‌ಷನ್ ಇನ್‌ದಿ ಸೊಸೈಟಿ ವಿಲ್ ಡೆವಲಪ್. ಆದುದರಿಂದ ಈ ಒಂದು ಸುಭದ್ರತೆಯ ವಾತಾವರಣ, ಭರವಸೆಯ ವಾತಾವರಣವನ್ನು ಸರ್ಕಾರ ತಂದು ಆಡಳಿತ ವ್ಯವಸ್ಥೆಯಿಂದ ಇದನ್ನು ಸ್ಥಿರಗೊಳಿಸಲಿಕ್ಕೆ, ನಿಷ್ಫಲವಾದಾಗ, ವಾತಾವರಣದ ಗೊಂದಲ

(ಮಾನ್ಯ ಅಧ್ಯಕ್ಷರವರು ಪೀಠವನ್ನು ಅಲಂಕರಿಸಿದರು)

ವಾಗಿದೆ. ಅಲ್ಪಸಂಖ್ಯಾತರಿಗೆ ಸರ್ಕಾರ ಶಕ್ತಿ ಕೊಡಬೇಕಾಗುತ್ತದೆ, ಸಮಾಜ ಅವರಿಗೆ ಶಕ್ತಿ ಕೊಡಬೇಕಾಗುತ್ತದೆ. ತಾವು ನಿಂತ ನೆಲದಲ್ಲಿ ಎಲ್ಲಿ ಬಲವಿಲ್ಲ ಆಗ ಆ ನೆಲ ಕುಸಿಯುತ್ತದೆ ಎಂಬ ಭಯದ ವಾತಾವರಣ ಆ ಅಲ್ಪಸಂಖ್ಯಾತರಲ್ಲಿ ಬಂದಾಗ ಈ ಎಲ್ಲಾ ಗೊಂದಲಗಳಿಗೆ ಕಾರಣವಾಗುತ್ತದೆ. ಅಲ್ಲಿ ರಕ್ಷಣಾ ಮನೋಭಾವ, ರಕ್ಷಣೆಯ ವಾತಾವರಣವನ್ನು ಕಲ್ಪನೆ ಮಾಡಲಿಕ್ಕೆ ಸರ್ಕಾರದಲ್ಲಿ ಸಾಧ್ಯವಿದ್ದರೆ ಈ ಗೊಂದಲವಾಗುವುದಿಲ್ಲ, ಈ ತೊಂದರೆಯಾಗುವುದಿಲ್ಲ. ರಾಮನಗರದ ವಿಚಾರವಲ್ಲಿ ಒಂದೆರಡು ಮೂರು ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

೪-೦೦ ಪಿ. ಎಂ.

ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಸ್ವಂತವಾಗಿ ಅಥವಾ ರಾಜಕೀಯವಾಗಿ ಈ ಸದನದ ಮುಂದೆ ಇಡಬೇಕೆಂಬುದು ಖಂಡಿತ ಇಲ್ಲ. ಆದರೆ ಅದರ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ ಸರ್ಕಾರಕ್ಕೂ ಮತ್ತು ಸದನಕ್ಕೂ ಇದೆ. ಜುಲೈ ೨೭ನೇ ತಾರೀಖು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಈ ವಿಚಾರ ಬಂದಿದೆ. ಇಡೀ ದೇಶದಲ್ಲಿಯೇ ಇದು ಒಂದು ಪ್ರಾಮುಖ್ಯವಾದಂಥ ಪತ್ರಿಕೆ. ಇದರ ಮುಖಪುಟದಲ್ಲಿಯೇ ಒಂದು ವರದಿ ಬಂದಿದೆ. ಇದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ನೀವು ತೆಗೆದುಕೊಂಡಂಥ ಕಾರ್ಯಕ್ರಮದ ಬಗ್ಗೆ ನಮಗಂತೂ ವರದಿ ಬರಲಿಲ್ಲ, ರಾಮನಗರದ ಬಗ್ಗೆ ಜ್ಯುಡಿಷಿಯಲ್ ಪ್ರೋಬ್ ಮಾಡಿದ್ದೇವೆ ಎನ್ನುವುದು ಪತ್ರಿಕೆಯಲ್ಲಿ ಬಂತು. ತಾವು ಏನು ಕ್ರಮತೆಗೆದುಕೊಂಡಿದ್ದೀರಿ? ಇದರ ಬಗ್ಗೆ ಸರ್ಕಾರದ ಆದೇಶ ಏನಾಗಿದೆ ಎನ್ನುವುದು ಇದುವರೆಗೂ ಕಾಣಲಿಲ್ಲ. ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದೀರಿ, ಮಾನ್ಯ ಗೃಹಮಂತ್ರಿಗಳ ಹೇಳಿಕೆ ಕೂಡ ಇದೆ, ಇದರಲ್ಲಿ ಕೆಲವು ವಿಚಾರಗಳು ಮಾತ್ರ ಪ್ರಸ್ತಾಪವಾಗಿದೆ. Politics behind the Violance ಎಂದು ಟೈಟಲ್ ಕೊಟ್ಟಿದ್ದಾರೆ. ಕೋಮು ಕ್ಲೇಷ ಮಾಡಲಿಕ್ಕೆ ಯಾರಿಗೂ ಇಷ್ಟ ಇರುವುದಿಲ್ಲ. ಧಾರ್ಮಿಕ ಮನುಷ್ಯರು ಯಾರು ಇದನ್ನು ಮಾಡುವುದಿಲ್ಲ. ಒಂದು ಧರ್ಮದವರು ಮತ್ತೊಂದು ಧರ್ಮದ ಮೇಲೆ ಧಾಳಿ ಮಾಡಬೇಕೆಂದು ಯಾವ ಧರ್ಮದವರು ಹೇಳುವುದಿಲ್ಲ. ಕೆಲವು ಯಾರೋ ಪಟ್ಟಭದ್ರ ಹಿತಾಶಕ್ತಿಗಳು, ಕೆಲವು ಸ್ವಾರ್ಥಿಗಳು, ಸಮಾಜದಲ್ಲಿ ಗೊಂದಲ ಮಾಡಬೇಕು, ತನ್ಮೂಲಕ ಒಂದು ರೀತಿಯ ಪ್ರತಿಷ್ಟೆ ಗಳಿಸಬೇಕೆಂದು ಯಾರು ಇರುತ್ತಾರೆ ಅವರು ಕೇವಲ ಕೆಲವು ಮಂದಿ ಮಾತ್ರ ಇರುತ್ತಾರೆ. ನೂರಕ್ಕೆ ತೊಂಭ ತ್ತೊಂಭತ್ತು ಮಂದಿ ಇವೊತ್ತು ಸಮಾಜದಲ್ಲಿ ಸೌಹಾರ್ದ ಮನೋಭಾವದಿಂದ ಸಹೋದರ ಭಾತೃತ್ವ ಮನೋಭಾವದಿಂದ ಬದುಕಬೇಕೆಂದು ಇರುತ್ತಾರೆ. ಹಿಂದುಗಳಾಗಲೀ, ಮುಸ್ಲಿಂರಾಗಲಿ, ಸಿಖ್ಖರು ಆಗಲಿ, ಯಾರಿಗೂ ಸಹ ಕೋಮು ಕ್ಲೇಷ ಮಾಡಲಿಕ್ಕೆ ಇಷ್ಟ ಇರುವುದಿಲ್ಲ. ಇದರ ಹಿಂದೆ ಯಾವ ರೀತಿ ಇದೆ ಎನ್ನುವುದನ್ನು ಪತ್ರಿಕೆಯಲ್ಲಿ ವಿಶ್ಲೇಷಣೆ ಮಾಡಿ ಹೇಳಿದ್ದಾರೆ. ಪೊಲಿಟಿಕಲ್ ಲೆವಲ್‌ರಿ ಕಾಂಗ್ರೆಸ್, ಜನತಾ ಮಾತ್ರ ಅಲ್ಲ. ಇವೊತ್ತು ಅಲ್ಲಿ ರಾಜಕೀಯದ ಮೇಲ್ಮಟ್ಟವನ್ನು ಸಾಧಿಸಬೇಕೆಂದು ಒಂದು ಆಗಿದೆ. ಮೈನಾರಿಟೀಸ್ ನಲ್ಲಿಯೂ ಕೂಡ ಒಂದು ರೀತಿಯ ನಾಯಕತ್ವವನ್ನು ತೆಗೆದುಕೊಳ್ಳಬೇಕೆನ್ನುವುದು ಆಗಿದೆ. ಕೆಲವರು ತಮ್ಮ ಜನತಾ ಪಕ್ಷಕ್ಕೆ ಸೇರಿರಬಹುದು, ಹೆಚ್ಚಿನವರು ಕಾಂಗ್ರೆಸ್‌ಗೆ ಸೇರಿದ್ದಾರೆ. ಇದನ್ನೆಲ್ಲಾ ವಿಶ್ಲೇಷಣೆ ಮಾಡಿ ಹೇಳಿದ್ದಾರೆ. ತಾವು ಓದಬೇಕೆಂದರೆ ಕೆಲವು ಅಂಶಗಳನ್ನು ಓದುತ್ತೇನೆ,

"The conduct of some ruling partymen in Town just before and soon after violent incidents has given credence to the suspicion in Government circles that a deliberate attempt was made to increase tension between the two communities."

Ruling party is your party.

ಶ್ರೀ ರಾಮಕೃಷ್ಣ ಹೆಗಡೆ.—ಗುಜರಾತ್ ರಾಜ್ಯದಲ್ಲಿ ಆದಂಥ ಕೋಮುವಾರು ಗಲಭೆ ವಾರ ಗಟ್ಟಲೆ ನಡೆಯಿತು ಅದರ ಬಗ್ಗೆ ಆರ್ಟಿಕಲ್ ಬಂದಿದ್ದು ಓದಿದ್ದೀರೋ?

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಯಾವಾಗಲೂ ಡೆಲ್ಲಿಗೆ ಹೋಗುತ್ತಿರುತ್ತೀರಿ, ಕರ್ನಾಟಕ ಭವನದಲ್ಲಿ ತಮ್ಮ ಪಕ್ಷದ ಪಾರ್ಲಿಮೆಂಟ್ ಸದಸ್ಯರನ್ನು ಕರೆದು ಬ್ರೀಫ್ ಮಾಡುತ್ತಿರುತ್ತೀರಿ, ಇದನ್ನು ಅವರಿಗೆ ಹೇಳಿ. ಇವೊತ್ತು ತಾವು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಆಡಳಿತ ಮಾಡ ತಕ್ಕವರ ಜವಾಬ್ದಾರಿ ಏನು? ರಾಮನಗರದ ಕಮ್ಯುನಲ್ ಗಲಭೆಗೆ ಕಾರಣರಾದವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಅಲ್ಲಿರತಕ್ಕ ಮೈನಾರಿಟೀಸ್‌ಗೆ ಏನು ರಕ್ಷಣೆ ಮಾಡಿದ್ದೀರಿ. ಇದು ನಮಗೆ ಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ರಾಮನಗರ ಟೌನ್‌ನಲ್ಲಿ ನಮ್ಮ ಪಕ್ಷಕ್ಕಿಂತಲೂ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಬೆಂಬಲ ಇದೆ, ಹೆಚ್ಚಿನ ಕಾರ್ಯಕರ್ತರು ಇದ್ದಾರೆಂದು ತಾವು ತಿಳಿಸಿದಿರಿ. ೧೯೮೪ನೇ ಲೋಕಸಭಾ ಚುನಾವಣೆಯಲ್ಲಿ ನಾನು ಅಭ್ಯರ್ಥಿಯಾಗಿದ್ದು ಆ ಕ್ಷೇತ್ರದಲ್ಲಿ ಸೋತೆ. ಆದರೆ ರಾಮ ನಗರ ಟೌನ್‌ನಲ್ಲಿ ಕಾಂಗ್ರೆಸ್‌ಗಿಂತಲೂ ಮೂರು ಸಾವಿರ ಓಟು ನನಗೆ ಹೆಚ್ಚಾಗಿ ಬಂದಿದೆ. ಕಾಂಗ್ರೆಸ್‌ಗೆ ಹೆಚ್ಚು ಬೆಂಬಲ ಇದೆ ಎಂದು ಹೇಗೆ ಹೇಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ.—೧೯೮೫ರಲ್ಲಿ ಕಾಂಗ್ರೆಸ್‌ಗೆ ಹೆಚ್ಚಿಗೆ ಬಹುಮತ ಬಂದಿದೆ. ಇದನ್ನು ತಾವು ನೋಡಬೇಕು, ೧೯೮೬ರಲ್ಲಿ ಈ ಘಟನೆ ನಡೆದಿರತಕ್ಕದ್ದು. ೧೯೮೪ರಲ್ಲಿ ಈ ಘಟನೆ ನಡೆಯಲಿಲ್ಲ. ೧೯೮೫ರ ಅಸೆಂಬ್ಲಿ ಚುನಾವಣೆಯ ನಂತರ ನಡೆದಿದೆ. ರಾಮನಗರ ಟೌನ್‌ನಲ್ಲಿ ಕಾಂಗ್ರೆಸ್‌ಗೆ ಅತಿ ಹೆಚ್ಚಿನ ಬಹುಮತ ಬಂದಿದೆ. ಇದು ವಾದಕ್ಕೋಸ್ಕರ ಇಡತಕ್ಕ ವಿಚಾರ ಅಲ್ಲ, ಇನ್‌ಸಿಡೆಂಟಲಿ ಹೇಳಿದೆ, ಈ ಘಟನೆಯ ಮೊದಲು, ಘಟನೆಯ ಸಂದರ್ಭ, ಘಟನೆಯ ಅನಂತರ ರಾಮನಗರ ಟೌನ್ ನಲ್ಲಿ ಏನು ನಡೆಯಿತು ಅದರ ವಿಚಾರ ಹೇಳುತ್ತಿದ್ದೇನೆ. ಪತ್ರಿಕೆಯಲ್ಲಿ ಹೇಳದೇ ಇರತಕ್ಕ ಒಂದು ಶಬ್ದವನ್ನೂ ಕೂಡ ನಾನು ಹೇಳುತ್ತಿಲ್ಲ. I completely refer to this document. If you want to falsify it is for you prosecute these people. ಪೂರ್ವಗ್ರಹ ಪೀಡಿತರಾಗಿ ನಿಮ್ಮ ಪಕ್ಷಕ್ಕೆ ಕೆಟ್ಟ ಹೆಸರು ತರಬೇಕೆಂದು ಪತ್ರಿಕೆಯಲ್ಲಿ ಬಂದಿದೆಯೋ, ಅದರ ಬಗ್ಗೆ ತಮ್ಮ ಹೇಳಿಕೆ ಏನೂ ಬರಲಿಲ್ಲ. ಅದು ತಮಗೆ ಬಿಟ್ಟಿದ್ದು. ಈ ವಿಚಾರದಲ್ಲಿ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ಕಮ್ಯುನಲ್ ಟ್ರಬಲ್ ಏತಕ್ಕೆ ಆಯಿತು? ಇವೊತ್ತು ಆಡಳಿತ ಮಾಡತಕ್ಕ ಪಕ್ಷ, ಒಂದು ವಿಶೇಷ ರೀತಿಯ ಪ್ರಭಾವ ಮತ್ತು ಅವರ ಒಂದು ಹಸ್ತಕ್ಷೇಪದಿಂದ ಕಮ್ಯುನಲ್ ಡಿಸ್ಟರ್ಬೆನ್ಸ್ ಆಗಿದ್ದರೆ ಅದಕ್ಕೆ ಯಾರು ಜವಾಬ್ದಾರರು? ತಾವು ಏನು ಕ್ರಮ ತೆಗೆದು ಕೊಳ್ಳುತ್ತೀರಿ. ಕಾರಣಕರ್ತರಾದವರಿಗೆ ನಿರ್ದಾಕ್ಷಿಣ್ಯವಾಗಿ ದಂಡಿಸತಕ್ಕದ್ದು, ಅವರ ಮೇಲೆ ಪೋಲೀಸ್ ಕೇಸ್ ಹಾಕತಕ್ಕದ್ದನ್ನು ಅಧಿಕಾರದಲ್ಲಿರತಕ್ಕವರು ತೋರಿಸಬೇಕಾಗುತ್ತದೆ. ಜ್ಯುಡಿಷಿಯಲ್ ಎನ್‌ಕ್ವಯಿರಿ ಮಾಡುತ್ತೀರಿ, ಆದರೆ ಘಟನೆಯ ಹಿನ್ನೆಲೆಯ ಬಗ್ಗೆ ಯಾರು ಪ್ರಚೋದನೆ ಮಾಡಿದ್ದಾರೆ ಅದು ಬರುವುದಿಲ್ಲ. You should have prosecuted the people. You can still prosecute those people who were responisible under Indian Penal Code.

ಶ್ರೀ ರಾಮಕೃಷ್ಣ ಹೆಗಡೆ.—ನ್ಯಾಯಾಂಗ ತನಿಖೆ ಮಾಡುವುದು ನಿಷ್ಪಕ್ಷಪಾತವಾಗಿ ವಿಚಾರಣೆ ಯಾಗಬೇಕೆಂದು ಮಾಡುವುದು. ಅದರಲ್ಲಿ ಯಾರು ತಪ್ಪಿತಸ್ಥರು ಎಂನು ಅಭಿಪ್ರಾಯ ಬರುತ್ತದೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಆಡಳಿತಾತ್ಮಕ ವಿಷಯ. You have to prosecute the people who have committed this culpable, and homicidal act in promoting and abetting the offence under IPC.

ಅದನ್ನು ಇಂಪ್ಲಿಮೆಂಟ್ ಮಾಡಬಹುದು, ಅಥವಾ ಬಿಡಬಹುದು. ಆದರೆ ಆಡಳಿತಾತ್ಮಕ ಲ್ಯಾಪ್ಸ್‌ಸ್ ಏನಿದೆ, ಅದರ ವ್ಯಾಪ್ತಿಗೆ ಸೀಮಿತವಾಗಿ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಯಾರು ಕ್ರಿಮಿನಲ್ ಅಕ್ಟಿವಿಟೀಸ್‌ಗಳಲ್ಲಿ ತೊಡಗಿದ್ದಾರೆ ಇಂಥ ಕೃತ್ಯಗಳಿಗೆ ಕಾರಣೀಭೂತರಾಗಿದ್ದಾರೆ ಅಂಥವರ ಮೇಲೆ ಕ್ರಮ ಏತಕ್ಕೆ ತೆಗೆದುಕೊಂಡಿಲ್ಲ? ಹಿಂಜರಿತ ಏತಕ್ಕೆ? ಈ ಒಂದು ಆಪಾದನೆಗೆ ತಾವು ಗುರಿಯಾಗ ಬೇಕಾಗುತ್ತದೆ.

> "Land controversy: These partymen: it is reliably learnt were responsible for the fencing of a controversial piece of Government land abutting Bangalore–Mysore Highway to further their own political interests and to visibly demonstrate to a particular community that they could deliver the goods."

This is another commmunal hierarchical hegemony. And the report further reads :

"When this move backfired other leaders in the party tried to blame their rivals (The local Congressmen) for unnecessarily causing communal tension." ನಮಗೆ ಅಲ್ಲಿ ಜಾಸ್ತಿ ಶಕ್ತಿ ಇದೆ. We can deliver the goods, not the congressmen ಇದರೊಳಗೆ ರೂಲಿಂಗ್ ಪಾರ್ಟಿಯಲ್ಲಿರತಕ್ಕ ಮೈನಾರಿಟಿ ಕಮ್ಯೂನಿಟಿ ಪೀಪಲ್ whereveo the ruling party and other sections object, the blame is shifted on the Congressmen for creating tension. ಇಲ್ಲಿ ನೋಡಿ ಬಹಳ ಚೆನ್ನಾಗಿದೆ.

> "Ego boosted: Fencing the piece of land obviously pleased the Muslim population in the town and helped boost the ago of the Muslim leader from the Janatha Party. Further when resentment build up over this allegedly unauthorised act, other Janata leaders sought the removal of the fence. Before the authorities could bring everyone together and resolve the issue, thetrouble broke out on Tuesday night, leading no arson rioting and finally police firing."

ಪೊಲೀಸಿನವರು ಏನು ವರದಿ ಕೊಟ್ಟಿದ್ದಾರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದು ನಮಗೆ ಬೇಕಾಗುತ್ತದೆ.

> "The subsequent behaviour of some Janata leaders did not help to restore the peace in the town, according to official sources. In fact, the action of a ruling party leader angered senior officials to such an extent that they threatened at one stage to have him arrested."

Even some police officers have threatened that those leaders would be arrested for not co-operating with them in bringing order. ಟೌನ್‌ನಲ್ಲಿರತಕ್ಕ ಜನತಾ ಪಾರ್ಟಿ ಲೀಡರುಗಳನ್ನು ಸೀನಿಯರ್ ಪೊಲೀಸ್ ಅಧಿಕಾರಿಗಳು ಹೋಗಿ ಏತಕ್ಕೆ ಅರೆಸ್ಟ್ ಮಾಡಲಿಲ್ಲ. ಇದು ಬಹಳ ಮುಖ್ಯವಾದುದು. ಇದಕ್ಕೆ ಸಂಬಂಧಪಟ್ಟ ಪೋಲೀಸ್ ವರದಿಗಳನ್ನು ಸದನದ ಮುಂದಿಡಬೇಕು. ಯಾವ ಪಕ್ಷದವರೇ ಇರಲಿ, ಅವರನ್ನು ತಕ್ಷಣ ಅರೆಸ್ಟ್ ಮಾಡಬೇಕಾಗಿತ್ತು. ಯಾರು ಶಾಂತಿಯ ವಾತಾವರಣವನ್ನು ಕದಡತಕ್ಕ, ಕೆಡಸತಕ್ಕ ಕೆಲಸ ಮಾಡುತ್ತಾರೆ. ಅಂಥವರನ್ನು ನಿರ್ದಾಕ್ಷಿಣ್ಯವಾಗಿ ಹಿಡಿದು ಶಿಕ್ಷಿಸತಕ್ಕ ಕೆಲಸ ಮಾಡದೇ, ತಮ್ಮ

ಒಂದು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎನ್ನುವ ಆಪಾದನೆಗೆ ತಾವು ಗುರಿಯಾಗಬೇಕಾಗಿದೆ. ಇದರ ಹಿನ್ನಲೆಯಲ್ಲಿ ಮತ್ತಷ್ಟು ವಿವರವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ ಈಗಾಗಲೇ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದೀರಿ. ಫೆನ್ಸಿಂಗ್ ವಿಚಾರದಲ್ಲಿ ಕೂಡ ಈ ಸಂದರ್ಭದಲ್ಲಿ ವಾದ ವಿವಾದ ಬಂತು. ಅನಂತರ ಕರಗ ಮೆರವಣಿಗೆ ನಡೆಯುವಾಗ ಉದ್ರಿಕ್ತ ವಾತಾವರಣ ಬರುತ್ತದೆ ಎನ್ನುವುದನ್ನು ತಿಳಿದು ಕೂಡ ಅದನ್ನು ತಡೆಗಟ್ಟತಕ್ಕ ಪ್ರಯತ್ನ ಏತಕ್ಕೆ ಮಾಡಲಿಲ್ಲ. ಪ್ರತಿ ವರ್ಷ ಕರಗ ಹೋಗುವ ಮಾರ್ಗವನ್ನು ನಿರ್ದಿಷ್ಟವಾಗಿ ಪೋಲೀಸಿನವರು ಸೂಚಿಸುತ್ತಿದ್ದರು. ಈ ವರ್ಷ ಏತಕ್ಕೆ ಹಾಗೆ ಮಾಡಲಿಲ್ಲ ಈ ಸಾರಿ ಕರಗ ಹೋಗುವ ಮಾರ್ಗಕ್ಕೆ ಪೋಲೀಸಿನವರು ಪರ್ಮಿಷನ್ ಕೊಟ್ಟಿದ್ದರೆ ಕೊಡದಿದ್ದರೆ ಯಾವ ರೀತಿ ಹೋದರು ? ಕರಗ ಮೆರವಣಿಗೆ ಹೋದಂಥ ಸಂದರ್ಭದಲ್ಲಿ ನಿಯಂತ್ರಣ ಮಾಡಲಿಕ್ಕೆ ಯಾವ ರೀತಿಯ ಪೋಲೀಸ್ ಬಂದೋಬಸ್ತು ಮಾಡಿದ್ದೀರಿ ? ಉದ್ರಿಕ್ತ ವಾತಾವರಣ ಏತಕ್ಕೆ ಉದ್ಭವಾಯಿತು ?

ಅಧ್ಯಕ್ಷರು.—ತಮ್ಮ ಮಾಜಿ ನಾಯಕರು ೫೪ ನಿಮಿಷ ತೆಗೆದುಕೊಂಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಇವರು ಮಾಜಿ ನಾಯಕರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಘಟನೆ ನಡೆದ ಅರ್ಧ ಗಂಟೆಯೊಳಗೆ ಇಲ್ಲಿಂದ ರಾಮನಗರಕ್ಕೆ ಪೋಲೀಸ್ ಹೋಗುವುದಕ್ಕೆ ಸಾಧ್ಯ ಇದೆ ಆದರೆ ಘಟನೆ ನಡೆದ ೪೦ ಗಂಟೆಗಳ ಮೇಲೆ ೩೦೦ ಜನರ ಗುಂಪುಗೂಡಿ ಮತ್ತೆ ಒಂದು ರೀತಿಯ ಧಾಳಿ ಆಗಿದೆಯೆಂದರೆ ರಾಜ್ಯದಲ್ಲಿ ಪೋಲೀಸ್ ವ್ಯವಸ್ಥೆ ಸಮರ್ಪಕ ವಾಗಿತ್ತೆ ಎನ್ನುವ ಪ್ರಶ್ನೆ ಕೂಡ ಬರುತ್ತದೆ. ಈ ವಿಚಾರವನ್ನು ಕೂಡ ನ್ಯಾಯಾಂಗ ತನಿಖೆಯವರು ವಿಶ್ಲೇಷಣೆ ಮಾಡುತ್ತಾರೆಂದು ನಾನು ಭಾವಿಸುತ್ತೇನೆ. ಮಾನ್ಯ ಗೃಹ ಸಚಿವರು ಕೂಡ ಹೋಗಿ ಸಮಾಧಾನ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಎಲ್ಲಾ ಕೋಮಿನ ಜನರನ್ನು ಕರೆಯಿಸಿ ಸಹಾನುಭೂತಿಯಿಂದ ಇರುವಂತೆ ತಿಳಿಸಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ತಮ್ಮ ಪ್ರಾಮಾಣಿ ಕತೆಯ ಬಗ್ಗೆ ನಮಗೆ ಅನುಮಾನ ಇಲ್ಲ. ತಾವು ಹೋಗುವಾಗ ಹಿಂದೆ ಮುಂದೆ ಪೋಲೀಸ್ ಬಂದೋಬಸ್ತು ಇರುತ್ತದೆ ಮಾರ್ಗದಲ್ಲಿ ಯಾರೂ ಕೂಡ ಇರುವುದಿಲ್ಲ. ಎಲ್ಲರೂ ಮನೆಗಳಲ್ಲಿಯೇ ಇರುತ್ತಾರೆ. ಬಂಗಲೆಯಲ್ಲಿ ಕುಳಿತು ಮಾತನಾಡಿಕೊಂಡು ಬಂದರೆ ಎಲ್ಲಾ ಸರಿಯಿರುವುದಿಲ್ಲ. ತಾವು ಕೂಡ ಗುಡಿ ಸಲುಗಳಿಗೆ ಹೋಗಿ ಅವರ ಜೊತೆಯಲ್ಲಿ ಮಾತನಾಡಿದ್ದೀರಿ. ಆದರೆ, ಪರಿಸ್ಥಿತಿ ಹತೋಟಿಗೆ ಬಂದಿದೆ ಯೆಂದು ಏನು ವರದಿ ಬಂದಿತು ಅದು ಸರಿಯಲ್ಲ ಆಗಿನ್ನೂ ಉದ್ರಿಕ್ತ ಪರಿಸ್ಥಿತಿ ಇತ್ತು. ಶಾಂತಿ ಸಮಿತಿ ರಚನೆಯಾದ ಮೇಲೂ ಕೂಡ ಗಲಾಟೆಯಾಯಿತು. ೨೪ನೇ ತಾರೀಖು ಸಂಜೆ ಕೂಡ ನಾವು ಹೋಗಿದ್ದೆವು. ನನಗೆ ಬಹಳ ಆಶ್ಚರ್ಯವಾಯಿತು. ಎಷ್ಟೋ ಗಲಾಟೆ, ಗೊಂದಲಗಳ ಮಧ್ಯೆ ಕೂಡ ಮಂತ್ರಿಗಳಾಗಿ, ಶಾಸಕರಾಗಿ, ಸಾಮಾನ್ಯ ಜನರಾಗಿ ಹೋಗಿದ್ದೇವೆ. ಆ ಒಂದು ಅನುಭವ ನಮಗೂ ಕೂಡ ಆಗಿದೆ. ೨೪ನೇ ತಾರೀಖು ನಾವು ರಾಮನಗರಕ್ಕೆ ಹೋದಾಗ ನಮ್ಮ ಆಸುಪಾಸಿನಲ್ಲಿ ಕೂಡ ಪೋಲೀಸಿನವರು ಇರಲಿಲ್ಲ. ನಿಜವಾಗಿಯೂ ಪರಿಸ್ಥಿತಿ ಸಮಾಧಾನಕ್ಕೆ ಬಂದಿದೆ ಎನ್ನುವ ಭಾವನೆ ನಮಗೆ ಆಯಿತು. ಆದರೆ, ರಾಮನಗರದಲ್ಲಿ ಪರಿಸ್ಥಿತಿ ಇನ್ನೂ ಗಂಭೀರವಾಗಿತ್ತು ಎಂದು ನಂತರ ಗೊತ್ತಾಯಿತು. ನ್ಯಾಷನಲ್ ಹೈವೆಯಲ್ಲಿ ಕೂಡ ಪೋಲೀಸ್ ಬಂದೋಬಸ್ತು ಇರಲಿಲ್ಲ. Anything could have happened. God alone saved public from violence. That is the anarchical situation that was prevailing. we must try to help the police than disturbing the atmosphere. ನಾವು ಜಿಲ್ಲಾಧಿಕಾರಿಗಳು ಪೋಲೀಸರು ಇಬ್ಬರನ್ನೂ ಕರೆದುಕೊಂಡು ಪರಿಶೀಲನೆಗೆ ಹೋಗಬೇಕೆಂದು ಹೇಳಿದೆವು ಅವರು ಹೇಳಿದರು : 'Everything is under control.' ನೀವೂ ಹೋಗಬಹುದೆಂದು ನಾವೂ ಹೋದೆವು ಅಧ್ಯಕ್ಷರೇ ಅಲ್ಲಲ್ಲಿ ಇರಿತದ ವರ್ತಮಾನಗಳು ಬಂದವು. People still were in a very high tension. ನಮ್ಮ ಸಹೋದರ ಎಂ.ಎಲ್.ಎ ಶ್ರೀ ಮೊಯಿನುದ್ದೀನ್ ಅವರು ಈಗ ಇಲ್ಲಿಲ್ಲ. ಅಂದು ಅವರ ಜೊತೆಯಲ್ಲೂ ಒಬ್ಬರು ಬಂದಿದ್ದರು. He himself was stabbed. They were all coming behind us. ಅವರ ಸ್ನೇಹಿತರು ಪಾಪ Even we would have been stabbed. Sri Oscar was there, Sri Narsimha murthy was there. It was possible. It was free for

all. ಅಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಇಲ್ಲಿಗೆ ಬಂದು ಫೋನ್ ಮಾಡಿದೆ. ಆಗ ತಾವೂ ಇರಲಿಲ್ಲ. ಮಾನ್ಯ ಗರುಡಾಚಾರ್ ಅವರಿಗೆ ತಿಳಿಸಿ ನೀವು ಸರಿಪಡಿಸದಿದ್ದರೆ ಬಹಳ ಕಷ್ಟವಾಗುತ್ತಿತ್ತು. They have become desperted. ಎರಡೂ ಪಂಗಡದವರು ರಕ್ಷಣೆ ಇಲ್ಲವೆಂದು ಹೇಳಿದರು ಈ ರೀತಿಯ ವಾತಾವರಣ ಆಗಬೇಕಾದರೆ ಸರ್ಕಾರದ ಇಂಟೆಲಿಜೆನ್ಸ್ ಸರಿಯಾಗಿ ಕೆಲಸ ಮಾಡುವುದಿಲ್ಲವೋ ಹೇಗೆ ? ಈ ಎಲ್ಲಾ ಹಿನ್ನೆಲೆಯನ್ನು ನೋಡಿದರೆ when the ruling party leaders themselves were in the forefront, is that the police were disabled from acting in the situation? ಈಗ ಮತ್ತೆ ಪೇಪರಲ್ಲಿ ಬಂದ ಮೇಲೆ ಸ್ವಲ್ಪ ವಿಚಾರ ಮಾಡಲಾಗಿ ನಮ್ಮ ಸಂಶಯ ಬಲವಾಯಿತು. That impression came. ಇಲ್ಲದಿದ್ದರೆ ಪೋಲೀಸರು ಅಷ್ಟು ಇನಾಕ್ಟೀವ್ ಆಗಿರುವಂಥ, ಜವಾಬ್ದಾರಿ ನಿರ್ವಹಿಸಲಾರದಂಥ ಪರಿಸ್ಥಿತಿ ಇದ್ದಿತು. ತಮ್ಮ ಸರ್ಕಾರದ ಆಡಳಿತ ಇಷ್ಟರಮಟ್ಟಿಗೆ ಕುಸಿದಿತ್ತು ಮತ್ತು ಜನರಲ್ಲಿ ಬದುಕಿದರೆ ಸಾಕು ಎಂಬ ಬಲವಾದ ಭಾವನೆ ಖಂಡಿತವಾಗಿಯೂ ಅಲ್ಲಿತ್ತು. This is more importan . ಆದ್ದರಿಂದ ಅಧ್ಯಕ್ಷರೇ ನಾನು ಈ ಎಲ್ಲಾ ವಿವರಗಳಿಗೆ ಈಗ ಹೋಗುವುದಿಲ್ಲ. ಆದರೆ ರಾಮನಗರದಲ್ಲಿ ಸುಮಾರು ೧೦೦–೧೫೦ ಮನೆಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ. ೮೦ ಮನೆಗಳು ಎಂದು ತಾವು ಅಫಿಶಿಯಲ್ ರೆಕಾರ್ಡ್ಸ್‌ನಲ್ಲಿ ಹೇಳಿದ್ದೀರಿ. ನಾವು ಅಲ್ಲಿ ಹೋಗಿ ನೋಡಿದ್ದೇವೆ. ಅವು ಬರೀ ಮನೆಗಳಲ್ಲ. ಒಂದೊಂದು ಮನೆ ಎಂದರೆ ಅಲ್ಲಿ ಒಂದೊಂದು ರೀಲಿಂಗ್ ಯೂನಿಟ್ ಇದೆ. ಕಡಿಮೆ ಪಕ್ಷ ೧೦ ಸಾವಿರ ರೂಪಾಯಿಗಳ ಇನ್‌ವೆಸ್ಟ್‌ಮೆಂಟ್ ಒಂದೊಂದರಲ್ಲಿ ಇದೆ. ಇವರಿಗೆ ಜೀವನದ ದಾರಿಯೇ ಬದಲಾವಣೆಯಾಗಿದೆ. ಅವರನ್ನು ಪುನಃ ಈ ಉದ್ಯೋಗದಲ್ಲಿ ತೊಡಗಿಸುವುದಕ್ಕಾಗಿ ಇಂಟರೆಸ್ಟ್ ಫ್ರೀ ಲೋನ್ ಮತ್ತು ಬೇರೆ ರೀತಿಯ ಸಹಾಯವನ್ನೂ ಕೊಡಬೇಕಾಗುತ್ತದೆ. ಗೃಹ ಮಂತ್ರಿಗಳೂ ಕೂಡ ಈ ದಾರುಣವಾದ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಬಂದಿದ್ದಾರೆ. ಮತ್ತೊಂದು ವಿಷಯ ಹೇಳುತ್ತೇನೆ ; ಇದು ರಾಮನಗರ ಟೌನ್‌ಗೆ ಸೀಮಿತವಾಗುವುದಿಲ್ಲ. ಮಾನ್ಯ ಬಂಗಾರಪ್ಪನವರು ಕೂಡ ಹೇಳಿದರು ಗೆರಿಲ್ಲಾ ವಾರ್ ಥರಹ ಗುಡ್ಡದಿಂದ ಜನ ಇಳಿಯುತ್ತಿದ್ದರು. ಆಯುಧಗಳನ್ನು ಹೊತ್ತುಕೊಂಡಿದ್ದವರನ್ನು ನೋಡಿದರೆ ಒಂದು ರೀತಿಯ ಭಯಾನಕ ವಾತಾವರಣ ಅಲ್ಲಿತ್ತು. ೧೯೮೩ರಲ್ಲಿ ಅಸೆಂಬ್ಲಿ ಚುನಾವಣೆ ಆದ ನಂತರವೂ ಈ ರೀತಿ ಒಮ್ಮೆಯಾಗಿತ್ತು. ಆಗಲೂ ನಾವು ಹೋಗಿ ನೋಡಿದ್ದೇವೆ. ಮೊನ್ನೆ ಆದದ್ದೂ ಹಾಗೆಯೇ.

ರಾಮನಗರ ಮುನಿಸಿಪಾಲಿಟಿ ಅಧ್ಯಕ್ಷರು ಮುನೀರ್ ಎಂದು ಇದ್ದಾರೆ. ಅವರ ಮೇಲೆ ೮ನೇ ತಾರೀಖು ಡಿವಿಜನಲ್ ಕಮೀಷನರ್ ಅವರು ಷೋ–ಕಾಸ್–ನೋಟೀಸ್ ಕೊಟ್ಟು ಮುನಿಸಿಪಾಲಿಟಿಯನ್ನು ಏಕೆ ರದ್ದು ಮಾಡಬಾರದು ಕೇಳಿ ಮುನಿಸಿಪಾಲಿಟಿ ಮೀಟಿಂಗ್ ಮಾಡದಂತೆ ಸ್ಟೇ ಕೊಡಲಾಗಿದೆ. Before 1984 als he was the Municipal Prisident. After 1984 also he was the Municipal President. ಆ ಮುನಿಸಿಪಾಲಿಟಿಯನ್ನು ರದ್ದು ಮಾಡಬೇಕಾದರೆ ಈ ರೀತಿಯ ಧಾಳಿ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಕಾನೂನು ಇತ್ತು. ಸದರಿ ಷೋ ಕಾಸ್ ನೋಟೀಸ್ ನನ್ನ ಹತ್ತಿರ ಇದೆ. ನೀವು ಹೇಳಿದ ಜ್ಯುಡಿಶಿಯಲ್ ಕಮಿಷನ್ ಎನ್‌ಕ್ವಯರಿ ಮಾಡುವಾಗ ಇದಕ್ಕೆ ಯಾವ ಹಿನ್ನೆಲೆ ಇತ್ತು ಎಂಬುದನ್ನು ಪರಿಶೀಲಿಸಲು ಬೇಕಾದರೆ ರೆಫರ್ ಮಾಡಿ. ಇದಕ್ಕೆಲ್ಲಾ ಈ ಅಧ್ಯಕ್ಷರು ಕಾರಣೀಭೂತರಲ್ಲ. ಷೋ–ಕಾಸ್–ನೋಟೀಸ್ ಕೊಟ್ಟ ಕಾಲಕ್ಕೆ ಆ ಸಂಸ್ಥೆಗೆ ಅಧ್ಯಕ್ಷರು ಅವರಾಗಿರಲಿಲ್ಲ. ಇವತ್ತೆಲ್ಲ ನೀವು ಮೈನಾರಿಟಿ ಕಮಿಷನ್, ಮೈನಾರಿಟಿ ಕಾರ್ಪೊರೇಷನ್ ಮಾಡುತ್ತಿದ್ದೀರಿ ಆದರೆ ನೀವು ಎಷ್ಟರಮಟ್ಟಿನ ಅವರಿಗೆ ರಕ್ಷಣೆ ಕೊಡುತ್ತೀರಿ ಎಂಬುದು ರಾಮನಗರದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಇಂಜಿನಿಯರಿಂಗ್ ಕಾಲೇಜಿಗೆ ಬಿಲ್ಡಿಂಗ್ ಕಟ್ಟುವುದಕ್ಕೆ ಲೈಸೆನ್ಸ್ ಕೊಟ್ಟಿದ್ದು ತಪ್ಪು. ಆ ಲೈಸೆನ್ಸ್ ಕೊಟ್ಟಿದ್ದು ಯಾವಾಗ ಎಂದರೆ ಗೌಸಿಯಾ ಇಂಜಿನಿಯರಿಂಗ್ ಕಾಲೇಜಿಗೆ ಆಗ ರಾಮನಗರ ಮುನಿಸಿಪಾಲಿಟಿಗೆ ಸೇರಿಯೇ ಇರಲಿಲ್ಲ. ಬೇರೆ ಪಂಚಾಯಿತಿಗೆ ಸೇರಿತ್ತು. ಇವರು ಮುನಿಸಿಪಲ್ ಅಧ್ಯಕ್ಷರಾದ ಮೇಲೆ ಬಿಲ್ಡಿಂಗ್‌ಗೆ ಯಾವ ಲೈಸನ್ಸ್‌ನ್ನೂ ಕೊಟ್ಟಿಲ್ಲ. ನನ್ನ ಹತ್ತಿರ ಎಲ್ಲಾ ಮಾಹಿತಿ ಇದೆ ಅದೂ ಒಂದು ಚಾರ್ಜ್. ಅದೆಂದರೆ ಮೈನಾರಿಟಿಗೆ ನೀವು ಕೊಡಬೇಕಾಗಿದ್ದ ರಕ್ಷಣೆ ವಿಚಾರ.

ಈಗ ಬೆಳಗಾಂ ವಿಚಾರವನ್ನು ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. It is also a very sensitive issue. ಆದರೆ ಕೆಲವು ಘಟನೆಗಳು ನಡೆದವು ಅವನ್ನು ಕೂಡ ನಾವು ವಿಚಾರ ಮಾಡಬೇಕಾಗುತ್ತದೆ ನಾನೂ ಕೂಡ ಸಂಕೇಶ್ವರಕ್ಕೆ ಹೋಗಿದ್ದೆ. ಸಂಕೇಶ್ವರ ಮತ್ತು ನಿಪ್ಪಾಣಿಯಲ್ಲಿ ಕೆಲವು ಹಿಂಸಾತ್ಮಕ ಘಟನೆಗಳು ನಡೆದುವು. It was not the case either of the Marathis or the Kannadigas. ಯಾರೋ ಅಲ್ಲಿ ಮಿಸ್‌ಅಂಡರ್‌ಸ್ಟಾಂಡಿಂಗ್ ಕ್ರಿಯೇಟ್ ಮಾಡಿದ್ದೇ ಇದಕ್ಕೆ ಕಾರಣ. ಆ ಮಿಸ್ಅಂಡರ್

ಸ್ಟ್ಯಾಂಡಿಂಗನ್ನು ನಿವಾರಣೆ ಮಾಡಲಿಕ್ಕೆ ಯಾವ ಮಂತ್ರಿಗಳೂ ಹೋಗಲಿಲ್ಲ. ಆದರೆ ನಾನು ಹೇಳಿದೆ ತಕ್ಷಣ ಇದಕ್ಕೆ ಒಂದು ಜ್ಯುಡಿಷಿಯಲ್ ಕಮಿಷನ್ ಮಾಡಿ ಎಂದು. ಮಂತ್ರಿಗಳು ಹೋಗಿ ಅಲ್ಲಿ ಮಿಸ್ಅಂಡರ್‌ಸ್ಟ್ಯಾಂಡ್ ಗಿರುವುದನ್ನು ನಿವಾರಣೆ ಮಾಡಿದ್ದಿದ್ದರೆ ಬೆಳಗಾಂನಲ್ಲಿ ಏನು ಪ್ರಕರಣಗಳು ನಡೆದುವು ಅವು ನಡೆಯುತ್ತಿರಲಿಲ್ಲ. ಇದನ್ನು ತಾವು ಒಪ್ಪುತ್ತೀರಿ, ಇಲ್ಲ ಎನ್ನುವುದಿಲ್ಲ. ಆದರೆ ಇದು ಲಿಂಗ್ವಿಸ್ಟಿಕ್ ಮೈನಾರಿಟಿ ಜನತೆಗೆ ಸಂಬಂಧಪಟ್ಟ ವಿಚಾರ. ಗೋಲಿಬಾರ್ ಆಗಿ ಜನ ಸತ್ತಿದ್ದಾರೆ. ಕರ್ನಾಟಕ ರಾಜ್ಯದ ಜನತೆಗೆ ರಕ್ಷಣೆಯು ಸುಭದ್ರತೆಯು ವಿಚಾರದಲ್ಲಿ ಆತಂಕ ಬಂದಿದೆ ಎನ್ನುವಂತಾದಾಗ the leader, the Hon. Chief Minister should have visited. ಜನತೆಯ ಮನಸ್ಸಿನಲ್ಲಿ ಶಾಂತಿಯು, ಸುವ್ಯವಸ್ಥೆಯನ್ನು ಉಂಟು ಮಾಡುವ ಉದ್ದೇಶಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ತುರ್ತು ವೇಳೆಯಲ್ಲಿ ಅಲ್ಲಿಗೆ ಹೋಗಬೇಕಾಗಿತ್ತು. ಆದರೆ ಅವರು ಹೋಗಿದ್ದುದು ಬರಗಾಲವೆಲ್ಲ ಮುಗಿದಿದ್ದು ದೊಂಬಿ ಹಿಂಸೆಗಳೆಲ್ಲ ನಿಂತ ಮೇಲೆ. ಹೀಗೆ ಮೂರು ನಾಲ್ಕು ದಿನ ಸುತ್ತಿಬರುವುದು ದೊಡ್ಡ ವಿಷಯವಲ್ಲ. ಆದರೆ ಎಲ್ಲಿ ಗೋಲಿಬಾರಾಗಿತ್ತು, ಜನತೆಯ ಆಸ್ತಿಪಾಸ್ತಿ ನಷ್ಟವಾಗಿತ್ತು ಅಂಥ ಕಡೆಗೆ ಇವೊತ್ತು ಕರ್ನಾಟಕ ರಾಜ್ಯದ ಜವಾಬ್ದಾರಿ ಹೊತ್ತಂಥ ಮುಖ್ಯಮಂತ್ರಿಗಳು ಭೇಟಿ ನೀಡದೆ ಹೋದದ್ದು ಇದಕ್ಕಿಂತ ದೊಡ್ಡ ಕರ್ತವ್ಯಚ್ಯುತಿ ಇಲ್ಲವೆಂದು ನಾನು ಆಪಾದನೆ ಇವತ್ತು ಮಾಡುತ್ತೇನೆ. ತಾವೂ ಹೋಗುತ್ತೀರಿ. ಬೇರೆಯವರೂ ಹೋಗುತ್ತಾರೆ. ಆದರೆ ಎಲ್ಲಾ ಗುಂಪು ಪಂಗಡಗಳನ್ನು ಒಂದೆಡೆ ಕರೆಯಿಸಿ ಈ ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಭಾವನೆ ಸಂಪೂರ್ಣ ಶಾಂತಿಯ ಸುವ್ಯವಸ್ಥೆ ಏರ್ಪಾಡು ಮಾಡಬೇಕಾಗಿದ್ದ ವ್ಯವಸ್ಥೆಯ ಪರಿಸ್ಥಿತಿ ಇವತ್ತು ರಾಜ್ಯದಲ್ಲಿಲ್ಲ ಎಂಬುದು ದುಃಖದ ಸಂಗತಿ. ಇದಕ್ಕೆ ಹಿನ್ನೆಲೆಯಾಗಿ ಮಾನ್ಯ ಮುಖ್ಯಮಂತ್ರಿಗಳು ಕೆಲಸ ಮಾಡಲಿಲ್ಲ, ಇದು ಒಂದು ದುರಂತ ಎಂದು ಹೇಳಬೇಕಾಗಿದೆ. ಇದು ಲಿಂಗ್ವಿಸ್ಟಿಕ್ ಪ್ರಶ್ನೆ ಇರಬಹುದು, ಮೈನಾರಿಟಿ ಪ್ರಶ್ನೆ ಇರಬಹುದು. ಅದರ ಪರವಾದ ಜವಾಬ್ದಾರಿಯನ್ನು ಸರ್ಕಾರ ವಹಿಸದೇ ಹೋದರೆ ಆಗುವುದಕ್ಕಿಲ್ಲ ಸರ್ಕಾರವೇ ನೇರವಾದ ಜವಾಬ್ದಾರಿ ಹೊರುವ ಪರಿಸ್ಥಿತಿ ಬಂದೀತೆಂದು ಹೇಳಿ ಈ ಕೆಲವು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

†SMT. MUKTHARUNNISA (Narasimharaja).—Respected Mr. Speaker Sir, I don t want to take much time. First of all I thank you for having given me an opportunity to speak a few words in connection with the incident that took place in Ramanagaram. Every time we the minorities are the victims. Here, everybody knows that minorities have born here, brought up here, die here and are buried here in this mother land. But every time wherever there is a violence, we the minorities are involved. We are Indians, we are Kannadigas and we know our great leader Mahatma Gandhi who sacrificed his life for the good of the people. We believe in his slogan, "Hindu-Muslim bhai, bhai".

Sir, I don't want to make to make a long speech, but I want a few clarifications. When such a major incident has taken place in Ramanagaram which is only 45 Kms from Bangalore, our hon.Chief Minister, who is the father, and who is the Chief of Karnataka should have visited that place and met the victims? Now he is not present here. He may be hearing this in his chamber. We the minority people believe the Chief Minister and we follow certain things. But he has not come to our rescue Of course, he has sent his feelers, that is different. I want to ask. is it not his responsibility to visit the spot? Perhaps,

he has feared that the frustrated people will shout at him and he will have to meet their demand for compensation and all that Many times he and his party raised the slogan that they are pro-linguistic minority and they are helping the minorities. In that case, why he has not rushed to the spot where there was trouble ? Whereas people came from far off places. It will take only ten minutes to reach Ramanagaram from Bangalore by helicopter and by car it takes 40 minutes. But the Hon.Chief Minister has not visited.

We are also human beings. There is police force. In every place they are having Peace Committees and Citizens Committee. They take all the community people into confidence, they conduct meetings once in two or three months or during the Jathra or the procession time. There is a COD wing and other forces. Did they not have the information before this iolence took place ? Did they not have the knowledge as to whether the people of Rrmanagaram are mischief-mongers or outsiders have inieiated this violence ? When there are so many police forces, they should have had the idea. I would like to ask whether the processionist had taken the licence to pass through that Mosque road or whether the police had given licence to them to pass through that road ? Whether it is a pre-plan or whether the outside mischief-mongers are involved in this incident, I would like to know whether the Hon.Home Minister has got the report? If, not what the police force is doing; how many peace committee meetings and citizens committee meetings they have conducted in Ramanagaram ? When they knew there is a Karga procession did they conduct that meeting before the procession took place? I would like to know these things. Did the hon.Home Minister instruct the police to take necessary steps to avoid this type of violence during Karga time?

Another thing I read in the newspapers that you have sanctioned Rs. 20,000 as compensation to the victims. Five persons have died and four members are with serious injuries. Many people are suffering as their shops and factories have been looted. They were depending on their business. What have you done to them ? I learn't about Rs. 50 lakhs worth of property is lost in Ramanagaram violence. Have you taken any decision to help them? With great difficulty and since so many years they have been carrying on their business. They have improved the business and they were depending on their business Now they are on the streets as their shops have been burnt and looted. At any time if there is any violence, they take the name of minority only, What is the difference between the minorities and others ? Whether we the minorities have coloured blood and others have red ? We are not minorities, but we are called

Kannadigas from Karnataka. You should not take the name of minority and bring this type of violence and suffering to us.

Sir, another point is,-I learnt that every time the Karga procession goes from a particular road. But, this time. why they took the pocession throug the Mosque road ? Your goodselves know that in every religion there are some sentiments, some customs snd some rules and regulations. Worship may be different, but we are all one. Knowingly, how the S.I. or the S.P. who is incharge of Ramanagaram gave permission to go through that road. I want a clarification on this ?

I know in a picture to show one burkha lady receiving Rs. 20,000 was made just for the purpose of propogangada that a muslim lady appeared in burkha. I don't like that show to say that minority is getting such a benefit. If the Government wants to help or give benefit let them give it directly but not in showing burkha ladies. I am also a muslim; I have not come here wearing burkha. I am asking the Government whether that twenty thousand will help those victims. It will never help the people who have suffered lot during these riots. Not only the muslims but also the weaker sections, SC/ST people have also suffered a lot during that incident. They don't know what is what. They cannot understand who is constable. Who is sub-Inspector. That is the position that exist there today. When that is the position I repuest the police and other people not to take action on them for small matters. It is happening not only in taluka but even in places like Mysore and other areas where the police take them to the station evan for small things and haras them. I therefore request the Hon'ble Home Minister who hails from our place to give instructions to the police officers not to Haras the small people especially minorities and weaker sections of the society. I also appeal to the Minister to give them proper protection during the disturbances and portect their properties. With these words I thank the Chair for having given me so much time to speak on this subject. Thank you Sir.

ಶ್ರೀ ಬಿ. ಬಸವಲಿಂಗಪ್ಪ. (ಯಲಹಂಕ).—ಮಾನ್ಯ ಅಧ್ಯಕ್ಷರೇ, ಇದುವರೆಗೆ ಮಾತನಾಡಿದಂಥ ಮಾನ್ಯ ಸದಸ್ಯರುಗಳು ಕರ್ನಾಟಕ ರಾಜ್ಯದಲ್ಲಿ ಯಾವ ರೀತಿಯಲ್ಲಿ ಗಲಭೆಗಳು, ಕೊಲೆಗಳು, ಸುಲಿಗೆ ಗಳು ಆಗುತ್ತಿವೆ ಎನ್ನುವ ಬಗ್ಗೆ ಬಹಳ ವಿವರವಾಗಿ ಮಾತನಾಡಿದ್ದಾರೆ. ನಾನು ಆ ಗೋಜಿಗೆ ಹೋಗುವುದಿಲ್ಲ. ಒಂದು ವಿಷಯ ಮಾತ್ರ ಬಹಳ ಕಳವಳ ಪಡಿಸತಕ್ಕಂಥಾದ್ದು ಇದೆ. ೨೪–೭–೮೬ರಂದು ೮ ಗಂಟೆಯಲ್ಲಿ ಹುಣಿಸೆ ಹಳ್ಳಿಯಲ್ಲಿ ಗಲಭೆಯಾಗಿ ಕೊಲೆಯಾಯಿತು. ಕೊಲೆಯಾದ ಮೇಲೆ ಕೊಲೆ ಪ್ರಕರಣವನ್ನು ಯಾರಾದರೂ ಗಮನಿಸಿ ಅದರ ಜವಾಬ್ದಾರಿಯನ್ನು ಹೊತ್ತು ತಡೆಯುತಕ್ಕ ಪ್ರಯತ್ನ ಮಾಡಬೇಕಾಗಿತ್ತು ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಕೊಲೆಯಾಗುವುದನ್ನು ಯಾರೂ ತಡೆಯಲಿಲ್ಲ ಸಾಂಗೋಪವಾಗಿ ಕೊಲೆ ನಡೆದಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿದ್ದಾಗ ರೋಣ ಮತ್ತು ಗದಗ್‌ನಲ್ಲಿ ರೈತರ ಚಳುವಳಿ ಆಯಿತು. ಆ ಸಂದರ್ಭದಲ್ಲಿ ಗುಂಡು ಹಾರಿಸಿದಾಗ ಒಬ್ಬಿಬ್ಬರು ಸತ್ತರು. ಆ ಹಿನ್ನೆಲೆಯಲ್ಲಿ ಜನತಾ ಪಕ್ಷದವರು ಆಕಾಶದ ಉದ್ದಕ್ಕೂ ಭಾಷಣಗಳನ್ನು ಮಾಡಿದರು.

ಜನಗಳ ಮನಸ್ಸನ್ನು ತಮ್ಮ ಕಡೆ ತಿರುಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು. ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ಜನಗಳ ಮೇಲೆ, ರೈತರ ಮೇಲೆ ಗುಂಡುಹಾರಿಸಬಾರದು ಎಂದು ಹೇಳಿ ಅದರ ಬಗ್ಗೆ ಚಳುವಳಿ ಮಾಡಿ ತಾವು ಅಧಿಕಾರಕ್ಕೆ ಬಂದಿರಿ. ಇವತ್ತು ನಾನು ಕೇಳುತ್ತೇನೆ ನೀವು ಅಧಿಕಾರಕ್ಕೆ ಬಂದಮೇಲೆ ಎಷ್ಟು ಸಾರಿ ಗುಂಡುಹಾರಿಸಿದ್ದೀರಿ ? ಏತಕ್ಕೆ ಗುಂಡು ಹಾರಿಸಿದ್ದೀರಿ ? ಸೌಮ್ಯವಾದದಲ್ಲಿ ಬಹಳ ನಂಬಿಕೆ ಇರತಕ್ಕ ಜನ ನೀವು. ಏತಕ್ಕೆ ಗುಂಡುಹಾರಿಸುತ್ತಿದ್ದೀರಿ ? ಅಧಿಕಾರಕ್ಕೆ ಬಂದಮೇಲೆ ರಾಜ್ಯದಲ್ಲಿ ಶಾಂತಿ ಸ್ಥಾಪನೆ ಮಾಡುತ್ತೇವೆಂದು ಜನತೆಗೆ ಭರವಸೆ ಕೊಟ್ಟಿದ್ದೀರಿ ? ಗುಂಡು ಹಾರಿಸತಕ್ಕ ಪ್ರಸಂಗಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿ ಅಧಿಕಾರಕ್ಕೆ ಬಂದಿರಿ. ಜನಗಳು ಕೂಡ ನಿಮ್ಮ ಮೇಲೆ ಭರವಸೆ ಇಟ್ಟುಕೊಂಡು ಕಾದಿದ್ದಾರೆ. ಜನಗಳಲ್ಲಿ ಶಾಂತಿ ಇರುವವರೆಗೆ ಇದು ಇರುತ್ತದೆ. ಶಾಂತಿ ಮುಗಿದ ಮೇಲೆ ನಾವು ಅಲ್ಲಿಗೆ ಬರುತ್ತೇವೆ. ನೀವು ಇಲ್ಲಿಗೆ ಬರುತ್ತೀರಿ. ಇವೊತ್ತು ಪೋಲೀಸ್‌ನವರು ಗುಂಡು ಹಾರಿಸಿದ ವಿಚಾರ ಬಂದರೆ, ಮಾನ್ಯ ರಾಚಯ್ಯನವರು ಕಣ್ಣೆದುರಿಗೆ ನಿಂತುಕೊಳ್ಳುತ್ತಾರೆ. ಅವರ ಬಗ್ಗೆ ಏನಾದರೂ ಮಾತನಾಡಿದರೆ ಸಿಟ್ಟು ಬರುತ್ತದೆ ಬಿ.ಪಿ. ಜಾಸ್ತಿಯಾಗಿ ಏನಾದರೂ ಆಗಬಹುದೆಂಬ ಹೆದರಿಕೆಯಾಗುತ್ತದೆ. ಮಾನ್ಯ ಹೆಗಡೆಯವರು ಅಧಿಕಾರಕ್ಕೆ ಬಂದಾಗಿನಿಂದ ಸಾವಿರಾರು ವಾಗ್ದಾನಗಳನ್ನು ಮಾಡಿದ್ದಾರೆ. ಅವರ ಪಟ್ಟಿಯನ್ನು ಕೂಡ ನಾನು ಮಾಡಿದ್ದೇನೆ. ಅವರು ಯಾವ ಯಾವುದನ್ನು ಕಾರ್ಯಗತ ಮಾಡಿದ್ದಾರೋ ನೋಡೋಣ. ಇವೊತ್ತು ಪೋಲೀಸ್ ಇಲಾಖೆಯಲ್ಲಿ ಇಂಟಲಿಜನ್ಸ್ ಬ್ಯೂರೋ ಇದೆ. ಎಸ್.ಎಸ್.ಬಿ. ಇದೆ. ಗುಪ್ತ ದಳ ಇದೆ. ಇಷ್ಟೆಲ್ಲಾ ಇದ್ದು ರಾಮನಗರದಲ್ಲಿ ನಡೆದಂಥ ಗಲಭೆಯನ್ನು ನಿರ್ಬಂದ ಮಾಡಲಿಕ್ಕೆ ಹಾಗದೆ, ತಮ್ಮ ಅಶಕ್ತತೆಯನ್ನು ತೋರಿಸಿದ್ದೀರಿ. ೨೬–೭–೮೬ರಂದು ನಡೆದಂಥ ಘಟನೆ ಬಗ್ಗೆ ಪತ್ರಿಕೆಯಲ್ಲಿ ಒಂದು ವಿಚಾರ ಬಂದಿದೆ. "The tragic events in Ramanagaram, no less than in Ahamedabad, underline the bankrupcy of this approach in dealing with communal and caste conflicts that are tearing the social fabric apart". ಇಲ್ಲಿ ಪೋಲೀಸ್ ಇಲಾಖೆ ಇವೆ, ಇಲ್ಲಿ ಆಡಳಿತ ಯಾರು ನಡೆಸುತ್ತಿದ್ದಾರೆ, ಸಹಜವಾಗಿ ಅವರು Administrative insight in to the conduct and behaviour of the people ಹೊಂದಿರಬೇಕು is it there ? I very much doubt there is no administrative insight into these people behaviour. ಪೋಲೀಸ್ ಇಲಾಖೆಯನ್ನು ಇಟ್ಟುಕೊಂಡು ಗಲಭೆಯನ್ನು ನಿಲ್ಲಿಸತಕ್ಕ ವ್ಯವಸ್ಥೆ ಮಾಡಲಿಲ್ಲ ಎಂದರೆ ಇವರು ರಾಜ್ಯದ ಆಡಳಿತವನ್ನು ಮಾಡತಕ್ಕ ಅರ್ಹತೆಯನ್ನು ಹಂತಹಂತವಾಗಿ ಕಳೆದುಕೊಳ್ಳುತ್ತಿದ್ದಾರೆಂದು ನನಗೆ ಭಾಸವಾಗುತ್ತದೆ. ಗಲಭೆ ಏತಕ್ಕೆ ಬರುತ್ತದೆ ? ಯಾರು ಮಾಡುತ್ತಾರೆ ? ಶ್ರೀಮತಿ ಬೇಗಂ ಅವರು ಒಂದು ಮಾತು ಹೇಳಿದರು, ಹಿಂದುಗಳು ಮುಸ್ಲಿಮರ ಮೇಲೆ ಬೀಳುವುದಿಲ್ಲ, ಮುಸ್ಲಿಮರು ಹಿಂದುಗಳ ಮೇಲೆ ಬೀಳುವುದಿಲ್ಲ ಎಂದು. ಏನೋ ಒಂದು ಸಣ್ಣ ಕಾರಣಕ್ಕಾಗಿ ಚನ್ನಪಟ್ಟಣದಲ್ಲಿ ಗಲಭೆ ಆಯಿತು, ರಾಮನಗರದಲ್ಲಿ ಆಯಿತು. ಅಲ್ಲಲ್ಲಿ ಗುಂಡು ಹಾರಿಸಿದಿರಿ. ಏತಕ್ಕಾಗಿ ಹಾರಿಸಿದಿರಿ ? ಇಲ್ಲಿ ವಿಷಯ ಚಿಕ್ಕದು. ಇದಕ್ಕೆ ಯಾರು ಕಾರಣೀಭೂತರಾಗಿದ್ದಾರೆ ಅವರನ್ನು ಕಂಡುಹಿಡಿದು ತಡವಾಗದ ರೀತಿಯಲ್ಲಿ ತಕ್ಷಣ ಮಟ್ಟ ಹಾಕಿದ್ದರೆ ಗಲಭೆ ಎಲ್ಲಿ ಉಂಟಾಗುತ್ತಿತ್ತು ? ರಾಮನಗರವಾಗಲಿ, ಚನ್ನಪಟ್ಟಣವಾಗಲಿ, ಯಾವುದೇ ಆಗಲಿ ಅಲ್ಲಿ ಯಾರೋ ಒಬ್ಬಿಬ್ಬರು ನಾಯಕರು ಇರುತ್ತಾರೆ. ಅವರು ಹಿಂದುಗಳು ಇರಬಹುದು, ಮುಸ್ಲಿಮರು ಇರಬಹುದು. ಅವರು ಗಲಭೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ, ಪ್ರಚೋದನೆ ಮಾಡುತ್ತಾರೆ, ಸುಳ್ಳು ವದಂತಿಗಳನ್ನು ಹಬ್ಬಿಸುತ್ತಾರೆ. ಇಂಥವರ ಮೇಲೆ ಕ್ರಮ ತೆಗೆದುಕೊಂಡಿಲ್ಲವೆಂದು ಸರ್ಕಾರದ ಮೇಲೆ ಚಾರ್ಜ್ ಮಾಡುತ್ತೇನೆ. ಬಡವರಿಗೆ, ತಿಳಿವಳಿಕೆ ಇಲ್ಲದವರಿಗೆ, ಅನಕ್ಷರಸ್ಥರಿಗೆ, ಕೂಲಿಗಾರರಿಗೆ ಎಲ್ಲ ಹಣ ಕೊಟ್ಟು ಅವರಿಂದ ಹೊಡೆದಾಟ ಮಾಡಿಸುತ್ತಾರೆ. ಯಾರು ಅವರನ್ನು ಪ್ರಚೋದಿಸಿ, ಪುಸಲಾಯಿಸಿ, ತಮ್ಮ ವೈಯಕ್ತಿ ಸೇಡನ್ನು, ಸಿಟ್ಟನ್ನು ತೀರಿಸಿಕೊಳ್ಳುವುದಕ್ಕೆ ಬಿಡುತ್ತಿದ್ದಾರೆ ಅಂಥವರ ಮೇಲೆ ಇವತ್ತಿನವರೆಗೆ ಈ ಸರ್ಕಾರ ಕ್ರಮ ಕೈಗೊಳ್ಳುವುದರಲ್ಲಿ ವಿಫಲವಾಗಿದೆ. ಇದು ಸ್ಪಷ್ಟವಾದ ಮಾತು. ನಾನು ಆಲ್ ಇಂಡಿಯ ಕಾಂಗ್ರೆಸ್ ಕಮಿಟಿಯಲ್ಲಿ ಸ್ಪೆಷಲ್ ರೆಪ್ರಸಂಟೇಟೀವ್ (ಮುಸಲ್ಮಾನ್, ಬ್ಯಾಕ್‌ವರ್ಡ್ ಕ್ಲಾಸ್, ಷೆಡ್ಯೂಲ್ಡ್ ಕ್ಯಾಸ್ಟ್) ಆಗಿ ೩ ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ನನಗೆ ಇದರ ಕಾರಣಗಳೆಲ್ಲ ಗೊತ್ತು. ಕಮ್ಯೂನಲ್ ಫೈಟ್ಸ್ ಏತಕ್ಕೆ ಆಗುತ್ತದೆಂಬುದು ಗೊತ್ತು. ಇವು ಪ್ರಚೋದನೆಯಿಂದ ಆಗುತ್ತವೆಯೋ ಹೊರತು ಬೇರೆ ಕಾರಣಗಳಿಂದ ಆಗುವುದಿಲ್ಲ. ಕರ್ನಾಟಕದಲ್ಲಾಗಲಿ, ಇಂಡಿಯಾ ದೇಶದಲ್ಲಾಗಲಿ ಹಿಂದು ಮುಸ್ಲೀಮರು ಸಹೋದರರಂತೆ ಬಾಳ್ವೆ ಮಾಡುತ್ತಾರೆಯೋ ಹೊರತು ವೈರಿಗಳಾಗಿ ಮಾಡುವುದಿಲ್ಲ. ವೈರಿಗಳಾಗಿ ಬಾಳತಕ್ಕ ಸನ್ನಿವೇಶವನ್ನು ಎಲ್ಲಿಯೂ ನೋಡಿಲ್ಲ. ಪ್ರಚೋದನೆ

ಆದ ಕಾಲದಲ್ಲಿ ಒಂದು ಸನ್ನಿವೇಶ ಇರಬಹುದೇ ಹೊರತು ಹಿಂದುಗಳು, ಮುಸ್ಲಿಮರು ಎಂಬ ಭೇದ ಭಾವವನ್ನಿಟ್ಟುಕೊಂಡು ಬಾಳುವುದನ್ನು ನೋಡಿಲ್ಲ. ಎಲ್ಲರೂ ಸಹೋದರರು ಎಂದು ಪರಸ್ಪರ ತಿಳಿದು ಕೊಂಡಿದ್ದಾರೆ. ಕ್ರಿಶ್ಚಿಯನ್ ಮುಸ್ಲಿಮರಲ್ಲೂ ಭೇದಭಾವವನ್ನು ನೋಡಿಲ್ಲ. ಯಾರು ಆಡಳಿತ ನಡೆಸುತ್ತಿದ್ದಾರೆ, ಸರ್ಕಾರ ನಡೆಸುತ್ತಿದ್ದಾರೆ ಅವರಿಗೆ ಈ ಒಂದು ಪ್ರಜ್ಞೆ ಇರಬೇಕು. ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಅಧಿಕಾರ ದುರುಪಯೋಗ ಮಾಡುವುದು ಒಂದು ಕಾರಣ ಇರಬಹುದು. ಆದರೆ ನಿಜವಾಗಿ ಅಧಿಕಾರ ನಡೆಸತಕ್ಕವರಿಗೆ ಮೂಲಭೂತವಾಗಿ ಅಡ್ಮಿನಿಸ್ಟ್ರೇಟೀವ್ ಕಂಟ್ರೋಲ್ ಅಡ್ಮಿನಿಸ್ಟ್ರೇಟೀವ್ ಎಫಿಷಿಯನ್ಸಿ, ಅಂಡರ್‌ಸ್ಟ್ಯಾಂಡಿಂಗ್ ಆಫ್ ದಿ ಹ್ಯೂಮನ್ ಲೈಫ್ ಅಂಡ್ ಬಿಹೇವಿಯರ್ ಕಮ್ಯುನಲ್ ಫೀಲಿಂಗ್ಸ್ ಇನ್ ದಿ ಸೊಸೈಟಿ ಇವುಗಳ ಪರಿಜ್ಞಾನ ಇರಬೇಕು. ಇವೊತ್ತಿನ ದಿವಸ ನಾನು ಇಂಡಿಯಾ ದೇಶದಲ್ಲಿ ಎಲ್ಲಾ ನೋಡಿದ್ದೇನೆ, ಯಾವ ಲೀಡರ್ ಕೂಡ ಹೊಡೆದಾಟದಲ್ಲಿ ಸಿಕ್ಕಿಹಾಕಿಕೊಂಡಿರುವುದಿಲ್ಲ. ಬಡವರು, ಕೂಲಿಗಾರರು ಯಾರು ೫–೧೦ ರೂಪಾಯಿಗಳನ್ನು ತೆಗೆದುಕೊಂಡು ಪ್ರಚೋದನೆಗೆ ಪ್ರೇರೇಪಿತರಾಗಿರುತ್ತಾರೆ ಅಂಥವರು ಸಾಯು ತ್ತಾರೆ. ನಮ್ಮಲ್ಲಿ ಅಧಿಕಾರಿಗಳೇನಿದ್ದಾರೆ ಅವರಿಗೆ ಇದು ಗೊತ್ತಿಲ್ಲವೆಂದು ಅಲ್ಲ. ಅವರು ನಾವು ಏತಕ್ಕೆ ನೋಡಬೇಕು, ಪೋಲೀಸ್ ಇಲಾಖೆ ಇದೆ ಎನ್ನುತ್ತಾರೆ. ಅವರು ದರ್ಪ ಮಾಡಲಿಕ್ಕೆ ಹೋಗು ತ್ತಾರೆಯೇ ಹೊರತು ಸೇವೆ ಮಾಡಬಯಸುವುದಿಲ್ಲ. ಸಮಾಜ ಸೇವಕರಾದವರೂ ಕೂಡ ಸಮಾಜದಲ್ಲಿ ಏನು ನ್ಯೂನತೆಗಳಿವೆ ಅವುಗಳನ್ನು ನಿವಾರಣೆ ಮಾಡಿ ಜನರು ಸತ್ಪ್ರಜೆಗಳಾಗುವುದಕ್ಕೆ ಸಹಾಯಕ ರಾಗಬೇಕು ಎಂದು ಇದ್ದರೆ ಇಂಥ ಗಲಭೆಗಳು ಆಗುವುದಿಲ್ಲ. ಇಂಡಿಯಾ ದೇಶದಲ್ಲಿ ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ ಎಲ್ಲಿಯಾದರೂ ಇಂಥ ಗಲಭೆಗಳಾದರೆ ಅದು ಪ್ರಚೋದನೆಯಿಂದ ಪೋಲೀಸ್ ಅಧಿಕಾರಿಗಳ ಅಧಕ್ಷತೆಯಿಂದ ಮತ್ತು ಸರ್ಕಾರದ ನಿರಾಶಕ್ತಿಯಿಂದಲೇ ಹೊರತು ಬೇರೆ ಅಲ್ಲ. ಸಾಮಾನ್ಯವಾಗಿ ಗಲಾಟೆಯಾಗತಕ್ಕದ್ದು ಆಸ್ತಿಗಳ ವಿಚಾರದಲ್ಲಿ ಹೆಣ್ಣುಗಳ ಸಲುವಾಗಿ ಮತ್ತು ಜಾತಿ ಮತಗಳ ವಿಚಾರದಲ್ಲಿ. ದಕ್ಷಿಣ ಭಾರತದಲ್ಲಿ ಬೇರೆ ಇನ್ನಾವುದಕ್ಕೂ ಆಗುವುದಿಲ್ಲ. ನಮ್ಮ ದೇಶದಲ್ಲಿ ರಾಜ್ಯದಲ್ಲಿ ಗಲಾಟೆಯಾಗಬೇಕಾದರೆ ಮೊದಲು ಪೊಲೀಟಿಕಲ್ ಅಜಿಟೇಷನ್ ಶುರುವಾಗುತ್ತದೆ. ಜನತಾ ಪಾರ್ಟಿಯಲ್ಲಿ, ಕಾಂಗ್ರೆಸ್ ಪಾರ್ಟಿಯಲ್ಲಿ ಅಜಿಟೇಷನ್ ಶುರುವಾದರೆ ಪೋಲೀಸರು ಯಾವ ಕಡೆ ಸೇರ ಬೇಕು ? ಜನತಾ ಪಾರ್ಟಿಯವರು ಸರ್ಕಾರ ನಡೆಸುತ್ತಿದ್ದಾರೆ ಅಂದಾಗ ಅವರ ಕಡೆ ಸೇರಬೇಕು. ಆಗ ಕಾಂಗ್ರೆಸ್ಸಿನವರಿಗೆ ಬೆಂಬಲ ಎಲ್ಲಿ ಬರುತ್ತದೆ ? ಅವರಿಗೆ ಬೆಂಬಲ ಕೊಡುವುದಕ್ಕಾಗುವುದಿಲ್ಲ. ಯಾರು ಅಧಿಕಾರದಲ್ಲಿರುತ್ತಾರೆ ಅಂಥವರ ಸೇವಕರಾಗುತ್ತಾರೆ. ಅಧಿಕಾರ ಇರಲಿ, ಇಲ್ಲದಿರಲಿ ಎಲ್ಲರೂ ನಾಗರೀಕರು ಎಲ್ಲರೂ ನಾಡಿನ ಪ್ರಜೆಗಳು, ಎಲ್ಲರಿಗೂ ರಕ್ಷಣೆ ಕೊಡಬೇಕು, ರಾಜ್ಯದಲ್ಲಿ ಶಾಂತಿ ಸ್ಥಾಪನೆ ಮಾಡಬೇಕೆಂಬ ಒಳ್ಳೆಯ ಬುದ್ಧಿ ಅಧಿಕಾರಿಗಳಲ್ಲಿ ಬಂದರೆ ಇಂಥ ಗಲಭೆಗಳು ಆಗುವು ದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ರಾಮನಗರದಲ್ಲಿ ಆಳಂದದಲ್ಲಿ, ಚನ್ನಪಟ್ಟಣದಲ್ಲಿ ಎಲ್ಲಾ ಗಲಾಟೆ ನಡೆದಿದೆ ಅಂದಾಗ ನೀವು ಇಂಟಲಿಜನ್ಸ್ ಡಿಪಾರ್ಟ್‌ಮೆಂಟ್‌ನವರನ್ನು ಏತಕ್ಕೆ ಇಟ್ಟಿದ್ದೀರಿ ? ಅವರಿಗೆ ಏನು ಕೆಲಸ ? ಸಿಓಡಿ. ಸಿಐಡಿ. ಯವರಿಗೆ ಏನು ಕೆಲಸ ? ಇಂಟಲಿಜನ್ಸ್ ಇಲಾಖೆಯವರು ಕರ್ನಾಟಕ ರಾಜ್ಯದಲ್ಲಿ ಸ್ವತಂತ್ರವಾಗಿ ಕೆಲಸ ಮಾಡುವುದಿಲ್ಲ. ಇವರು ಏನು ಮಾಡುತ್ತಾರೆಂಬುದನ್ನು ನನ್ನ ಸ್ವಂತ ಅನುಭವದಿಂದ ಹೇಳುವುದಾದರೆ, ನೇರವಾಗಿ ಪೋಲೀಸ್ ಆಫೀಸರ್ ಹತ್ತಿರ ಹೋಗಿ ಅವರು ಹೇಳಿದ್ದನ್ನು ಬರೆದುಕೊಂಡು ಬರುತ್ತಾರೆ. ಮಂತ್ರಿಗಳ ಹತ್ತಿರ ಹೋಗಿ ಅವರು ಹೇಳಿದ್ದನ್ನು ಬರೆದುಕೊಂಡು ಬರುತ್ತಾರೆ. ಹೀಗಾಗಿ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟಿನವರು ಸ್ವತಂತ್ರವಾಗಿ ಕೆಲಸ ಮಾಡುವುದಿಲ್ಲವೆಂದ ಮೇಲೆ ನಮಗೆ ಕಾಲಕ್ಕೆ ಸರಿಯಾಗಿ ಮಾಹಿತಿ ಸಿಗುವುದಿಲ್ಲ. ಈಗ ನಾವು ಯಾರಿಗೆ ಬುದ್ಧಿ ಹೇಳಬೇಕು ? ಸರ್ಕಾರ ನಡೆಸುವವರಿಗೆ ನಾವು ಈಗ ಬುದ್ಧಿ ಹೇಳಬೇಕಾಗಿದೆ. ಮುಖ್ಯಮಂತ್ರಿಗಳಾದವರು ಹಾಗೆ ಮಾಡಬೇಡಿ ಎಂದು ಎಲ್ಲರಿಗೂ ಬುದ್ಧಿ ಹೇಳಬೇಕು. ಅವರು ಜವಾಬ್ದಾರಿ ವಹಿಸಿಕೊಂಡು ನ್ಯೂನತೆಗಳನ್ನು ಪರಿಹರಿಸಬೇಕು. ನಾನು ಡೆಪ್ಯೂಟಿ ಹೋಂ ಮಿನಿಸ್ಟರ್ ಆಗಿದ್ದಾಗ ಮಂಡ್ಯದಲ್ಲಿ ಒಂದು ಯೋಜನೆಯನ್ನು ಜಾರಿಗೆ ತಂದೆ. ಆ ಯೋಜನೆಯ ಹೆಸರು ''ಪೋಲೀಸ್ ಟ್ರೀಟ್‌ಮೆಂಟ್ ಮೆತಡ್'' ಎಂದು ಅಂದರೆ ಏನು ? ಮಂಡ್ಯ ಜಿಲ್ಲೆಯಲ್ಲಿ ಬಹಳ ಗಲಾಟೆ ಮಾಡುತ್ತಾರೆಂದು ತಿಳಿದುಕೊಂಡಿದ್ದೆ. ಆಮೇಲೆ ಆ ಭಾವನೆ ತಪ್ಪಾಯಿತು. ರಾವ್ ಎಂಬುವವರು ಡಿಐಜಿ ಯಾಗಿ ನಿವೃತ್ತರಾದರು. ಅವರನ್ನು ಅಲ್ಲಿ ಎಸ್.ಪಿ. ಮಾಡಿ ಇಟ್ಟಿದ್ದೆ. ಆ ಒಂದು ಯೋಜನೆ ಪ್ರಕಾರ ಯಾವ ಯಾವ ತಾಲ್ಲೂಕುಗಳು ಯಾವ ಯಾವ ಸ್ಟೇಷನ್ ಆಫೀಸರ್ ವ್ಯಾಪ್ತಿಯಲ್ಲಿ ಬರುತ್ತವೆ ಅವರು ಆ ತಾಲ್ಲೂಕಿನಲ್ಲಿರತಕ್ಕ ಎಲ್ಲಾ ಅಪರಾಧಿಗಳನ್ನು ಎಂದರೆ ಕಮ್ಯು ನಲ್ ಫೈಟ್ ಮಾಡತಕ್ಕವರು, ಮರ್ಡರ್ ಮಾಡತಕ್ಕವರು, ಕಳ್ಳತನ ಮಾಡುವವರು, ಸುಳ್ಳು ಹೇಳುವವರು ಇಂಥವರನ್ನೆಲ್ಲ ಹಿಡಿದುಕೊಂಡು ಬರುವುದು ಅವರ ಕೆಲಸ ಆಗಿತ್ತು. ಅಲ್ಲದೆ ಅವರಿಗೆ ಎಚ್ಚರಿಗೆ ನೀಡಿ ನಿಮ್ಮ ಊರಿನಲ್ಲಿ ಏನಾದರೂ ಮರ್ಡರ್ ಆದರೆ, ಕಳ್ಳತನವಾದರೆ ನಿನ್ನನ್ನೇ ಹಿಡಿಯು

ತ್ತೇವೆಂದು ಹೇಳುವುದು ಆಗಿತ್ತು. ಹೀಗೆ ಪ್ರತಿಯೊಬ್ಬ ಅಪರಾಧಿಗಳ ಪಟ್ಟಿ ಸ್ಟೇಷನ್ ಆಫೀಸರ್ ಹತ್ತಿರ ಇರುತ್ತಿತ್ತು. ಹೀಗೆ ಮಾಡಿದ್ದರಿಂದ ೬ ತಿಂಗಳ ಅವಧಿಯಲ್ಲಿ ಒಂದು ದೂರಾಗಲಿ, ಮರ್ಡರ್ ಕೇಸ್ ಆಗಲಿ ಇರಲಿಲ್ಲ. ಸುಳ್ಳು ಹೇಳುವವರೇ ಇರಲಿಲ್ಲ. ಕಳ್ಳತನ ಮಾಡುವವರೇ ಇರಲಿಲ್ಲ. ಆ ಸಂದರ್ಭದಲ್ಲಿ ಅಲ್ಲಿದ್ದ ಐ.ಜಿ.ಪಿ.ಯವರು ನೀವು ಈ ಯೋಜನೆಯನ್ನು ತಂದದ್ದರಿಂದ ನನಗೆ ಒಂದು ದೂರೂ ಇಲ್ಲವಾಗಿ ಕೆಲಸವೇ ಇಲ್ಲದಂತಾಗಿದೆ, ಮ್ಯಾಜಿಸ್ಟ್ರೇಟರಿಗೂ ಕೆಲಸ ಇಲ್ಲ, ಚಾರ್ಜ್ ಷೀಟ್ ಹಾಕುವವರೇ ಇಲ್ಲ ಇದನ್ನು ತೆಗೆಯಿರಿ ಎಂದರು. ಹೀಗೆ ಶ್ರದ್ಧಾಭಕ್ತಿಯಿಂದ ಪೋಲೀಸ್ ಅಧಿಕಾರಿಗಳು (ಸ್ಟೇಷನ್ ಆಫೀಸರ್) ಯಾರಿರುತ್ತಾರೆ ಅವರು.........

ಅಧ್ಯಕ್ಷರು.—೧೫ ನಿಮಿಷವಾಯಿತು ತಾವು ದಯವಿಟ್ಟು ಮುಗಿಸಿ. ಸಾಕಷ್ಟು ಮಾತನಾಡಿದ್ದೀರಿ. ಇಬ್ಬರೂ ಮಾಜಿ ನಾಯಕರೇ.........

ಶ್ರೀ ಬಿ. ಬಸವಲಿಂಗಪ್ಪ.—ನನ್ನನ್ನು ಸಾಮಾನ್ಯ ಸದಸ್ಯನೆಂದು ತಿಳಿದುಕೊಳ್ಳಿ.

ಅಧ್ಯಕ್ಷರು.—ನೀವು ಮುಗಿಸದಿದ್ದರೆ ಮತ್ತೊಬ್ಬರನ್ನು ಕರೆಯುತ್ತೇನೆ.

೫—೦೦ ಪಿ. ಎಂ.

ಶ್ರೀ ಬಿ. ಬಸವಲಿಂಗಪ್ಪ.—ಹೊಸ ವಿಚಾರ ಹೇಳಿದರೆ ನಿಮಗೆ ಹೇಗೆ ಅನಿಸುತ್ತದೆ ? ಅವರು ಹೇಳಿದನ್ನು ನಾನು ಏನೂ ಹೇಳಲಿಲ್ಲ.

ಅಧ್ಯಕ್ಷರು.—ನಿಮಗಿಂತ ಹೆಚ್ಚಿನ ಮಹತ್ವದ ವಿಷಯಗಳನ್ನು ಅವರು ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಪ್ಪ.—ನಾನು ಒಂದು ಸಲಹೆಯನ್ನು ಮಾಡುತ್ತಿದ್ದೇನೆ. Every Station House Police Officer should be made responsible for all the commissions and omissions in his jurisdiction and then the Officer superior to him must also be made personally responsible. If you make this arrangement, then, I don't think any crime will take place.

I respectfully submit to you because I am having one or two minites more at my disposal, and with to state that the above arrangement should be made. This is the way of Police administaration and if the Government forget about it and if the Govenment has no knowledge about it and if the Government has no inention to enforce this law and order in state, I con not help. Let them do it as they want and let them continue this 'gundu' business *i.e.*, this 'gundt harisuvudu business'. Let people tolerate them as long as they want and if they don't tolerate, let us see the day when the people rebel against these people.

ಅಧ್ಯಕ್ಷರು.—ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ.—ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಎಂದು ದೊಡ್ಡ ದೊಡ್ಡ ಹೆಸರುಗಳನ್ನು ಮಾಡಿ ಕೊಟ್ಟುಬಿಟ್ಟಿದ್ದಾರೆ. ಅವರುಗಳನ್ನು ಎಷ್ಟು ವರ್ಷ ಒಂದೇ ಸ್ಥಾನದಲ್ಲಿ ಇಟ್ಟುಕೊಳ್ಳುವುದು ? ಜವಾನರನ್ನು ಒಂದೆರಡು ವರ್ಷ ಮನೆಯಲ್ಲಿಯೇ ಇಟ್ಟುಕೊಂಡರೆ ನಮ್ಮ ಮೇಲೆ ಸವಾರಿ ಮಾಡಿಬಿಡುತ್ತಾರೆ. ನಾನಂತೂ ಇಟ್ಟುಕೊಳ್ಳುವುದಿಲ್ಲ. ಹಾಗೆಯೇ ಯಾವ ಅಧಿಕಾರಿಯನ್ನು ಜವಾಬ್ದಾರಿ ಸ್ಥಾನದಲ್ಲಿ ಇಟ್ಟರೂ ಆತನನ್ನು ಎರಡು ವರ್ಷಕ್ಕಿಂತ ಹೆಚ್ಚಿಗೆ ಇಟ್ಟುಕೊಳ್ಳಬಾರದು. ಆದ್ದರಿಂದ ಇವರೆಲ್ಲರೂ ಅಸಮರ್ಥತೆಗೆ ಮತ್ತು ಸಮರ್ಥತೆಗೆ ಗಂಟುಬಿದ್ದು ಹೋಗಿರುತ್ತಾರೆ. ಯಾರಿಗೂ ಕೇರ್ ಮಾಡುವುದಿಲ್ಲ. ಡಿ. ಜಿ. ಪಿ. ಎನ್ನತಕ್ಕಂಥ ಬೇರೆ ಬೇರೆ ಸ್ಥಾನಗಳು ಗೌರ್ನಮೆಂಟ್ ಆಫ್ ಇಂಡಿಯಾದಲ್ಲೂ ಇವೆ. ಯಾವುದೇ ಅಧಿಕಾರಿಯನ್ನಾದರೂ ಎರಡುವರ್ಷಗಳಿಗಿಂತ ಹೆಚ್ಚಿಗೆ

ಆದೇಸ್ಥಾನದಲ್ಲಿ ಇಟ್ಟುಕೊಳ್ಳಬಾರದು. ಇದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ನಾನು ಹೇಳುವುದು ನಿಮ್ಮ ಕಿವಿಗೆ ಬೀಳುವುದಿಲ್ಲ. ಏತಕ್ಕೆ ಗುಂಡುಹಾರಿಸಬಾರದು ? ಗಲಭೆ ಆಗಬಾರದೇ ? ರಾಜ್ಯದಲ್ಲಿ ಖೂನಿಗಳು ಆಗಬಾರದೇ ? ಕಳ್ಳತನಗಳು ಆಗಬಾರದೇ ? ನಿಮಗೆ ಸಮಯ ಬಂದಾಗ ಅರೆಸ್ಟ್ ಮಾಡಿಕೊಂಡು ಬರುತ್ತೀರಿ. ಎಲ್ಲಾ ಮುಗಿದಮೇಲೆ ಮಹಜರು ಬರೆದುಕೊಳ್ಳುತ್ತೀರಿ. ಸಿಕ್ಕಿದವರನ್ನು ಹಿಡಿದುಕೊಂಡು ಬಂದು ಪೋಲೀಸ್ ಸ್ಟೇಷನ್‌ಗೆ ಹಾಕುತ್ತೀರಿ. ಆದ್ದರಿಂದ ನಾನು ಕೊನೆಯದಾಗಿ ಹೇಳುತ್ತಿದ್ದೇನೆ. ಮುಂದೆ ಸರ್ಕಾರ ಇಂಥ ಪರಿಸ್ಥಿತಿ ಬಾರದ ರೀತಿಯಲ್ಲಿ ಮುನ್ನೆಚ್ಚರಿಕೆಯನ್ನು ವಹಿಸಬೇಕು. "They must take preventive actions though Intelligence or though various other mrthods and make the Station House Police Officer a responsible person and supeirior Officers should also be made personally respansible for all the acts of crime."

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಈ ದಿನ ಬಹಳ ಗಂಭೀರವಾದ ಸಮಸ್ಯೆಯ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಇದು ತೀರಾ ಗಂಭೀರವಾದ ಸಮಸ್ಯೆ ಎಂದು ಏತಕ್ಕೆ ಹೇಳುವುದು ಎಂದರೆ ಈ ಕೋಮುವಾರು ಘರ್ಷಣೆಗಳು, ಭಾಷಾವಾರು ಘರ್ಷಣೆಗಳು, ಈ ಘರ್ಷಣೆಗಳು ಇದೇನೂ ಕರ್ನಾಟಕ ರಾಜ್ಯದಲ್ಲಿ ಮಾತ್ರ ನಡೆದುದು ಅಲ್ಲ. ಇದು ದೇಶಾದ್ಯಂತ ಎಲ್ಲಾ ಕಡೆಯೂ ಅನೇಕ ಕಡೆಗಳಲ್ಲಿ ಈ ತರಹ ಕೋಮುವಾರು ಘರ್ಷಣೆಗಳು ಹೆಚ್ಚು ಹೆಚ್ಚು ನಡೆದುಕೊಂಡು ಬರುತ್ತಿವೆ. ಆದರೂ ತಮಗೆಲ್ಲಾ ಗೊತ್ತಿರುವ ಹಾಗೆ ಅಹಮದಬಾದ್‌ನಲ್ಲಿ ಏನು ನಡೆದುಕೊಂಡು ಬಂದಿದೆ, ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ ಅನೇಕರು ಸತ್ತಿದ್ದಾರೆ, ಸುಮಾರು ದಿನಗಳಿಂದಲೂ ಅಲ್ಲಿ ಘರ್ಷಣೆ ನಡೆದುಕೊಂಡು ಬರುತ್ತಿದೆ. ಇಂದೂ ಕೂಡಾ ಅಲ್ಲಿ ಬಹಳ ಟೆನ್ಷನ್ ಇದೆ ಎಂದು ಪತ್ರಿಕೆಯಲ್ಲಿ ಬರುತ್ತಿದೆ. ಮತ್ತೆ ಪತ್ರಿಕೆಗಳ ಪ್ರಕಾರ ಆ ಪ್ರಾಂತ್ಯದಲ್ಲಿ ೩೮ ಈ ತರಹ ಕೋಮುವಾರು ಘರ್ಷಣೆ ನಡೆದಿದೆ ಎಂದು ಅಲ್ಲಿನ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಜೊತೆಯಲ್ಲಿ ಮಹಾರಾಷ್ಟ್ರ, ಅಲ್ಲಿಯೂ ಕೆಲವು ಕಡೆ ಕೋಮುವಾರು ಘರ್ಷಣೆಯಾಗಿದೆ. ಅದರ ಜೊತೆಯಲ್ಲಿ ತಮಗೆ ಗೊತ್ತಿರುವ ಹಾಗೆ ಪಂಜಾಬ್‌ನಲ್ಲಿಯೂ ಕೂಡಾ ಕೋಮುವಾರು ಘರ್ಷಣೆ ಜೊತೆಗೆ ಭಯೋತ್ಪಾದಕರು ಬಂದು ತಮ್ಮದೇ ಆದ ರೀತಿಯಲ್ಲಿ ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಹಿಂದೂ ಸಿಕ್ ಘರ್ಷಣೆ ದೆಹಲಿಯಲ್ಲಿ ನಡೆದುಕೊಂಡು ಬರುತ್ತಿದೆ. ರಾಮನಗರಂ, ಆಳಂದ್ ಮತ್ತು ಬೆಳಗಾಂನಲ್ಲಿಯೂ ಕೂಡಾ ಇದೇ ಹಿನ್ನೆಲೆಯಲ್ಲಿ ನಡೆದಿದೆ ಎಂಬುದನ್ನು ನಾವು ಮರೆಯುವ ಹಾಗಿಲ್ಲ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ, ಕರ್ನಾಟಕ ರಾಜ್ಯ ಮಾತ್ರ ಬೇರೆ, ಇದು ದ್ವೀಪದ ತರಹ ಯಾವ ರೀತಿಯ ಸೋಂಕು ಇರುವುದಿಲ್ಲ, ನಾವು ಬಹಳ ಒಳ್ಳೆಯ ಜನ, ಇಲ್ಲಿ ಕೋಮುವಾರು ಘರ್ಷಣೆ ನಡೆಯುವುದಿಲ್ಲ ಎಂದು ನಾವು ಯೋಚನೆ ಮಾಡಿದರೆ ಅದು ತಪ್ಪಾಗುತ್ತದೆಂದು ನನ್ನ ಅಭಿಪ್ರಾಯ. ಇಂದಿನ ಪರಿಸ್ಥಿತಿಯೊಳಗೆ, ಸಮಾಜದ ಪರಿಸ್ಥಿತಿಯಲ್ಲಿ, ಈ ದೇಶದ ಪರಿಸ್ಥಿತಿಯಲ್ಲಿ ಕೋಮುವಾರು ಹಿತಾಶಕ್ತಿಗಳು, ಪಟ್ಟಭದ್ರ ಹಿತಾಶಕ್ತಿಗಳು, ಮತೀಯ ಹಿತಾಸಕ್ತಿಗಳು, ಜಾತೀಯ ಗಲಭೆ, ಜಾತೀಯ ಮತಾಂಧತೆ ಭಾಷಾಂಧತೆ ಗಲಭೆ ಉಂಟುಮಾಡುವುದಕ್ಕೆ ದೊಡ್ಡ ಪ್ರಮಾಣದಲ್ಲಿ ಹೋರಾಡಿವೆ ಎಂಬುದನ್ನು ನಾವು ಮರೆಯುವ ಹಾಗಿಲ್ಲ ಇದೇ ರೀತಿಯಲ್ಲಿ ರಾಮನಗರದಲ್ಲಿ ಕೂಡಾ ನಡೆದಿದೆ. ರಾಮನಗರದ ವಿಷಯವನ್ನು ನನ್ನ ಸ್ನೇಹಿತರು ಹೇಳಿದ್ದಾರೆ. ಮಾನ್ಯ ಬಂಗಾರಪ್ಪನವರು, ಮೊಯಿಲಿಯವರು ವಿವರಣೆಯನ್ನು ಕೊಟ್ಟಿದ್ದಾರೆ. ನಾನು ಇದನ್ನು ಹೆಚ್ಚು ಮಾಡುವುದಕ್ಕೆ ಹೋಗುವುದಿಲ್ಲ. ಫೀಚರ್ಸ್ ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ೫ ಜನ ಸತ್ತರು, ಪೋಲೀಸ್ ಫೈರಿಂಗ್ ಆಯಿತು, ಲಕ್ಷಾಂತರ ರೂಪಾಯಿಗಳ ನಷ್ಟ ಆಗಿದೆ, ೩೦ ಗುಡಿಸಲುಗಳಿಗೆ ಬೆಂಕಿ ಇಟ್ಟಿದ್ದಾರೆ. ೧೫೦ ಮನೆಗಳಿಗೂ ಜಾಸ್ತಿ ಸುಟ್ಟಿವೆ ಎಂದು ಮೊಯಿಲಿಯವರು ಹೇಳಿದ್ದಾರೆ. ಪಂಪಾಪತಿಯವರು ಸಹಾ ಹೋಗಿದ್ದರು. ಅವರೂ ಸಹಾ ಅದನ್ನೇ ಹೇಳುತ್ತಿದ್ದಾರೆ. ಸುಮಾರು ೧೫೦ ಮನೆಗಳು ಸುಟ್ಟಿವೆ ಅಂಗಡಿಗಳು ಸುಟ್ಟಿದೆ, ಮತ್ತೆ ಜನಗಳಿಗೆ ಏಟು ಬಿದ್ದಿದೆ ಎಂಬುದು ಗೊತ್ತಿರುವಂಥ ವಿಷಯ. ಆಳಂದ್ ಅಲ್ಲಿಯೂ ಸಹಾ ಕಾರು ಹುಣ್ಣಿಮೆಯಲ್ಲಿ ಗೋಲಿಬಾರ್‌ನಲ್ಲಿ ಮೂರು ಜನರು ಸತ್ತಿದ್ದಾರೆ. ಬೆಳಗಾಂನಲ್ಲಿಯೂ ಸಹಾ ಭಾಷೆಯ ಗೊಂದಲ ಉಂಟಾಗಿ ಪ್ರಕ್ಷುಬ್ಧತೆ ಉಂಟಾಗಿ ಗಲಭೆ ಆಗಿರುವುದು ತಮಗೆ ಗೊತ್ತಿರುವಂಥ ವಿಷಯ. ಮತ್ತೆ ಇದನ್ನು ನಾನು ಪುನಃ ಹೇಳಬೇಕಾಗಿಲ್ಲ. ಮೂರು ಜಾಗದಲ್ಲಿ ನಡೆದಿರುವುದನ್ನು ನೋಡಿದರೆ ಇದರಿಂದ ನಾವು ಪಾಠಗಳನ್ನು ಕಲಿತುಕೊಳ್ಳಬೇಕಾಗುತ್ತದೆ. ಇದರಿಂದ ಮುಖ್ಯವಾದ ಒಂದು

ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ಏನೆಂದರೆ ಎಲ್ಲವನ್ನು ನೋಡಿ ಗಲಭೆ ನಡೆದಿರುವ ಬಗ್ಗೆ ಅನಾಲಿಸೀಸ್ ಮಾಡಿ ನೋಡಿದರೆ ಎಲ್ಲಾ ಕಡೆಯೂ ಸಹಾ ಇದನ್ನು ಯೋಜಿತವಾಗಿ ಮಾಡಿದ್ದಾರೆ ಎಂದು ನನ್ನ ಅಭಿಪ್ರಾಯ. ಯೋಜನೆ ಇಲ್ಲದೇ ಬೇಕಾಬಿಟ್ಟಿಯಾಗಿ ಮಾಡುವಂಥ ಗಲಭೆಗಳಲ್ಲ, ಇವು. ಒಂದು ಕಾಲಕ್ಕೆ ನಾನುಕೂಡಾ ಬಸವನಗುಡಿಯಲ್ಲಿ ಇರಬೇಕಾದ ನಮ್ಮ ಮನೆಯ ಹಿಂದೆ ಗುಟ್ಟಹಳ್ಳಿಯಲ್ಲಿ ಏನು ನಡೆದಿತ್ತು ಎಂದರೆ ಯಾರೋ ಚಾಕು ಚೂರಿ ಹಾಕಿದರು, ಎಂದು ಗೊತ್ತಾಯಿತು. ಆಗ ಆ ರೀತಿ ನಡೆಯುತ್ತಿತ್ತು. ಈಗ ಅ ರೀತಿ ನಡೆಯುತ್ತಿಲ್ಲ. ಬಹಳ ಯೋಜಿತ ವಾಗಿ ನಡೆಯುತ್ತದೆ. ರಾಮನಗರದಲ್ಲಿ ಕೂಡಾ ಯೋಜಿತವಾಗ ನಡೆದಿದೆ ಎಂದು ನನ್ನ ಅಭಿಪ್ರಾಯ. ಪತ್ರಿಕೆಯಲ್ಲಿ ವರದಿ ಬಂದ ಪ್ರಕಾರ ಕರಗ ಪ್ರೊಸೆಷನ್ ಹೋಗುತ್ತಿದ್ದರು. ಅಲ್ಲಿ ಶೇಕಡ ೫೦ ರಷ್ಟು ಮುಸಲ್ಮಾನರಿದ್ದಾರೆ. ಈ ಕರಗ ಪ್ರೊಸೆಷನ್‌ನವರು ಮುಸಲ್ಮಾನರ ಜಾಗವನ್ನು ದಾಟಿ ಮುಂದೆ ಹೋದಮೇಲೆ ಕಲ್ಲುಬಿತ್ತು. ಕಲ್ಲುಬಿದ್ದ ತಕ್ಷಣ ಘರ್ಷಣೆ ಆಯಿತು. ಘರ್ಷಣೆ ಮಾತ್ರ ಆ ಜಾಗದಲ್ಲಿ ಆಗಲಿಲ್ಲ. ರಾಮನಗರದ ಸುತ್ತಮುತ್ತಲೂ ಆಗಿದೆ ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಅನೇಕ ಕಡೆ ಚಾಕು ಚೈನು ಹಾಕಿದರು ಎಂದು ಇದೆ. ಇದೇ ರೀತಿಯಲ್ಲಿಯೇ ಅಹಮದಬಾದ್‌ನಲ್ಲಿ ನಡೆದಿದೆ. ಇವೆಲ್ಲಾ ಪ್ರೀ ಪ್ಲಾನ್ಡ್. ಅಲ್ಲಿಯೂ ಕೂಡಾ ಜಗನ್ನಾಥದೇವರ ರಥವನ್ನು ಎಳೆದುಕೊಂಡು ಮುಸಲ್ಮಾನರ ಜಾಗವನ್ನು ದಾಟಿ ಹೋದ ಮೇಲೆ ಕಲ್ಲು ಬಿತ್ತು. ಏಕಾಏಕಿಯಾಗಿ ಇದೇ ರೀತಿಯಾಗಿ ಅಹಮದಾಬಾದ್‌ನಲ್ಲಿ ಗಲಭೆನಡೆದಿದೆ ಆದ್ದರಿಂದ ಇದಕ್ಕೆ ಯೋಜಿತವಾಗಿ ಕೆಲವು ಕೋಮುವಾರು ಶಕ್ತಿಗಳು ಕೆಲಸ ಮಾಡುತ್ತಿವೆ. ತಮ್ಮ ಹಿತವನ್ನು ಸಾಧಿಸಿಕೊಳ್ಳುವುದಕ್ಕೆ ಈ ಯೋಜಿತ ಶಕ್ತಿಗಳು ಕೆಲಸ ಮಾಡುತ್ತಿವೆ ಎಂಬುದನ್ನು ನಾವು ಮರೆಯ ಕೂಡದು ಎಂದು ತಮ್ಮ ಮುಖಾಂತರ ಈ ಸಭೆಗೆ ತಿಳಿಸುತ್ತೇನೆ. ಇದು ಮುಖ್ಯವಾದ ಅಂಶ. ಎರಡನೆಯದು ಇದನ್ನು ನಾನು ಮಾತ್ರ ಹೇಳುತ್ತಿಲ್ಲ. ಇಲ್ಲಸ್ಟ್ರೇಟೆಡ್ ವೀಕ್ಲಿಯಲ್ಲೂ ಇದು ಬಂದಿದೆ ಇಂಡಿಯಾ ಟುಡೇದಲ್ಲಿ ಯು. ಪಿ. ಯಲ್ಲಿ ನಡೆದ ರಾಮಜನಂ ಭೂಮಿ ಗಲಾಟೆ ಬಗ್ಗೆ ಬಂದಿವೆ. ಅದು ಅದು ತಮಗೆ ಗೊತ್ತಿರಬೇಕು. ಅಲ್ಲಿ ಕೂಡ ಇದೇ ರೀತಿ ಯೋಜಿತವಾಗಿ ನಡೆಯುತ್ತಿದೆ. ದೇಶಾದ್ಯಂತ ಯೋಜಿತವಾಗಿ ನಡೆಯುತ್ತಿದೆ. ಇದರಲ್ಲಿ ಮುಖ್ಯವಾಗಿ ಇದನ್ನು ಯಾರು ಮಾಡಿದ್ದು ದು ಎಂಬ ಪ್ರಶ್ನೆ ಬರುತ್ತದೆ. ಹೇಗಾಗಿದೆ ಎಂದರೆ ಕಲ್ಲು ಹಾಕುತ್ತಾರೆ. ಏಟು ಬೀಳುತ್ತದೆ. ನಂತರ ಚಾಕು ಚೂರಿ, ಆಮೇಲೆ ಪೋಲೀಸರು ಬಂದು ಗೋಲೀಬಾರ್, ಲಾಠಿ ಚಾರ್ಜ್ ಮಾಡುತ್ತಾರೆ. ಇದು ಹೀಗೆಯೇ ಪ್ರತಿಯೊಂದು ಕಡೆ ಸಹ ನಡೆದುಕೊಂಡು ಬಂದಿದೆ, ಇನ್ನೊಂದು ಇದರಲ್ಲಿ ವಿಶೇಷವಾದ ಅಂಶ ಎಲ್ಲಾ ಗಲಭೆಗಳಲ್ಲೂ ಸಹ ಪೋಲೀಸರು ಯಾವಾಗ ಬರುತ್ತಾರೆ ? ಮಾನ್ಯ ಬಸವಲಿಂಗಪ್ಪನವರು ಹೇಳಿದ್ದುದು ಸರಿ. ಎಲ್ಲಾ ಆದಮೇಲೆ ಅವರು ಬರುತ್ತಾರೆ, ಪೋಲೀಸ್ ಅಧಿಕಾರಿಗಳು ಕೆಟ್ಟವರು ಎಂದು ನಾನು ಹೇಳುವುದಿಲ್ಲ. ಒಳ್ಳೆ ಒಳ್ಳೆಯ ಅಧಿಕಾರಿಗಳು ದಕ್ಷರು ನಮ್ಮ ರಾಜ್ಯದಲ್ಲಿದ್ದಾರೆ. ಬೇರೆ ರಾಜ್ಯಗಳಲ್ಲೂ ಇರಬಹುದು. ಇರುತ್ತಾರೆ. ಆದರೆ ಎಲ್ಲಾ ಕಡೆ ಗಲಭೆ ಆದ ಮೇಲೆ ಏತಕ್ಕೆ ಬರುತ್ತಾರೆ ಮೊದಲು ಏತಕ್ಕೆ ಬರುವುದಿಲ್ಲ ? ಪತ್ರಿಕೆಯಲ್ಲಿ ಏನು ಬಂದಿದೆಯೆಂದರೆ ಪ್ರೆಸ್ ಕಟಿಂಗ್ಸ್ ನಾನು ಇಟ್ಟಿದ್ದೆ. ಅದರಲ್ಲಿ ಬಂದಿರುವ ಪ್ರಕಾರ ಆಳಂದದಲ್ಲಿ ಹೆಚ್ಚು ಜನ ಪೋಲೀಸರು ಇರಲಿಲ್ಲ. ಗಲಭೆ ಶುರು ಆದಾಗ ಅವರು ಬರಲಿಲ್ಲ, ಆಮೇಲಿಂದ ಪೋಲೀಸರು ಬಂದಿದ್ದರು ಎಂದು ಬಂದಿದೆ. ರಾಮನಗರದ ಬಗ್ಗೆಯೂ ನನ್ನ ತಿಳುವಳಿಕೆ ಅದೇ ರೀತಿ ಇದೆ. ಆಮೇಲಿಂದ ಪೋಲೀಸರು ಬಂದಿದ್ದರು ಎಂದು, ಅದರ ಅರ್ಥ ಏನು ? ಪೋಲೀಸ್ ಇಲಾಖೆ ಈ ವಿಷಯದಲ್ಲಿ, ಕೋಮುವಾರು ಶಕ್ತಿಗಳನ್ನು ಸದೆಬಡಿಯುವ ವಿಷಯದಲ್ಲಿ ಪೂರ್ಣವಾಗಿ ವೈಫಲ್ಯತೆಯನ್ನು ತೋರಿಸಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಗಲಭೆ ಆದ ಮೇಲೆ ಬಂದು, ಮಾಡುವುದಕ್ಕಿಂತ ಮುಂಚೆಯೇ ಇದು ಪೋಲೀಸ್ ಇಲಾಖೆಗೆ ಗೊತ್ತಿರಲಿಲ್ಲವೆ ? ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿಗೆ ಗೊತ್ತಿರಲಿಲ್ಲವೆ ಗೊತ್ತಿದ್ದರೂ ಏತಕ್ಕೆ ಪರಿಣಾಮಕಾರಿ ಕ್ರಮ ಕೈಗೊಳ್ಳಲಿಲ್ಲ? ಕರಗ ಪ್ರೊಸೆಷನ್ ಹೋಗುತ್ತದೆ ಎಂದು ಗೊತ್ತು. ಕಾರು ಹುಣ್ಣಿಮೆಯಲ್ಲಿ ಎತ್ತು ತೆಗೆದುಕೊಂಡು ಹೋಗುತ್ತಾರೆ ಎಂದು ಗೊತ್ತಿತ್ತು, ಏತಕ್ಕೆ ಬಂದೋಬಸ್ತ್ ಮಾಡಲಿಲ್ಲ. ಸಮಾಜ ವಿರೋಧಿ ಶಕ್ತಿಗಳನ್ನು ಮೊದಲೇ ಅರೆಸ್ಟ್ ಮಾಡಿದ್ದೀರಾ ? ಅದು ಅವರ ಕರ್ತವ್ಯವಾಗಿರಲಿಲ್ಲವೆ ? ಮುಸಲ್ಮಾನ್, ಹಿಂದೂ ಯಾರೇ ಇರಲಿ ಅರೆಸ್ಟ್ ಮಾಡಿದ್ದಾರೆಯೇ ? ಮತ್ತೆ ಬೇಕು ಎಂದು ಪ್ರಚೋದನೆ ಮಾಡುವ ಶಕ್ತಿಗಳ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿರಿ ? ಈ ಪ್ರಶ್ನೆಗಳಿಗೆ ಖಂಡಿತವಾಗಿ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಏತಕೆಂದರೆ ಇದನ್ನು ಮಾಡಿಲ್ಲ. ಇವರು ತಮ್ಮ ವೈಫಲ್ಯತೆಯನ್ನು ಸ್ಪಷ್ಟವಾಗಿ ತೋರಿಸಿದ್ದಾರೆ ಎಂದು ನನಗನಿಸುತ್ತದೆ. ರಾಮನಗರ, ಆಳಂದದಲ್ಲಿ ಇದು ವ್ಯಕ್ತವಾಗುತ್ತದೆ. ಬೆಳಗಾಂ ಪರಿಸ್ಥಿತಿ ಬೇರೆ, ಆದರೆ ಎರಡು ಕಡೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮತ್ತೆ ಪೋಲೀಸ್ ಫೈರಿಂಗ್, ಪೋಲೀಸ್ ಗೋಲೀಬಾರ್ ಏನಾಗಿದೆ ಅದು ಆಗಬೇಕಾಗಿತ್ತೆ ? ಇಷ್ಟು ಜನ ಸಾಯಬೇಕಾಗಿತ್ತೆ ? ಪೋಲೀಸ್

ಗೋಲೀಬಾರ್‌ನಿಂದ ರಾಮನಗರದಲ್ಲಿ ೩ ಜನ ಸತ್ತಿದ್ದಾರೆ, ಮತ್ತೆ ಇನ್ನೊಂದು ಕಡೆ ೩ ಜನ ಸತ್ತಿದ್ದಾರೆ. ಇದು ಆಗಬೇಕಾಗಿತ್ತೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ, ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಹೇಳಿದ್ದಾರೆ ಮಾಡುತ್ತಾರೆ ಎಂದು ಕಾಣಿಸುತ್ತವೆ. ಇಲ್ಲಿ ಹೇಳಿರುವ ಪ್ರಕಾರ ಎರಡು ವಿಚಾರಣಾ ಆಯೋಗಗಳನ್ನು ರಾಜ್ಯ ಸರ್ಕಾರ ರಚಿಸಿದೆ ಎಂದು ಹೇಳಿದ್ದಾರೆ, ಪೋಲೀಸರು ಗುಂಡು ಹಾರಿಸಿದ್ದುದು ಸರಿಯೋ ತಪ್ಪೋ ಎಂದು ಜುಡಿಷಿಯಲ್ ಎನ್‌ಕ್ವೈರಿಯಲ್ಲಿ ತೀರ್ಮಾನ ಕೊಡುತ್ತಾರೆ. ಅದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ, ನಮಗೆ ತಿಳಿದುಬಂದಿದೆ ಪೋಲೀಸರು ಜಾಗರೂಕತೆಯಿಂದ ಮೊದಲೇ ಇದ್ದಿದ್ದರೆ ಗೋಲೀಬಾರ್‌ನ್ನು ತಪ್ಪಿಸಬಹುದಾಗಿತ್ತು. ಇಷ್ಟು ಜನ ಸಾಯಬೇಕಾಗಿರಲಿಲ್ಲ ಎಂದು ಗೊತ್ತಾಗುತ್ತದೆ, ಪತ್ರಿಕೆಯಲ್ಲಿ ಬಂದಿರುವ ವರದಿಯಿಂದ ಇದು ಗೊತ್ತಾಗುತ್ತದೆ. ಮತ್ತು ಅಲ್ಲಿ ಹೋಗಿ ನೋಡಿಕೊಂಡು ಬಂದಿರುವವರು ಹೇಳುವುದನ್ನು ನೋಡಿದರೂ ಗೊತ್ತಾಗುತ್ತದೆ. ಮುಖ್ಯವಾಗಿ ಇದಕ್ಕೆ ಯಾರು ಕಾರಣರು ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಯಾರು ಕಾರಣರು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಯಾರು ಕಾರಣ ಎಂಬ ಬಗ್ಗೆ ಒಂದು ವಿಶ್ಲೇಷಣೆ ಇಲ್ಲಿ ಬಂದಿದೆ. ಅದನ್ನು ಮೊಯಿಲಿಯವರೂ ಓದಿದರು. ರಾಮನಗರದ ವಿಷಯದಲ್ಲಿ ಜನತಾ ಪಕ್ಷ ಮತ್ತು ಕಾಂಗ್ರೆಸ್‌ನವರಿಗೆ ನಾವು ಮುಂದೆ ಬರಬೇಕು ಎಂಬ ದೃಷ್ಟಿಯಿಂದ ನಡೆದಂತ ಗಲಭೆಯಲ್ಲಿ ಫೆನ್ಸ್ ಹಾಕಿದರು ಜನತಾ ಪಕ್ಷದವರು ಅದರಿಂದಾಗಿ ಗಲಭೆಯಾಯಿತು ಎಂದು ಟೈಮ್ಸ್ ಆಫ್ ಇಂಡಿಯಾದಲ್ಲಿ ಬಂದಿದೆ.ಇದು ಏನು ತೋರಿಸುತ್ತದೆ ಎಂದರೆ, ಇಲ್ಲಿ ಮಾತ್ರವಲ್ಲ ಬೇರೆ ಕಡೆಯೂ ಇದೇ ರೀತಿಯಾಗಿ ನಡೆದಿದೆ. ಒಂದೊಂದು ಕಡೆಯಲ್ಲಿ ನಡೆದಿರುವುದನ್ನು ಅನಾಲೈಸಿಸ್ ಮಾಡಿದರೆ ಎಲ್ಲಾ ಕಡೆ ಇದೇ ಪರಿಸ್ಥಿತಿ ಇದ್ದಂತೆ ಕಾಣುತ್ತದೆ. ರಾಜಕಾರಣಿಗಳ ಕೈವಾಡ ಕೋಮುವಾರು ಗಲಭೆಗಳಲ್ಲಿ ಇದೆ ಎಂಬುದು ತಿಳಿದುಬರುತ್ತದೆ. ನಾನು ಯಾರ ಕಡೆಯು ಬೆಟ್ಟು ಮಾಡಿ ತೋರಿಸುವುದಿಲ್ಲ. ಜನತಾ ಪಾರ್ಟಿಯವರದೇ ತಪ್ಪು, ಕಾಂಗ್ರೆಸ್‌ನವರದೇ ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ರಾಜಕಾರಣಿಗಳ ಕೈವಾಡ ಇದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಟೈಮ್ಸ್ ಆಫ್ ಇಂಡಿಯಾದಲ್ಲಿ ಹೇಳಿರುವುದೆಲ್ಲಾ ಸತ್ಯಕ್ಕೆ ದೂರವಾದುದು ಎಂದು ಹೇಳುವುದಕ್ಕಾಗುವುದಿಲ್ಲ ಅನೇಕ ಅಂಶಗಳು ಸತ್ಯಾಂಶವಾಗಿದೆ. ಬೇರೆ ಕಡೆ ಘಟನೆಗಳು ಇದೇ ರೀತಿ ನಡೆದಿದೆ. ಮಾನ್ಯ ಅಧ್ಯಕ್ಷರೇ. ಪತ್ರಿಕೆಗಳನ್ನು ತಾವು ಓದಿ ಕರತಲಾಮಲಕ ಮಾಡಿಕೊಂಡಿದ್ದೀರೆಂದು ನನಗೆ ಗೊತ್ತು. ಅಹಮದಾಬಾದ್‌ನಲ್ಲಿ ಏನು ನಡೆಯುತ್ತಿದೆ ? ಅಲ್ಲಿ ಹಿಂದೆ ಇದ್ದ ಚೀಫ್ ಮಿನಿಸ್ಟರ್‌ಗೂ, ಈಗಿರುವ ಚೀಫ್ ಮಿನಿಸ್ಟರ್‌ಗೂ ನಡೆಯುತ್ತಿರುವ ಕಾಳಗ ಎಂದು ಹೇಳುತ್ತಾರೆ. ಅದು ಎಷ್ಟು ದೂರ ಸತ್ಯಾಂಶವೋ ಎಷ್ಟು ಸತ್ಯಕ್ಕೆ ದೂರವಾದುದೋ ಗೊತ್ತಿಲ್ಲ. ಅಂತೂ ಪತ್ರಿಕೆಯಲ್ಲಿ ಇದರ ಅನಾಲಿಸಿಸ್ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಪಶ್ಚಿಮ ಬಂಗಾಳದಲ್ಲೂ ಜಾಸ್ತಿ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ನಿದರ್ಶನ ತೋರಿಸಿ.

ಶ್ರೀ ಎಸ್. ಬಂಗಾರಪ್ಪ.—ಪಶ್ಚಿಮ ಬಂಗಾಳದಲ್ಲಿ ಗೋಲಿಬಾರ್ ಆಯಿತಲ್ಲ. ಅದು ನಿಮ್ಮ ನಿಮ್ಮ ನಿಮ್ಮ ಮಂತ್ರಿಗಳಿಂದಲೇ ಆಗಿದ್ದುದು ಎಂದು ಹೇಳುತ್ತಾರೆ. ಅದನ್ನು ನಂಬುವುದಕ್ಕಾಗುತ್ತದೆಯೇ ? ಪಶ್ಚಿಮ ಬಂಗಾಳದಲ್ಲಿ ಕೂಡ ಮಂತ್ರಿ ಮಂತ್ರಿಗಳಿಂದ ಗೋಲೀಬಾರ್ ಆಯಿತು ಎಂದು ಜನ ಹೇಳುತ್ತಾರೆ. ಆದರೆ ವಾಸ್ತವಾಂಶ ಏನು ಎಂದು ವಿಮರ್ಶೆ ಮಾಡದೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಯಾವಾಗ ?

ಶ್ರೀ ಎಸ್. ಬಂಗಾರಪ್ಪ.—ಸಿ.ಪಿ.ಎಂ. ಸರ್ಕಾರದಲ್ಲಿ ನಾನು ಹೇಳಿದ್ದುದು.

ಶ್ರೀ ಎಂ, ಎಸ್. ಕೃಷ್ಣನ್.—ಮಾನ್ಯ ಬಂಗಾರಪ್ಪನವರು ಬಹಳ ವಿಷಯ ತಿಳಿದುಕೊಂಡಿದ್ದಾರೆ. ಎಂದು ನಾನು ನಂಬಿದ್ದೇನೆ. ಆದ್ದರಿಂದ ಆ ವಿಷಯದ ಬಗ್ಗೆ ಸ್ವಲ್ಪ ಮಟ್ಟಿಗೆ ಪುನರ್‌ವಿಮರ್ಶೆ ಮಾಡಬೇಕಾಗಿದ, ಪುನರ್ ಆಲೋಚನೆ ಮಾಡಬೇಕಾಗಿದೆ. ಏತಕ್ಕೆಂದರೆ ಪಶ್ಚಿಮ ಬಂಗಾಳದಲ್ಲಿ ನನಗೆ ತಿಳಿದ ಮಟ್ಟಿಗೆ ಕೋಮುವಾರು ಗಲಭೆಗಳು ಬೇರೆ ಕಡೆ ಬೇರೆ ರಾಜ್ಯಗಳಲ್ಲಿ, ನಮ್ಮ ರಾಜ್ಯದಲ್ಲಿ ನಡೆದ ಹಾಗೆ ಆ ಪ್ರಮಾಣದಲ್ಲಿ ನಡೆದಿಲ್ಲ. ನೋಡೋಣ. ರಿಪೋರ್ಟ್ ತೆಗೆದುಕೊಳ್ಳಲಿ, ನೋಡೋಣ. ಏತಕ್ಕೆ ನಡೆದಿಲ್ಲ ಎಂಬ ಬಗ್ಗೆ ವಿಚಾರಣೆ ಮಾಡೋಣ. ಸರ್ಕಾರದ ಧೋರಣೆ, ನೀತಿ ಇರಬಹುದು. ಅದಲ್ಲದೆ ಪಶ್ಚಿಮ ಬಂಗಾಳದ ಜನರೇ ಲೆಫ್ಟ್ ಓರಿಯಂಟೆಡ್. ರೈಟ್ ಓರಿಯಂಟೆಡ್ ಅಲ್ಲ. ಹಿಂದೆ ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ರವೀಂದ್ರನಾಥ ಟಾಗೂರ್, ಸುಭಾಷ್‌ಚಂದ್ರ ಬೋಸ್ ಅವರ ಪರಂಪರೆ ಬೆಳೆದುಕೊಂಡು ಬಂದಿದೆ, ಅದರ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಗೋಲೀಬಾರ್ ಆಗಿಲ್ಲ ಎಂದು ಹೇಳುವುದಿಲ್ಲ, ಆಗಿರಬಹುದು. ಆದರೆ ಯಾವ ಕಾರಣದಿಂದ ಆಗಿದೆ ಎಂಬುದನ್ನು......

ಶ್ರೀ ಎಂ. ವೀರಪ್ಪ ಮೊಯ್ಲಿ.—ಗೋಲೀಬಾರ್ ಲೆಫ್ಟ್ ಓರಿಯಂಟೆಡ್ ಇರುವ ಕಡೆ ಆಗುವುದಿಲ್ಲ. ಮತ್ತೊಂದು ಕಡೆ ಆಗುವುದಿಲ್ಲ.......

ಶ್ರೀ ಎಂ.ಎಸ್ ಕೃಷ್ಣನ್ —ಅದಲ್ಲ ಹೇಳಿದ್ದು,

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದು ಹೇಳುವುದು ಬೇಡ. ಅದು ಪ್ರಸ್ತುತ ಅಲ್ಲ. ಕೇರಳದಲ್ಲಿ ಎಲ್.ಡಿ.ಎಫ್. ಗೌರ್ನಮೆಂಟ್ ಇರುವಾಗ ಏನಾಯಿತು ಗೊತ್ತಿದೆ. ಆದ್ದರಿಂದ ಆ ವಿಷಯ ಚರ್ಚೆ ಮಾಡುವುದಕ್ಕೆ ಹೋದರೆ ಕಷ್ಟವಾಗುತ್ತದೆ. ಕಮ್ಯುನಿಸ್ಟ್ ಮಾರ್ಕಿಸ್ಟ್ ಇರುವಾಗ, ಸಿ.ಪಿ.ಐ. ಇರುವಾಗ ಮಂಜೇರಿಯಲ್ಲಿ ದೊಡ್ಡ ಗಲಾಟೆಯಾಗಿ ಗೋಲೀಬಾರ್ ಆಗಿ ಸತ್ತಿದ್ದು ಎಲ್ಲರಿಗೂ ಗೊತ್ತಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಇಲ್ಲಿ ಪ್ರತಿಯೊಂದು ಊರಿನಲ್ಲಿ, ಪ್ರತಿಯೊಂದು ಕಡೆಯೂ ನಡೆಯುತ್ತಿದೆ. ನಮ್ಮ ರಾಜ್ಯದ ಪ್ರತಿಯೊಂದು ಟೌನ್ ಮಂಜೇರಿಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಎಲ್ಲಿ ಆಯಿತು ಎಂಬ ಬಗ್ಗೆ ವಿಮರ್ಶೆ ಮಾಡುವುದು ಸರಿ ಎಡ ಪಂತೀಯ ಸರ್ಕಾರ ಇರುವಾಗ ಆಗುವುದಿಲ್ಲ, ಬಲಪಂತೀಯ ಸರ್ಕಾರ ಇದ್ದರೆ ಆಗುತ್ತೆ ಈ ತರಹ ಹೇಳುವುದು ಸರಿಯಲ್ಲ. ವೆಸ್ಟ್ ಬೆಂಗಾಲ್‌ನಲ್ಲಿ, ಕೇರಳದಲ್ಲಿ ಎಲ್ಲಾ ಕಡೆ ಆಗಿದೆ. ಈಗ ಪ್ರಸ್ತುತ ಘಟನೆ ಏಕಾಯಿತು ಎಂಬ ಇಷ್ಯೂ ತೆಗೆದುಕೊಂಡು ಮಾತನಾಡೋಣ. ದೇಶದಲ್ಲೆಲ್ಲಾ ಚರ್ಚೆ ಮಾಡವುದಕ್ಕೆ ಪಾರ್ಲಿಮೆಂಟ್ ಇದೆ, ಅಲ್ಲಿ ಚರ್ಚೆ ಮಾಡಬಹುದು. ಇಲ್ಲಿ ಕರ್ನಾಟಕದಲ್ಲಿ ಶಾಂತಿ ನೆಲೆಸುವುದಕ್ಕೆ ಕೋಮು ಸೌಹಾರ್ದತೆ ನೆಲೆಸುವುದಕ್ಕೆ ನಮ್ಮ ಕೊಡುಗೆ, ಸಹಾಯ ಏನು ಮಾಡುವುದಕ್ಕಾಗುತ್ತದೆ. ಎಂಬ ಬಗ್ಗೆ ಚರ್ಚೆ ಮಾಡೋಣ ಎಂದು ನನ್ನ ಸೂಚನೆ. ಬೇರೆ ಏನೂ ಅಲ್ಲ. ಎಡಪಂತೀಯರು ಬಲಪಂತೀಯರು ಇದ್ದರೆ ಅಲ್ಲಿ ಜಾತಿ ಸಂಘರ್ಷಣೆಯಾಗುತ್ತದೆ ಎಂಬುದನ್ನು ವಿಮರ್ಶೆ ಮಾಡಿದರೆ ಸಾಕಷ್ಟು ವಿಮರ್ಶೆ ಮಾಡಬಹುದು, ಒಬ್ಬರ ಮೇಲೆ ಇನ್ನೊಬ್ಬರು ಅಪಾದನೆ ಮಾಡತಕ್ಕ ವೇದಿಕೆಯಾಗಿ ಈ ಸದನವನ್ನು ಉಪಯೋಗ ಮಾಡುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ವೀರಪ್ಪ ಮೊಯ್ಲಿಯವರ ಅಡ್ವೈಸ್‌ಗೆ ಬಹಳ ವಂದನೆಗಳು. ಇದನ್ನು ನನಗಷ್ಟೇ ಅಲ್ಲ ಮಾನ್ಯ ಬಂಗಾರಪ್ಪನವರಿಗೂ ಅವರು ಹೇಳಬೇಕಾಗುತ್ತದೆ. ಏಕೆಂದರೆ, ನಾನು ಪಶ್ಚಿಮಬಂಗಾಳದ ವಿಷಯವನ್ನು ಹೇಳಲಿಲ್ಲ. ಅವರು ಆ ಬಗ್ಗೆ ಹೇಳಿದ್ದರಿಂದ ನಾನು ಹೇಳಿದ್ದುದು.

ಶ್ರೀ ಎಸ್.ಬಂಗಾರಪ್ಪ.—ನೀವು ಗುಜರಾತಿನ ಬಗ್ಗೆ ಪ್ರಾರಂಭ ಮಾಡಿದಿರಿ. ಅದಕ್ಕೆ ನಾನು ವೆಸ್ಟ್ ಬೆಂಗಾಲ್ ಬಗ್ಗೆ ನೆನಪು ಮಾಡಿದೆ ಅಷ್ಟೇ.

ಶ್ರೀ ಎಂ. ಎಸ್. ಕೃಷ್ಣನ್.—ಅಹಮದಾಬಾದ್‌ನಲ್ಲೂ ಇದು ನಡೆದಿದೆ. ಅಲ್ಲಿ ಕೂಡಾ ರಾಜಕಾರಣದ ಕೈವಾಡವಿದೆಯೆಂದು ಒತ್ತಿ ಹೇಳುವುದಕ್ಕೋಸ್ಕರ ಈ ನಿದರ್ಶನವನ್ನು ಹೇಳಿದೆ. ರಾಮನಗರದಲ್ಲೂ ರಾಜಕೀಯ ಕೈವಾಡ ಇದೆ ಎಂದು ಮಾನ್ಯ ಮೊಯ್ಲಿಯವರು ಹೇಳಿದರು. ರಾಜಕಾರಣದ ಕೈವಾಡ ಇರಬಾರದು ಎಂದು ನಾನು ಹೇಳಿದೆ. ಆದುದರಿಂದ ಇಷ್ಟು ಮಾತ್ರ ನಾನು ಈ ವಿಷಯದಲ್ಲಿ ಹೇಳುತ್ತೇನೆ. ರಾಜಕಾರಣದಲ್ಲಿನ ಕೈವಾಡ ಇದಕ್ಕೆ ಒಂದು ಕಾರಣ. ಎರಡನೆಯ ಕಾರಣ ಎಂದರೆ ಕೋಮುವಾದಿ ಶಕ್ತಿಗಳು, ಜಾತೀಯ ಶಕ್ತಿಗಳು ಹಿಂದೂ ಫಂಡಮೆಂಟಲಿಸಂ, ಹಿಂದೂ ವಿಶ್ವಪರಿಷದ್, ಜಮೈತಾ ಇಸ್ಲಾಮಿ. ಇವೆಲ್ಲಾ ದೊಡ್ಡ ಪ್ರಮಾಣದಲ್ಲಿ ಬೆಳೆದುಬರುತ್ತಿವೆ. ಆದುದರಿಂದ ಈ ಒಂದು ಫಂಡಮೆಂಟಲಿಸಂ ಏನಿದೆ ಇದು ಈ ಗಲಭೆಗೆ ಕಾರಣ ಎಂದು ಹೇಳಬೇಕಾಗುತ್ತದೆ. ಅದರ ಬೀಜ ರಾಮನಗರದಲ್ಲೂ ಇದೆ, ಆಳಂದದಲ್ಲೂ ಇದೆ ಹಾಗೂ ಎಲ್ಲಾ ಕಡೆಯೂ ಇದೆ ಎಂಬುದನ್ನು ನಾವು ಮರೆಯುವುದು ಬೇಡ. ಇದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ಮೂರನೆಯ ಕಾರಣ ಎಂದರೆ, ಈ ಸರ್ಕಾರದ ರೀತಿನೀತಿಗಳು. ಅದನ್ನು ಇಲ್ಲಿ ಹೇಳಬೇಕು. ಸರ್ಕಾರದ ರೀತಿ ನೀತಿ ಎಂದಾಗ ಈ ಸರ್ಕಾರವೂ ಕೋಪ ಮಾಡಿಕೊಳ್ಳಬೇಕಾಗಿಲ್ಲ ಹಾಗೂ ಹಿಂದಿನ ಸರ್ಕಾರವೂ ಕೋಪ ಮಾಡಿಕೊಳ್ಳಬೇಕಾಗಿಲ್ಲ. ಅಧ್ಯಕ್ಷರೇ, ಸರ್ಕಾರ ಏನು ಯೋಚನೆ ಮಾಡುತ್ತದೆ ? ಎಲ್ಲಾ ಜಾತಿಗಳನ್ನು ಸಮಾನವಾಗಿ ನೋಡಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಸಮಾನತೆಯನ್ನು ಯಾವ ರೀತಿ ನೋಡುತ್ತೀರೆಂದರೆ, ಜಾತೀಯ ಅಥವಾ ಮತೀಯ ಸಂಸ್ಥೆಗಳಿಗೆ, ಜಾತಿ ಮತ್ತು ಮತೀಯ ಸಮಾರಂಭಗಳಿಗೆ ಸರ್ಕಾರದ ಮಂತ್ರಿಗಳು, ಮುಖ್ಯಮಂತ್ರಿಯಾಗಿ ಹೋಗಿ ಇದಕ್ಕೆ ಬೆಂಬಲ ಕೊಟ್ಟರೆ ಅದರಿಂದ ನಿಜವಾಗಿಯೂ ಜಾತೀಯತೆ ಹೋಗುವುದಕ್ಕೆ ಆಗುತ್ತದೆಯೇ ? ದೇವಸ್ಥಾನಕ್ಕೆ ಹೋಗುತ್ತೇವೆ, ಮಸೀದಿಗೆ ಹೋಗುತ್ತೇವೆ, ಚರ್ಚ್‌ಗೆ ಹೋಗುತ್ತೇವೆ. ಸೆಕ್ಯುಲರಿಸಂ ಎಂದರೆ ಏನು ? ಒಂದೊಂದು

ದೇವಸ್ಥಾನಕ್ಕೂ ಹೋದರೂ ಸೆಕ್ಯುಲರಿಸಂ ಆಗುವುದಿಲ್ಲ. ಇವತ್ತು ರಾಜ್ಯ ಹಾಗೂ ಇವಕ್ಕೂ ಸಂಬಂಧ ಇರಬಾರದು. State and Religion should be separate. Religion can be there in his house. He can go to the temple, church or any where. But why should the State interfere in it ? ಇದೇ ಸಭೆಯಲ್ಲಿ ನಾನು ಇದರ ಬಗ್ಗೆ ಮಾತನಾಡಿದ್ದೇನೆ. ಶುಕ್ರವಾರದ ದಿವಸ ಎಲ್ಲಿ ಹೋದರೂ ನಮಗೆ ಮಂಗಳಾರತಿ ಕೊಡುತ್ತಾರೆ. ಅದಕ್ಕೆ ಹಣ ಹಾಕಬೇಕು. ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಎಲ್ಲರೂ ಇದನ್ನು ಮಾಡಬೇಕು. ಇದು ನಮ್ಮ ಜಾತೀಯತೆ ಆಗುತ್ತದೆಯೋ ? ಸಾಮಾನ್ಯ ಜನರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಪರಿಸ್ಥಿತಿ ಹಾಗೆ ಇದೆ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು ಆ ರೀತಿ ನಡೆದುಕೊಂಡರೆ ಕೋಮುವಾರು ಗಲಭೆಯನ್ನು ತಡೆಗಟ್ಟಲು ಹೇಗೆ ಸಾಧ್ಯವಾಗುತ್ತದೆ ? ನೀವೇ ಇದಕ್ಕೆ ಕಾರಣಕರ್ತರಾಗುತ್ತೀರಿ, ಇದು ಬಹಳ ಮುಖ್ಯ ಕಾರಣವೆಂದು ಸರ್ಕಾರದ ಗಮನಕ್ಕೆ ಇದನ್ನು ತರುತ್ತಿದ್ದೇನೆ. ಇದೆಲ್ಲಾ ವಿಷಯ ಪತ್ರಿಕೆಗಳಲ್ಲಿ ಕೂಡಾ ಬರುತ್ತಾ ಇವೆ. ನಾನು ಕಮ್ಯೂನಿಸ್ಟ್ ಆದ್ದರಿಂದ ನನಗೆ ಜಾತಿ ಬಗ್ಗೆ ನಂಬಿಕೆ ಇಲ್ಲ ಎಂದು ಹೇಳಬೇಡಿ. ಹೌದು, ನಾನು ಕಮ್ಯೂನಿಸ್ಟ್. ನಾವು ಇವತ್ತು ನಂಬಿಕೆ ಇಲ್ಲದೇ ಇರುವ ಜನ. ಆದರೆ ರಾಜ್ಯಕ್ಕೂ ಇದಕ್ಕೂ ಸಂಬಂಧ ಕಲ್ಪಿಸಬೇಡಿ ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಗುಡಿಗಳು, ಮಸೀದಿಗಳು ಹಾಗೂ ಚರ್ಚ್‌ಗಳು ಇವೆ. ಆದರೆ ಇವಕ್ಕೆ ಮಂತ್ರಿಗಳು ಪ್ರವೇಶ ಮಾಡುವುದು ಬೇಡ. ಸಾಮಾನ್ಯ ಜನರ ಪ್ರವೇಶ ವನ್ನು ನಾವು ಬೇಡ ಎಂದು ಹೇಳುವುದಿಲ್ಲ. ಎಂ.ಎಲ್.ಎ.ಗಳಾದವರು ಆದಷ್ಟೂ ಇದಕ್ಕೆ ಕಡಿವಾಣ ಹಾಕಿಕೊಳ್ಳಬೇಕಾಗುತ್ತದೆ. ಆದರೆ ಮಂತ್ರಿಗಳು ಇದರ ಬಗ್ಗೆ ವ್ಯವಹಾರ ಮಾಡುವಾಗ ಹುಶಾರಾಗಿ ಯೋಚಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ರಷ್ಯಾದಲ್ಲಿ ಕೆಲವು ದೊಡ್ಡ ದೊಡ್ಡ ಚರ್ಚ್, ಮಸೀದಿ ಹಾಗೂ ದೇವಸ್ಥಾನಗಳನ್ನು ಮ್ಯೂಸಿಯಂ ಮಾಡಿದ್ದಾರಂತೆ. ಇದು ನಿಜವೇ ? ಹಾಗೂ ಚೈನಾದ ಬಗ್ಗೆ ಕೇಳ ಬೇಕೆಂದರೆ ಅಲ್ಲಿ ಈಗಲೂ ಮನೆಗಳ ಪಕ್ಕದಲ್ಲಿ ಮಸೀದಿಗಳು ಇವೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ದೇವೇಗೌಡರು ರಷ್ಯಾಕ್ಕೆ ಹೋಗಿಬಂದರು. ಅವರು ಇದಕ್ಕೆ ಉತ್ತರ ಕೊಟ್ಟರೆ ಒಳ್ಳೆಯದು. ಅಲ್ಲಿ ಅವರು ಮಸೀದಿಗಳನ್ನು ನೋಡಿಕೊಂಡು ಬಂದಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಒಂದೇ ಒಂದು ತೊಂದರೆ ಏನೆಂದರೆ, ಮಾನ್ಯ ಕೃಷ್ಣನ್ ಅವರು ಅಲ್ಲಿಗೆ ಹೋದರೆ ಏನು ತೋರಿಸುತ್ತಾರೋ ಅದನ್ನು ದೇವೇಗೌಡರಿಗೆ ತೋರಿಸುವುದಿಲ್ಲ. ಅಷ್ಟೇ ಕಷ್ಟ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಶ್ರೀನಿವಾಸ್ ಅವರಿಗೆ ಇದೆಲ್ಲಾ ಹೇಗೆ ಗೊತ್ತು ? ಇನ್ನೂ ಮುಂದಕ್ಕೆ ಹೇಳಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—ನನಗೆ ಅಷ್ಟು ಮಾತ್ರ ಗೊತ್ತು.

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೆ ಎಲ್ಲಾ ಸ್ಪಷ್ಟವಾಗಿ ಗೊತ್ತಿದೆ. ಅದನ್ನೆಲ್ಲಾ ಹೇಳಿ ಸ್ವಾಮಿ.

ಅಧ್ಯಕ್ಷರು.—ತಮ್ಮ ಭಾಷಣ ಪ್ರಾರಂಭ ಮಾಡಿ ೨೦ ನಿಮಿಷಗಳಾದವು.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲೆಲ್ಲಾ ಚರ್ಚ್‌ಗಳು, ಮಸೀದಿಗಳು ಇದ್ದರೂ ಅವುಗಳಿಗೆ ಬೆಂಬಲ ಕೊಡತಕ್ಕ ಸರ್ಕಾರಗಳಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಸದಸ್ಯರು, ಟೆಂಪಲ್ಸ್ ಬಗ್ಗೆ ಪ್ರಸ್ತಾಪ ಮಾಡಿ ಜಾಸ್ತಿ ಕಾಲ ಕಳೆದುಬಿಟ್ಟಿದ್ದಾರೆ. ಅವರಿಗೆ ಸ್ವಲ್ಪ ಜಾಸ್ತಿ ಅವಕಾಶ ಕೊಡಿ.

SRI M. S. KRISHNAN.—Thank you, very much. ಆಮೇಲೆ ಇನ್ನೊಂದು ವಿಷಯ ಇದಕ್ಕೆ ಕಾರಣ. ನಮ್ಮ ರಾಜ್ಯ ಮತ್ತು ಬೇರೆ ಕಡೆ ಸಹಾ ಈ ಕೋಮುವಾರು ಶಕ್ತಿ ಬೆಳೆಯು ವುದಕ್ಕೆ ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ಇರತಕ್ಕ ನ್ಯೂನ್ಯತೆಗಳು ಕೂಡ ಕಾರಣ. ಪಠ್ಯಪುಸ್ತಕಗಳಲ್ಲಿ ಏನೇನು ಬರೆಯುತ್ತಾರೆಂಬುದನ್ನು ಎಕ್ಸಾಮಿನ್ ಮಾಡಬೇಕು. ಮಾನ್ಯ ರಘುಪತಿಯವರು ಮಂತ್ರಿ ಗಳಾಗಿದ್ದಾಗ ಇದನ್ನು ಮಾಡಿದರೋ ಇಲ್ಲವೋ ಗೊತ್ತಿಲ್ಲ. ಈಗ ಮಂಜುನಾಥ್ ಅವರು ಈಗ ವಿದ್ಯಾ

ಮಂತ್ರಿಗಳಾಗಿದ್ದಾರೆ. ಇವೊತ್ತು ಅನೇಕ ಪುಸ್ತಕಗಳಲ್ಲಿ ನೋಡಿದ್ದೇವೆ. ವಿದ್ಯಾಭ್ಯಾಸದ ಆ ಪುಸ್ತಕಗಳಲ್ಲಿ ಎಷ್ಟೋಂದು ಕೋಮುವಾರು ವಿಷಬೀಜ ಹರಡುತ್ತಾರೆಂದರೆ ಮಹಾತ್ಮಾ ಗಾಂಧಿಯವರಿಗೂ ಹಿಟ್ಲರ್‌ಗೂ ಸಂತುಲನ ಮಾಡಿದರು ಎಂದು ನಾನು ಓದಿದ್ದೇನೆ. ಮತ್ತು ಇನ್ನೊಂದು ಕಡೆ ಭಗತ್‌ಸಿಂಗ್ ಅವರು ಹಿಂದೂಗಳ ನಾಯಕ ಎಂದು ಬರೆದಿದ್ದಾರೆ. ಯಾರು ಸಮಾಜವಾದ ಬೇಕು ಎಂದು ಹೇಳಿದರು ? ಲೆನಿನ್ ಪುಸ್ತಕ ಇಟ್ಟುಕೊಂಡು ನಾನು ಮಾರ್ಕ್ಸ್‌ವಾದಿ ಆಗಬೇಕಾಗಿತ್ತು ಎಂದು ಹೇಳಿದರು ಅಂತಹವರನ್ನು ಹಿಂದೂಗಳ ನಾಯಕ ಎಂದು ಬರೆದಿದ್ದಾರೆ. ಈ ರೀತಿಯ ಪುಸ್ತಕಗಳು ಇದ್ದರೆ ಹೇಗೆ ಕೋಮುವಾರು ಭಾವನೆಯನ್ನು ಎದುರಿಸುವುದಕ್ಕೆ ಆಗುತ್ತದೆ ? ಇದರ ಬಗ್ಗೆ ತಾವು ಗಮನ ಹರಿಸಬೇಕು. ಅಧ್ಯಕ್ಷರೇ, ಮುಖ್ಯಕಾರಣಗಳು ಇವುಗಳು ಆದರೂ ಜವಾಬ್ದಾರಿ ಯಾರದು ಎಂದು ಯೋಚನೆ ಮಾಡಬೇಕು. ಇವೊತ್ತು ಹೆಚ್ಚಿನ ಜವಾಬ್ದಾರಿ ಯಾರು ಮೆಜಾರಿಟಿಯಲ್ಲಿ ಇರುತ್ತಾರೋ ಅವರದ್ದು ಎಂದು ಹೇಳುತ್ತೇನೆ. ಈ ಗಲಭೆ ರಾಮನಗರದಲ್ಲಿ ಅಥವಾ ಆಳಂದದಲ್ಲಿ ನಡೆದಿರಲಿ ಗಲಭೆಯಲ್ಲಿ ಸಾಯುವವರು ಬಡವರೇ. ಪಟ್ಟಭದ್ರ ಹಿತಗಳು ಮಾತ್ರ ಬದುಕುಳಿಯುತ್ತವೆ. ಆದರೆ ಇದು ಆಗದೇ ಇರುವ ಹಾಗೆ ನೋಡಿಕೊಳ್ಳುವ ಹೆಚ್ಚು ಜವಾಬ್ದಾರಿ ಮೇಜರ್ ಕಮ್ಯುನಿಟಿಯವರದ್ದು. ಮೆಜಾರಿಟಿಯಲ್ಲಿರುವ ಹಿಂದೂಗಳ ಜವಾಬ್ದಾರಿ ಇಲ್ಲಿ ಇದೆ. ಏಕೆಂದರೆ ಬೇರೆಯವರು ಇಲ್ಲಿ ಮೈನಾರಿಟಿ. ಯೋಚನೆ ಮಾಡಿದರೆ ಒಂದು ನಿಮಿಷದಲ್ಲಿ ಎಲ್ಲವನ್ನೂ ಮುಗಿಸಬಹುದು. ಈ ದೇಶದಲ್ಲಿ ಸಂಸ್ಕೃತಿ ಇರಬೇಕು. ಆ ಒಂದು ಜವಾಬ್ದಾರಿಯನ್ನು ನಾವೆಲ್ಲರೂ ಕರ್ನಾಟಕದಲ್ಲಿ ಅರಿತುಕೊಳ್ಳಬೇಕು. ಅರಿತುಕೊಳ್ಳದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ಇನ್ನೊಂದು

೫-೩೦ ಪಿ. ಎಂ.

ವಿಚಾರ ಎಂದರೆ ನಮ್ಮಲ್ಲಿ ಕೆಲವು ಅಗೋಚರ ಶಕ್ತಿಗಳಿವೆ. ನಾನು ಈ ಮಾತನ್ನು ಹೇಳಿದಾಗ ಏನು, ಇವರು ಈರೀತಿ ಮಾತನಾಡುತ್ತಿದ್ದಾರೆಂದು ಕೆಲವರು ತಿಳಿದುಕೊಳ್ಳಬಹುದು. ನಮ್ಮ ದೇಶದಲ್ಲಿ ಅಭದ್ರತೆ, ಅನೈತಿಕತೆ ಬಹಳವಾಗಿ ಇದೆ. ನಮ್ಮ ದೇಶವನ್ನು ಕಬಳಿಸಬೇಕೆಂದು ಕಾದಿರುವವರು ಬಹಳ ಮಂದಿ ಇದ್ದಾರೆ, ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಪಂಜಾಬ್‌ನಲ್ಲಿ ನಡೆಯುತ್ತಿರುವಂಥ ಗಲಭೆ ನಮ್ಮ ಕರ್ನಾಟಕಕ್ಕೂ ಬಂದಿದೆಯೆಂದು ನಾನು ಹೇಳಬಯಸುತ್ತೇನೆ. ಇದನ್ನು ಯಾರಾದರೂ ಅಲ್ಲವೆಂದು ಹೇಳುವುದಾದರೆ ಅದನ್ನು ನಾನು ನಂಬುವುದಿಲ್ಲ. ಈ ಅಗೋಚರ ಶಕ್ತಿಗಳು ಏನಿವೆ ಇವನ್ನು ಕೇಂದ್ರ ಸರ್ಕಾರದ ಆಡಳಿತ ಯಂತ್ರ ಕಂಡುಹಿಡಿಯಬೇಕು. ಇದು ಅವರ ಜವಾಬ್ದಾರಿ. ಇದೇರೀತಿ ನಮ್ಮ ರಾಜ್ಯ ಸರ್ಕಾರದ ಜವಾಬ್ದಾರಿಯೂ ಕೂಡ ಇದರಲ್ಲಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಲ್ಲಿ ರಾಜಕೀಯ ವಿದ್ಯಮಾನಗಳನ್ನು ಸಂಗ್ರಹಿಸುವುದಕ್ಕೋಸ್ಕರ ವಿಶೇಷ ಪೋಲೀಸ್ ದಳ ಇದೆ. ಅವರು ಇಂಥ ವಿಚಾರಗಳನ್ನು ಗಮನಿಸಬೇಕು. ಒಂದು ಸಂತೋಷದ ವಿಚಾರ ಎಂದರೆ ರಾಮನಗರ ಗಲಾಟೆಯ ಸಂಬಂಧದಲ್ಲಿ ಬಡವರ್ಗದವರು ಎಂದರೆ ಕಾರ್ಮಿಕರು, ಕೃಷಿ ಕಾರ್ಮಿಕರು ಯಾರಿದ್ದಾರೆ ಅವರು ಈ ಗಲಾಟೆಯಲ್ಲಿ ಭಾಗವಹಿಸಿಲ್ಲ. ನಾನೂ ಕೂಡ ಇವರ ಜೊತೆ ಇರುವುದರಿಂದ ಇದು ನನಗೆ ಗೊತ್ತಿದೆ. ಇಲ್ಲಿ ಸಿ.ಪಿ.ಎಂ., ಸಿ.ಪಿ.ಐ., ಐ.ಎನ್.ಟಿ.ಯು.ಸಿ., ಸಿ.ಐ.ಟಿ.ಯು., ಎಲ್ಲಾ ಪಕ್ಷದವರೂ ಇದ್ದೇವೆ. ನಾವೆಲ್ಲರೂ ಸ್ವಯಂಪ್ರೇರಿತರಾಗಿ ಇಂಥ ಕೋಮುವಾರು ಘರ್ಷಣೆಗಳನ್ನು ಎದುರಿಸಲು, ಸಮಾಜಘಾತುಕ ಶಕ್ತಿಗಳನ್ನು, ವಿಚ್ಛಿದ್ರಕಾರೀ ಶಕ್ತಿಗಳನ್ನು ಅಡಗಿಸಲು ಪ್ರಯತ್ನ ಮಾಡಬೇಕಾಗಿದೆ. ಇತ್ತೀಚೆಗೆ ಸರ್ಕಾರ ಈ ಪ್ರದೇಶದಲ್ಲಿ ಆಡಳಿತವನ್ನು ನಡಸುವುದರಲ್ಲಿ ವಿಫಲವಾಗಿದೆ. ಹಿಂದೆ ಇದ್ದವರೂ ಕೂಡ ಇದೇರೀತಿ ಆಡಳಿತದಲ್ಲಿ ವೈಫಲ್ಯತೆಯನ್ನು ಮಾಡಿದ್ದರು. ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಎಂದು ಇದೆ. ಅದು ಏನಾಗಿದೆಯೆಂದು ಗೊತ್ತಿಲ್ಲ. ಅದೇರೀತಿ ಸ್ಟೇಟ್ ಇಂಟಿಗ್ರೇಷನ್ ಕೌನ್ಸಿಲ್ ಎಂದು ಇದೆ. ನನಗೆ ತಿಳಿದಂತೆ ಇದು ಒಂದು ಸಾರಿಯೂ ಕೂಡ ಸಭೆ ಸೇರಿಲ್ಲ. ಇದು ಸಭೆ ಸೇರಿ ಫಾಲೋಅಪ್ ಆ್ಯಕ್ಷನ್ ಮಾಡಬೇಕು. ಇವರು ಫಾಲೋಅಪ್ ಆ್ಯಕ್ಷನ್ ತೀರ್ಮಾನವನ್ನು ಕೈಗೊಳ್ಳದಿದ್ದರೆ ಅವರು ತಮ್ಮ ಕರ್ತವ್ಯ ಚ್ಯುತಿಯನ್ನು ಮಾಡಿದಂತಾಗುತ್ತವೆ.

ಮಾನ್ಯ ಅಧ್ಯಕ್ಷರೆ. ಕೊನೆಯದಾಗಿ ನಾನು ಒಂದೆರಡು ಸೂಚನೆಗಳನ್ನು ಕೊಟ್ಟು ನಂತರ ನನ್ನ ಮಾತನ್ನು ಮುಗಿಸಲಿದ್ದೇನೆ. ಈಗಾಗಲೇ ನಾನು ನ್ಯಾಷನಲ್ ಮತ್ತು ಸ್ಟೇಟ್ ಇಂಟಿಗ್ರೇಷನ್ ಕೌನ್ಸಿಲ್ ಬಗ್ಗೆ ಹೇಳಿದ್ದೇನೆ. ಎರಡನೆಯದಾಗಿ ಹೇಳುವುದಾದರೆ ಡಿಸ್ಟ್ರಿಕ್ಟ್ ಪೋಲಿಸ್ ಮತ್ತು ಸಿವಿಲ್ ಸರ್ವೆಂಟ್ಸ್ ಯಾರಿದ್ದಾರೆ ಇವರುಗಳನ್ನು ಕಮ್ಯುನಲ್ ವಯಲೆನ್ಸ್ ರಾಜ್ಯದಲ್ಲಿ ಎಲ್ಲಾದರೂ ನಡೆದರೆ ಆಗ ಇವರನ್ನೇ ನೇರವಾಗಿ ಜವಾಬ್ದಾರರೆಂದು ಮಾಡಬೇಕು. ಈ ಒಂದು ನೀತಿಯನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಅದೇರೀತಿ ನಾವೂ ಇಲ್ಲಿಯೂ ಮಾಡಬೇಕು. ಇತ್ತೀಚೆಗೆ ಕೇಂದ್ರ

ಸರ್ಕಾರದವರು ನಮ್ಮ ರಾಜ್ಯದ ಬಗ್ಗೆ ಒಳ್ಳೆಯ ಮಾತನಾಡಿದ್ದಾರೆ. ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಜವಾಬ್ದಾರಿ ಇರುವುದರಿಂದ ರಾಜ್ಯದಲ್ಲಿ ಕೋಮುವಾರು ಶಕ್ತಿಗಳು ತಲೆ ಎತ್ತದಂತೆ ನೋಡಿಕೊಳ್ಳಬೇಕು. ಪೋಲೀಸ್ ಫೋರ್ಸ್‌ನಲ್ಲಿ ಮುಸ್ಲಿಮರಿಗೆ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಎಷ್ಟು ಆದ್ಯತೆ ಕೊಟ್ಟಿದ್ದೀರೆಂದು ನಾನು ಕೇಳಿದರೆ ಮಾನ್ಯ ಬಸವಲಿಂಗಪ್ಪನವರು ಕೋಪಗೊಳ್ಳಬಾರದು. ಪೋಲೀಸ್ ಫೋರ್ಸ್‌ನಲ್ಲಿ ಏನು ಆದ್ಯತೆಯನ್ನು ಈ ವರ್ಗದವರಿಗೆ ಕೊಟ್ಟಿದ್ದೀರಿ ಇದನ್ನು ಇನ್ನೂ ಹೆಚ್ಚು ಮಾಡಬೇಕು. ಇವತ್ತು ಹೆಚ್ಚಿನ ರೀತಿಯಲ್ಲಿ ಕೃಷಿ ಕಾರ್ಮಿಕರ, ಹರಿಜನ ಗಿರಿಜನರ ಜಮೀನುಗಳನ್ನು ಕಿತ್ತುಕೊಂಡು ಬೇರೆಯವರಿಗೆ ಹಂಚಿಕೊಡುತ್ತಿದ್ದೀರಿ. ಚಿಕ್ಕಮಗಳೂರಿನಲ್ಲಿ ಇಂಥಾದ್ದು ನಡೆದಿದೆ. ಇದರ ಬಗ್ಗೆ ದಲಿತ ಸಂಘರ್ಷ ಸಮಿತಿಯವರು ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಈ ಸರ್ಕಾರದ ಆಡಳಿತದಲ್ಲಿ ಮೈನಾರಿಟಿ ಕಮ್ಯೂನಿಟಿಯವರಿಗೆ ಏನು ಅನ್ಯಾಯವಾಗುತ್ತಿದೆ ಅದನ್ನು ತಡೆಗಟ್ಟಬೇಕೆಂದು ಹೇಳಬಯಸುತ್ತೇನೆ. ಈಗಾಗಲೇ ಎಜುಕೇಷನ್ ಪಾಲಿಸಿಯ ಬಗ್ಗೆಯೂ ನಾನು ಹೇಳಿದ್ದೇನೆ.

ಮಾನ್ಯ ಅಧ್ಯಕ್ಷರೆ, ಕಡೆಯದಾಗಿ ನಾನು ತಮ್ಮಲ್ಲಿ ಇಷ್ಟು ಮಾತ್ರ ಕೇಳಿಕೊಳ್ಳುತ್ತೇನೆ. ಸ್ಟೇಟ್ ಇಂಟಿಗ್ರೇಷನ್ ಸಮಿತಿಯು ಸಭೆ ಸೇರಿ ಉತ್ತಮ ತೀರ್ಮಾನ ಕೈಗೊಳ್ಳಬೇಕು. ಶಾಂತಿ ಸಮಿತಿಯವರು ಆಗಾಗ್ಗೆ ಸಮಾವೇಶಗೊಂಡು ಉತ್ತಮ ತೀರ್ಮಾನ ಕೈಗೊಳ್ಳಬೇಕು. ಮೊನ್ನೆ ರಾಮನಗರದಲ್ಲಿ ನಡೆದಂಥ ಘರ್ಷಣೆಯಲ್ಲಿ ಸತ್ತವರಿಗೆ ಏನು ಪರಿಹಾರವನ್ನು ಕೊಟ್ಟಿದ್ದೀರಿ ಅದನ್ನು ಇನ್ನೂ ಹೆಚ್ಚು ಮಾಡಬೇಕು. ಏಕೆಂದರೆ ಆ ಕುಟುಂಬದಲ್ಲಿ ದುಡಿಯುತ್ತಿದ್ದ ವ್ಯಕ್ತಿ ಸತ್ತಾಗ ಆ ಸಂಸಾರದವರು ಯಾವರೀತಿ ಜೀವನ ಮಾಡಬೇಕು ? ಈ ಅಂಶವನ್ನು ತಾವು ಗಮನದಲ್ಲಿಟ್ಟುಕೊಂಡು ಸತ್ತವರ ಮನೆಯಲ್ಲಿ ಯಾರಿಗಾದರೂ ಒಬ್ಬರಿಗೆ ಉದ್ಯೋಗವನ್ನು ಕೊಡಬೇಕು. ಈ ಕೆಲಸವನ್ನು ನೀವು ತ್ವರಿತ ಗತಿಯಿಂದ ಮಾಡಬೇಕು ಮತ್ತು ಕೋಮುವಾರು ಘರ್ಷಣೆಗೆ ಇಳಿಯುತಕ್ಕ ಅಥವಾ ಪ್ರಚೋದನೆ ಮಾಡತಕ್ಕ ಜನರ ವಿರುದ್ಧ ಉಗ್ರ ಕ್ರಮ ತೆಗೆದುಕೊಳ್ಳದೇ ಹೋದರೆ ಮುಂದೆ ಆಳಂದ್, ಬೆಳಗಾಂ ಮುಂತಾದ ಕಡೆಗಳಲ್ಲಿ ನಡೆದಂತೆ ಕೃತ್ಯಗಳು ಕೇವಲ ರಾಮನಗರದಲ್ಲಿ ಮಾತ್ರವಲ್ಲ ರಾಜ್ಯದ ಬೇರೆ ಬೇರೆ ಕಡೆಗಳಲ್ಲೂ ನಡೆಯುತ್ತವೆ ಎನ್ನತಕ್ಕ ಮಾತನ್ನು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ ರಾಮನಗರ, ಆಳಂದ್, ಬೆಳಗಾಂ ಮುಂತಾದ ಕಡೆಗಳಲ್ಲಿ ನಡೆದಂಥ ಗಲಭೆಗಳ ಬಗ್ಗೆ (ನಾವು) ಯೋಚನೆ ಮಾಡಿದರೆ ನಮ್ಮಲ್ಲಿ ಸಾಮಾಜಿಕ ಅವ್ಯವಸ್ಥೆ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಆಂದಮೇಲೆ ನಾವು ಯಾರನ್ನೂ ಬೈಯುವುದು ಬೇಡ. ನಮ್ಮ ರಾಜ್ಯದಲ್ಲಿ ಹಿಂದೂ ಫಂಡಮೆಂಟಲಿಸ್ಟ್ಸ್, ಕ್ರಿಶ್ಚಿಯನ್ ಫಂಡಮೆಂಟಲಿಸ್ಟ್ಸ್, ಮುಸ್ಲಿಂ ಫಂಡಮೆಂಟಲಿಸ್ಟ್ಸ್ ಇದ್ದಾರೆ, ಇವರು ಎಲ್ಲಾ ರಾಜಕಾರಣಿಗಳಿಗೂ ಬೇಕಾಗುತ್ತಾರೆ ರಾಜಕಾರಣಿಗಳಿಗೆ ಎಲ್ಲರೂ ಒಂದೇ. ನಮ್ಮ ಹಿಂದೂಗಳಲ್ಲಿ ಟಾಟಾ, ಬಿರ್ಲಾರವರು ದೇವಸ್ಥಾನಗಳನ್ನು ಕಟ್ಟಿಸುತ್ತಾರೆ, ಅರಬ್‌ನಿಂದ ಬಂದವರು ಮಸೀದಿಗಳನ್ನು ಕಟ್ಟಿಸುತ್ತಾರೆ. ಸಾಧ್ಯವಾದಷ್ಟೂ ಜಾತಿಯ ಹೆಸರುಗಳನ್ನು ಹೇಳಿಕೊಂಡು ಪರಸ್ಪರ ವೈಮನಸ್ಸು ಹುಟ್ಟಿಸುವಂಥ ಪರಿಸ್ಥಿತಿ ನಮ್ಮಲ್ಲಿ ಬಹಳಷ್ಟು ಇವೆ. ನಾನು ಮಾನ್ಯ ಸಚಿವರಾದ ರಾಚಯ್ಯನವರಿಗೆ ಒಂದು ಮಾತನ್ನು ಹೇಳುತ್ತೇನೆ. ನಮ್ಮ ರಾಮನಗರಕ್ಕೆ ಒಂದು ಇತಿಹಾಸವೇ ಇದೆ. ಪ್ರತಿವರ್ಷ ಅಲ್ಲಿ ಕರಗ ನಡೆಯುತ್ತದೆ ಎಲ್ಲರಿಗೂ ಗೊತ್ತಿರುವಂತೆ ಮೊನ್ನೆ ರಾಮನಗರದಲ್ಲಿ ದೊಡ್ಡ ಪ್ರಕರಣವೇ ನಡೆದುಹೋಯಿತು. ಆದ್ದರಿಂದ ನಾನು ಒಂದು ಮಾತನ್ನು ಹೇಳುವುದೇನೆಂದರೆ, ರಾಜ್ಯದಲ್ಲಿ ಡ್ರಾಟ್ ಪ್ರೋನ್ ಏರಿಯ ಎಂದು ಯಾವ ರೀತಿ ಕೆಲವು ಪ್ರದೇಶಗಳನ್ನು ಗುರ್ತಿಸುತ್ತೀರೋ ಅದೇ ರೀತಿ ಕಮ್ಯೂನಲ್ ಪ್ರೋನ್ ಏರಿಯ ಎಂದು ಕೆಲವು ಕ್ಷೇತ್ರಗಳನ್ನು ಗುರ್ತಿಸಬೇಕು. ಸಮಾಜದಲ್ಲಿ ಕೆಲವು ಮಿಸ್ಚಿವಸ್ ಫೆಲೋಸ್ ಇರುತ್ತಾರೆ ಅವರ ಕೆಲಸ ಎಂದರೆ ಏನಾದರೂ ಮಾಡಿ ಗಲಾಟೆ ಎಬ್ಬಿಸುವುದು, ಶಾಂತಿ ಭಂಗ ಮಾಡುವುದು. ಹಿಂದೆ ಚನ್ನಪಟ್ಟಣದಲ್ಲಿ ನಡೆದಂಥ ಗಲಾಟೆಯನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡಿದ್ದಿದ್ದರೆ ಮೊನ್ನೆ ರಾಮನಗರದಲ್ಲಿ ಆ ಒಂದು ಪ್ರಕರಣ ಆಗುತ್ತಲೇ ಇರಲಿಲ್ಲ. ನಾನು ಒಂದು ದಿನಪತ್ರಿಕೆಯಲ್ಲಿ ನೋಡಿದೆ. ಈ ಘಟನೆಯಲ್ಲಿ ನೊಂದಂಥ ೧೩೩ ಕುಟುಂಬಗಳಿಗೆ ೩.೫ ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀವತ್ಸರವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಪರಿಹಾರ ಏನೇನೂ ಸಾಲದೆಂದು ನಾನು ಈಗಾಗಲೇ ಹೇಳಿದ್ದೇನೆ. ಇದನ್ನು ಇನ್ನೂ ಹೆಚ್ಚು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಬೇಕು. ರಾಮನಗರದಲ್ಲಿ ನಡೆದಂಥ ಘಟನೆಯ ಬಗ್ಗೆ ಈ ಸರ್ಕಾರ ನಿಜಕ್ಕೂ ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಗಲಾಟೆ ಆಗಲು ಅವಕಾಶ ಕೊಟ್ಟಂಥ ಮತ್ತು ಒಂದಿಷ್ಟೂ ಬುದ್ಧಿ ಇಲ್ಲದೆ ಈ ಪೋಲೀಸರನ್ನು ಮಾನ್ಯ ರಾಚಯ್ಯನವರು ಏತಕ್ಕಾಗಿ ಇಟ್ಟು ಕೊಂಡಿದ್ದಾರೋ ನನಗಂತೂ ಗೊತ್ತಿಲ್ಲ. ರಾಮನಗರದಲ್ಲಿ ಹಿಂದೂ ಮುಸ್ಲಿಂ ಗಲಾಟೆಯಾಗಿ ಕೆಲವರು ಸತ್ತರು. ಅದು ಹುಣಸೇಹಳ್ಳಿಗೂ ಹಬ್ಬಿತು. ಅನಂತರ ಕೋಲಾರಕ್ಕೂ ಅಫೆಕ್ಟ್ ಆಯಿತು. ಅಲ್ಲಿ ಸುಮಾರು ೧೫ ದಿವಸಕಾಲ ಸಿಲ್ಕ್ ಮಾರುಕಟ್ಟೆಯನ್ನೇ ತೆರೆಯಲಿಲ್ಲ. ಇದರಿಂದಾಗಿ ಸುಮಾರು ೧ ಕೋಟಿ ರೂಪಾಯಿಯಷ್ಟು ನಷ್ಟ ಆಯಿತು. ೧ ಕೆ.ಜಿ.ಗೆ ೭೫ ರೂಪಾಯಿ ಇದ್ದಂಥ ರೇಷ್ಮೆ ಬೆಲೆ ೪೫ ರೂಪಾಯಿಗೆ ಇಳಿಯಿತು. ಇಂಥ ಅವ್ಯವಸ್ಥೆಯನ್ನು ಬೇಕೆಂತಲೇ ಮಾಡಿದ್ದಾರೆ. ಈ ಬಗ್ಗೆ ಸರ್ಕಾರ ಮುನ್ನೆಚ್ಚರಿಕೆ ತೆಗೆದುಕೊಂಡಿದ್ದರೆ ಇಂಥ ಪರಿಸ್ಥಿತಿ ಬರುತ್ತಲೇ ಇರಲಿಲ್ಲ. ಇಂಥ ವಿಚಾರ ಗಳಲ್ಲಿ ಪೋಲೀಸರು ಸೂಕ್ತಕ್ರಮ ತೆಗೆದುಕೊಳ್ಳದಿದ್ದರೆ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳ ಬೇಕು. ಲೋಕಲ್ ಪೋಲೀಸರು ಇಂಡಿಫರೆಂಟ್ ಆಗಿರುತ್ತಾರೆ. ಲೋಕಲ್‌ನಲ್ಲಿರತಕ್ಕ ಎಸ್.ಪಿ., ಸರ್ಕಲ್ ಇನ್‌ಸ್ಪೆಕ್ಟರ್, ಡಿ.ವೈ.ಎಸ್.ಪಿ. ಗಳು ತಟಸ್ಥವಾಗಿದ್ದುಬಿಡುತ್ತಾರೆ. ಸಾಮಾನ್ಯವಾಗಿ ಇಂಥ ಗಲಾಟೆಗಳು ಆಗಬೇಕಾದರೆ ಒಂದು ಜಾತಿಯ ಮೇಲೆ ಇನ್ನೊಂದು ಜಾತಿಯನ್ನು ಎತ್ತಿಕಟ್ಟಿ, ಗಲಾಟೆ ಮಾಡಿಸಲು ವಿಷ ಬೀಜವನ್ನು ಹಾಕತಕ್ಕಂಥ ಬುದ್ಧಿ ಅನೇಕ ರಾಜಕಾರಣಿಗಳಲ್ಲಿದೆ. ಇಂಥ ಒಂದು ಅವ್ಯವಸ್ಥೆ ರಾಜ್ಯದಲ್ಲಿರುವಾಗ ನೀವು ಪೋಲೀಸರನ್ನು ಸಡಿಲ ಬಿಟ್ಟರೆ ಮತ್ತೆ ಯಾವುದೇ ಕಾರಣ ದಿಂದಲೂ ಇಂಥ ಗಲಾಟೆಗಳನ್ನು ನೀವು ಕಡಿಮೆ ಮಾಡುವುದಕ್ಕಾಗುವುದಿಲ್ಲ. ನಮಗೆ ಸ್ವಾತಂತ್ರ್ಯ ಬಂದು ೩೯ ವರ್ಷಗಳು ಕಳೆದರೂ ನಾವು ಒಳ್ಳೆಯ ಬುದ್ಧಿಯನ್ನು ಕಲಿತಿಲ್ಲ. ಕೋಮುವಾರು ಘರ್ಷಣೆಯ ಬಗ್ಗೆ ನಾವು ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳದಿದ್ದರೆ, ಸಮಾಜಘಾತುಕ ಶಕ್ತಿಗಳನ್ನು ಬಲಿಹಾಕದಿದ್ದರೆ ನಮಗೆ ಕಷ್ಟವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಸರ್ವೇ ಸಾಧಾರಣವಾಗಿ ಎಲ್ಲಾ ಎಂದು ಹೇಳಬೇಡಿ. ಕೆಲವರು ಎಂದು ಹೇಳಿ. ಕೆಲವು ಪ್ರದೇಶಗಳಲ್ಲಿ ಹೀಗಿರಬೇಕು. ಎಲ್ಲರೂ ಹೀಗೆಯೇ ಇದ್ದಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಇದು ಒಂದು ರೀತಿಯಾದ ಸಾಮಾಜಿಕ ಅವ್ಯವಸ್ಥೆ ಎಂದು ನಾನು ಹೇಳಬೇಕಾಗುತ್ತದೆ. ದುರಾದೃಷ್ಟವಶಾತ್ ಮಹಾತ್ಮ ಗಾಂಧಿಜೀಯವರನ್ನು ನಾಥುರಾಮ್ ಗೋಡ್ಸೆ ಎಂಬ ಒಬ್ಬ ಹಿಂದು ಕೊಂದದ್ದು. ಮುಸಲ್ಮಾನ ಯಾರಾದರೂ ಕೊಂದಿದ್ದರೆ ಇಡೀ ದೇಶವೇ ಅಲ್ಲೋಲಕಲ್ಲೋಲವಾಗಿ ಬಿಡುತ್ತಿತ್ತು. ಗೋಡ್ಸೆ ಕೊಂದದ್ದಕ್ಕೆ ಗಲಭೆ ಆಗಲಿಲ್ಲ. ಇಂಡಿಯಾದಲ್ಲಿ ಕೋಮು ಮತ್ತು ವಿಚ್ಛಿದ್ರಕಾರಕ ಶಕ್ತಿಗಳನ್ನು ಹೋಗಲಾಡಿಸಬೇಕು.

ಶ್ರೀ ಕೆ. ಎಚ್. ಶ್ರೀನಿವಾಸ್.—ಗೋಡ್ಸೆ ತೆಗೆದುಕೊಂಡು ಹೋಗಿ ಗಾಡ್‌ಸೆ ಎಂದು ಹೇಳುತ್ತಿದ್ದೀರಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಗೂಡ್ಸೆ ಎಂದು ನಾನು ಹೇಳಿದ್ದುದು. ಇಂಥ ಒಂದು ಪರಿಸ್ಥಿತಿ ನಮ್ಮಲ್ಲಿ ಇದೆ. ನಮ್ಮ ದೇಶದಲ್ಲಿ ಪಠ್ಯಪುಸ್ತಕಗಳನ್ನು ಬರೆಯುವವರೂ ಕೂಡ ಜಾತಿ ಬೋಧನೆಯನ್ನು ಮಾಡತಕ್ಕಂಥ ಪುಸ್ತಕಗಳನ್ನೇ ಬರೆಯುತ್ತಾರೆ. ನಮ್ಮ ಜಾತಿ, ನಮ್ಮ ರಾಮ, ನಮ್ಮ ಕೃಷ್ಣ ಎಂದು ನಾವು ಹೇಳುವುದಾದರೆ, ನಮ್ಮ ಕ್ರೈಸ್ತ ಎಂದು ಕ್ರಿಶ್ಚಿಯನ್ನರು, ಹಲ್ಲ ಎಂದು ಮುಸಲ್ಮಾನರು ಹೇಳುವಂಥ ಬೋಧನೆಗಳು ಪಠ್ಯಪುಸ್ತಕಗಳ ಬರತಕ್ಕಂಥದ್ದು ಒಂದು ಶೋಚನೀಯ ವಾದ ಪರಿಸ್ಥಿತಿ. ಭಾಷಾವಾರು ಸಮಸ್ಯೆಯ ಬಗ್ಗೆ ನಮ್ಮನ್ನು ಕರೆಸಿದ್ದರು, ಮಾನ್ಯ ರಾಚಯ್ಯ ನವರೂ ಕೂಡ ಇದ್ದರು. ಮಾನ್ಯ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡುದರ ಬಗ್ಗೆ ಸರ್ಕ್ಯುಲರ್ ಕೂಡ ಹೊರಡಿಸಿದ್ದಾರೆ. ಮೂರನೇಯ ತರಗತಿಯವರೆಗೆ ಇಂಥದ್ದನ್ನ ಬಲತ್ಕಾರ ಮಾಡಬಾರದೆಂದು ಇಂಡಿಯನ್ ಕಾನ್ಸಿಟ್ಯೂಷನ್‌ನಲ್ಲಿಯೇ ಇದೆ. ಕೆಲವು ಮಹಾ ಬುದ್ಧಿವಂತರು ಹೇಳಿದರು, ಕನ್ನಡ ಕಾವಲು ಸಮಿತಿ ಯವರು ಹೇಳಿದರು ಎಂದು. ಕನ್ನಡ ಇಂಪೋಸ್ ಮಾಡಿ ಎಂದು ನಾಲ್ಕು ಸರ್ಕ್ಯುಲರ್‌ಗಳನ್ನು ಕೂಡ ಹೊರಡಿಸಿದರು. ಇದನ್ನೇ ಮಹಾರಾಷ್ಟ್ರ ಭಾಷಾಭಿಮಾನಿಗಳು ಕಾದಿದ್ದರು. ಕರ್ನಾಟಕದಲ್ಲಿ ಅವರನ್ನು ಎತ್ತಿಕಟ್ಟಿದ್ದರಿಂದ ಎಂಟು ಸ್ಥಾನಗಳು ಹೋಯಿತು. ತಮಗೆ ಗೊತ್ತಿದೆ ಇದರಿಂದ ಏನೇನು ಅನಾಹುತಗಳಾಯಿತೆಂದು. ಇದೇರೀತಿ ಗಲಭೆಗಳು ಆಗುತ್ತಲೇ ಇವೆ. ಇಂಥ ಒಂದು ಅವ್ಯವಸ್ಥೆಗಳು ಉಂಟಾದಾಗ ನಮ್ಮನ್ನು ಕರೆಸಿಕೊಳ್ಳುತ್ತಾರೆ. ಆದ್ದರಿಂದ ನಾವು ಹೇಳುವುದೇನೆಂದರೆ ರಾಮನಗರ, ಅಳಂದ್ ಇಲ್ಲಿ ನಡೆದ ಗಲಭೆಗಳ ಬಗ್ಗೆ ನಾವು ತಲೆಬಾಗಿಸಬೇಕಾಗಿದೆ. ಈಗ ಆಯಾ ಸ್ಥಳದ ಡಿ. ಸಿ. ಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಗಲಭೆಗಳು ಲೋಕಲ್ ಆಗಿ ಆದರೆ

ಸಂಬಂಧಪಟ್ಟ ಸಬ್‌ಇನ್‌ಸ್ಪೆಕ್ಟರನ್ನು ಡಿಸ್‌ಮಿಸ್ ಮಾಡುತ್ತೇವೆಂದು ಹೇಳಿದ್ದಾರೆ. ಪೋಲೀಸ್‌ನವರೇ ಇಂಥ ಒಂದು ಅನಾಹುತದ ಬೀಜವನ್ನು ಬಿತ್ತಿದ್ದಾರೆ. ಬಿಜಾಪುರದಲ್ಲಿ ಇಂಥದ್ದೇ ಒಂದು ಘಟನೆ ನಡೆಯಿತು. ಆಗ ಅದನ್ನು ತಪ್ಪಿಸಬಹುದಾಗಿತ್ತು. ದಯವಿಟ್ಟು ಮಾನ್ಯ ಸಚಿವರಾದ ರಾಚಯ್ಯನವರು ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕು. ಈ ರೀತಿಯಾದ ಕೋಮುವಾರು ಗಲಭೆ ಕರ್ನಾಟಕದಲ್ಲಿರುವ ರಾಮನಗರದಲ್ಲಿ ಒಂದೇ ಅಲ್ಲ. ನೂರಾರು ಪಟ್ಟಣಗಳಲ್ಲಿ ನಡೆಯುತ್ತಿದೆ. ಒಬ್ಬರಮೇಲೆ ಒಬ್ಬರನ್ನು ಎತ್ತಿ ಕಟ್ಟತಕ್ಕಂಥ ಮಹಾನುಭಾವರು ನಮ್ಮ ದೇಶದಲ್ಲಿ ಇದ್ದಾರೆ. ಎಲೆಕ್ಷನ್‌ಗೆ ಉಪಯೋಗಿಸಿಕೊಳ್ಳಬೇಕು, ಲೀಡರ್ ಆಗಬೇಕು ಎನ್ನುವ ಒಂದು ಕಾರಣವನ್ನು ಇಟ್ಟುಕೊಂಡು ಗಲಭೆಗಳನ್ನುಂಟುಮಾಡತಕ್ಕಂಥ ರಾಜಕಾರಣಿಗಳನ್ನು ತಾವು ಗುರುತಿಸಬೇಕು. ಸಮಾಜದಲ್ಲಿ ಇಂಥ ವ್ಯಕ್ತಿಗಳೆಲ್ಲ ಜಾಸ್ತಿ ಇರುವುದರಿಂದ ಅದರ ಬಗ್ಗೆ ಬಹಳ ಹುಷಾರಿಂದ ಇರಬೇಕು. ಸಾಧಾರಣವಾಗಿ ಗಲಭೆಗಳು ಆಗತಕ್ಕಂಥದ್ದು ಹೆಣ್ಣಿನ ವಿಷಯದಲ್ಲಿ, ದೇವಸ್ಥಾನಗಳ ವಿಷಯದಲ್ಲಿ. ಶ್ರೀಮತಿ ಬೇಗಮ್‌ರವರು ಹೇಳಿದಹಾಗೆ ಮಸೀದಿಯ ಮುಂದೆ ಒಂದು ಹಲಗೆ ಹೊಡೆದರೆ, ರೋಡಿನಲ್ಲಿ ಒಂದು ಕಲ್ಲು ಹಾಕಿದರೆ ಸಾಕು ಗಲಭೆಗಳು ಶುರುವಾಗಿ ಬಿಡುತ್ತದೆ. ಒಂದು ಬಿಗಿಯಾದ ವ್ಯವಸ್ಥೆ ಇದ್ದರೆ ಇಂಥದೆಲ್ಲಾ ಆಗುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಮಾನ್ಯ ರಾಚಯ್ಯನವರನ್ನು ನಾನು ರಿಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ ಪೋಲೀಸ್ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡಬೇಕು. ಅದರಲ್ಲಿ ನನಗಂತೂ ನಂಬಿಕೆ ಇದೆ. ಮಾಲೂರಿನಲ್ಲಿ ಒಂದು ಗಲಭೆ ಆಯಿತು ೭–೮ ಜನರು ಸತ್ತರು. ಇದಕ್ಕೆ ಶ್ಯಾಮಸುಂದರ್ ಕಮಿಷನ್ ರಿಪೋರ್ಟ್ ಇನ್ನೊಂದು ರಿಪೋರ್ಟ್‌ನ್ನು ಕೇಳಿದರೆ ಕೊಟ್ಟುಬಿಡುತ್ತಾರೆ, ಇದರಿಂದ ಏನೂ ಸಲ್ಯೂಷನ್ ಆಗುವುದಿಲ್ಲ. ಜಾತಿ ಮನೋಭಾವನೆಯನ್ನು ಬೆಳೆಸುವುದಕ್ಕೆ ಬದಲಾಗಿ ಅದನ್ನು ತೆಗೆಯುವುದಕ್ಕೆ ಪ್ರಯತ್ನವನ್ನು ಮಾಡಬೇಕು. ನಮ್ಮದು ಸೆಕ್ಯುಲರ್ ಸ್ಟೇಟ್ ಎಂದು ಹೇಳುತ್ತೇವೆ ನಿಜವಾಗಿಯೂ ಸೆಕ್ಯುಲರ್ ಸ್ಟೇಟ್ ಆಗಿಲ್ಲ. ವೆಸ್ಟ್ ಬೆಂಗಾಲ್ ಮತ್ತು ಕೇರಳಗಳಲ್ಲಿ ವರ್ಗಸಂಘಟನೆ ಇಲ್ಲ. ವರ್ಗ ಸಂಘಟನೆಗಳನ್ನು ಬೆಳೆಸುವುದಕ್ಕೆ ವಿರುದ್ಧವಾಗಿ ಬೋಧನೆಗಳನ್ನು ಕೊಡಬೇಕು. ಪೋಲೀಸ್ ಖಾತೆಯಿಂದ ಕೇಂದ್ರ ಮತ್ತು ರಾಜ್ಯಕ್ಕೆ ಆಗಬೇಕಾದ ಉಪಯುಕ್ತತೆಯ ಬಗ್ಗೆ ತಿಳುವಳಿಕೆ ಬೇಕು. ಒಂದೊಂದು ಡಿಸ್ಟ್ರಿಕ್ಟ್‌ನಲ್ಲೂ ಸಬ್‌ಇನ್‌ಸ್ಪೆಕ್ಟರ್ಸ್ ಇರುತ್ತಾರೆ, ತಾಲ್ಲೂಕು ತಾಲ್ಲೂಕುಗಳಲ್ಲೂ ಸಬ್‌ಇನ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್ ಇರುತ್ತಾರೆ. ಡಿ.ಎಸ್.ಪಿ.ಯವರು ಅವರಿಗೆ ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡಬೇಕು. ಇಂಥ ವಿಷಯಗಳು ಅವರ ಗಮನಕ್ಕೆ ಬಂದಾಗ ಅವರನ್ನು ಡಿಸ್‌ಮಿಸ್ ಮಾಡಬೇಕು. ಹತ್ತು ಜನರನ್ನು ಡಿಸ್‌ಮಿಸ್ ಮಾಡಿದರೆ ಕರ್ನಾಟಕದಲ್ಲಿ ಕೋಮುವಾರು ಗಲಭೆಗಳು ಆಗುವುದಿಲ್ಲ. ಈಗ ನಡೆದಿರತಕ್ಕಂಥ ಗಲಭೆಗಳಿಗೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಗಲಭೆಗಳಿಂದ ನೊಂದ ಜನರಿಗೆ ಪರಿಹಾರವಾಗಿ ಕೊಟ್ಟಿರತಕ್ಕಂಥ ಮೂರುವರೆ ಲಕ್ಷ ರೂಪಾಯಿಗಳು ಏನೇನು ಸಾಲದು. ಸುಮಾರು ೧೩೫ ಸಂಸಾರಗಳಿಗೆ ಇದರಿಂದ ಹಾನಿಯಾಗಿರುತ್ತದೆ. ಬೆಳಗಾಂನಲ್ಲಿ ೫ ಜನರು ಸತ್ತರು, ಆಳಂದ್‌ನಲ್ಲಿ ಮೂರು ಜನರು ಸತ್ತರು ಇಂಥದೆಲ್ಲಾ ಆಗಬಾರದು. ಮೊದಲೇ ನಾವು ಹುಷಾರಾಗಿರಬೇಕು. ಪ್ರಿವೆನ್‌ಷನ್ ಯೀಸ್ ಬೆಟರ್ ದ್ಯಾನ್ ಕ್ಯೂರ್ ಎಂದು ಹೇಳಿದಹಾಗೆ ಮೊದಲೇ ಎಲ್ಲಾ ವಿಧವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇದೆಲ್ಲ ಆದಮೇಲೆ ಕಮಿಷನ್ ನೇಮಿಸಿ, ಎನ್‌ಕ್ವಯರಿ ಮಾಡಿಸಿ, ಎನ್‌ಕ್ವಯರಿ ರಿಪೋರ್ಟ್‌ನ್ನು ಕಚೇರಿಯ ಕಬೋರ್ಡ್‌ನಲ್ಲಿ ಇಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳಿ. ಈಗ ಇರತಕ್ಕಂಥ ವ್ಯವಸ್ಥೆಯನ್ನು ಖಂಡಿಸಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI **R.S. MANE** (Belgaum).—Speaker Sir, in a democracy minorities are always at the mercy of the Government which is in majority.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಿಗೆ ಕನ್ನಡ ಬರುತ್ತದೆ. ಆದ್ದರಿಂದ ಅವರು ಕನ್ನಡದಲ್ಲಿ ಮಾತನಾಡಬೇಕೆಂದು ಹೇಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

MR. SPEAKER.—I have allowed the Hon. Member to speak in English.

SRI R. S. MANE.—In Belgaum from 1st June 1986 to 7th June 1986 there was police firing at least three times On 1-6-86 at 4-30 p.m. at Hindalga, police opened fire wherein two died and one received injuries. Thereafter in Belagundi on 6th June there were two police firings and on 7-6-86 police opened fire at Benakanahalli and in all these incidents 10 people lost their lives. What was the reason for this movement which was launched by the Samyukta Maharashtra Seema Samiti offering Satyagraha? It was for withdrawal of the order which made preaching of Kannada as a compulsory language. Satyagraha was not new to Marathi speaking people. For your information Mr. Speaker, I would remind you that two times, once in 1957 March and thereafter in November 1958, Satyagraha was launched by M.E.S, in the border areas. In the month of March 1957, the batch of the first Satyagrahis was led by Jayavantharao Tilak who is the Chairman of the Legislative Council in Maharashtra at present In the month of November 1958 in the second phase of the Satyagraha, 16,000 people took part and courted arrest. But in the Satyagraha sponsored by the Samyukta Maharashtra Seema Samati this time, at the most about 1500 people might have taken part. But what did not happen at the time of the previous two Satyagrahas happened this time. Police opened fire on Satyagrahis who were peaceful. What was the reason?

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಬೆಳಗಾವಿಯಲ್ಲಿ ನೀರು ಪಂಪಿಗೆ ಬೆಂಕಿ ಹಚ್ಚಿದರು. ಇದು ಪೀಸ್‌ಫುಲ್ ಹೇಗೆ ಆಗುತ್ತದೆ? ಇದನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ನಾವಿಲ್ಲಿ ಸುಮ್ಮನೆ ಇವರು ಹೇಳುವುದನ್ನು ಕೇಳಿ ಕೈಕಟ್ಟಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ...

(INTERRUPTIONS)

SRI R. S. MANE.—This could have been avoided by the Government. And, therefore, the Government...

(INTERRUPTIONS)

SRI R.S. MANE.—The Satyagraha was declared on 1-5-86 From 1-5-86...

(INTERRUPTIONS)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಎಷ್ಟೊಂದು ಮಂದಿ ಹೆಸರು ಕೊಟ್ಟಿದ್ದಾರೆ, ಎಲ್ಲರಿಗೂ ನಾನು ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಹಿಂಡಲಗಾದಲ್ಲಿ ನೀರಿನ ಪೈಪ್ ಒಡೆದರು, ಅವರ ಸತ್ಯಾಗ್ರಹ ಹೇಗೆ ಪೀಸ್‌ಫುಲ್ ಆಯಿತು...

SRI R.S. MANE.—The Government was aware of the Satyagraha and why it was launched. It was because Kannada was being taught compulsorily. That is why the Satyagraha was taken up. It was possible for the Government to avoid this as there was ample chance. It was declared on 1-5-86 at Kolhapur. that Satyagraha would be launched from 1st June. The Government sat silant over the declaration and forgot its duty towards the minorities as stated by the then Chief Minister Sri S. Nijalingappa in his very August House. He said, " I must also admit at the same time that there are small areas no doubt where the majority of the people speak language different from Kannada. I for one will not hesitate to have the areas included in their respective linguistic States. It would be necessary. But while it may be difficult to transfer these territories immeditely, I want to assure these linguistic minorities that nothing will be done to affect their interest adversely". This was the solemn promise given by no less a person then Sri Nijalingappa whom I consider to be the father of Karnataka. But this solomn promise was forgotton by the Government and the Government went on saying that there was no compulsion. This was a totally false stand taken by the Government. There was the violation of the resulation of 1961 Chief Minister's Conference. All the while the stand that was taken by the Chief Minister and his colleagues was that Kannada was not at all compulsorily taught. Now I am having one letter of the Education Department. It bears No. ED 21 SMS/SMC 83 dated 23-1-86. Mr. Speaker this letter is signed by the Under Secretary to Government, Education Department. What does it say? Here in paragraph 2 it say that the method of teaching Kannada in Marathi schools of Belgaum region is in accordance with the Government policy and in the first para it says "Maharashtra Ekikaran Samiti, Belgaum have alleged that the Kannada language is imposed on the minority. As per Government Order No. ED 113-79, dt. 20th July 1982 the State language Kannada is being taught compulsorily from the first standard." What more proof is required to establish that Kannada is being taught compulsorily in linguastic minority schools? The letter further says that "Kannada teachers have been appointed non-kannada schools for teaching Kannada only from 1st Std., to 7th Std. In non-kannada schools of border regions several programmes are arranged. In the present circumstances they say that the method of teaching Kannada as compulsory language in Marathi schools in Belgaum areas is in accordance with the rules". This is the copies of the letter written by the Education Department to the Assistant Commissioner for linguistic minorities in India on 23-1-86. The Chief Minister and the Government have been taking a stand that there is no compulsion of Kannada at all.

Who will believe this stand? They say that Kannada is being taught only from the third standard and there is no compulsion for first and second standards. But they fail to know that Kannada in the third standard is not being taught from the beginning *i.e.*, the alphabets. The first two text books that are taught in the First and Second Standard are not taught in the third standards and it is admitted that in the third standard the student must pass in Kannada language. That would mean that unless he learns kannada in the first and second standards, he cannot pass in the third standard.

ಶ್ರೀ ಬಿ. ಬಸವನಗೌಡ —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಭಾಷಾಭಿಮಾನದ ಬಗ್ಗೆ ಮಾತನಾಡುತ್ತಿದ್ದಾರೋ, ಅಥವಾ ಗೋಲಿಬಾರ್ ಬಗ್ಗೆ ಮಾತನಾಡುತ್ತಿದ್ದಾರೋ?

SRI R.S. MANE.—I am stressing the point that the last change to avoid this Satyagraha was with the Government but they did not exercise that chance and therefore the Satyagraha had to be launched by the SMSS as well as MES for getting the injustice and linguistic tyranny removed from the area. Now, Mr. Speaker Sir, you will find that at no time...

SRI M.S. KRISHNAN.—What I would like to know is whether the Hon. Member is opposed to Kannada being introduced even from the third standard?

SRI R.S. MANE:—Kannada cannot be taught compulsorily to linguistic minorities in the State at least in the border areas because the border dispute is still pending.

(INTERRUPTIONS)

6-00 P. M.

What was the purpose of Satyaghraha? We have also to consider as to who was at fault.

SRI. K. H. SHRINIVAS.—I have a Point of Order, ಈಗ ಇಲ್ಲಿ ಚರ್ಚೆ ನಡೆಯುತ್ತಿರುವುದು ನಾವು ಕೊಟ್ಟ ನಿಲುವಳಿ ಸೂಚನೆಯ ಮೇಲೆ ಅಲ್ಲ "ಮತ್ತು ಅವರು ಕೊಟ್ಟ ನಿಲುವಳಿ ಸೂಚನೆಯ ಮೇಲೂ ಅಲ್ಲ", ಈಗ ಇಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲೆ ಅಲ್ಪಕಾಲದ ಚರ್ಚೆ ನಡೆಯುತ್ತಿದೆ. ಆದ್ದರಿಂದ ಅವರು ಇದಕ್ಕೆ ಸೀಮಿತವಾಗಿ ಕಾರಣಗಳನ್ನು ಕೊಟ್ಟು ಸೂಕ್ಷ್ಮವಾಗಿ ಮಾತನಾಡಿದರೆ ನಾವು ಅದಕ್ಕೆ ಅಡ್ಡ ಬರುವುದಿಲ್ಲ. ಆದರೆ ಅವರು ಬೆಳಗಾಂನಲ್ಲಿ ಸತ್ಯಾಗ್ರಹ ಏತಕ್ಕೆ ಮಾಡಬೇಕಾಯಿತೆಂಬುದನ್ನು ಹೇಳುತ್ತಿದ್ದಾರೆ. ಇದರೆ ಜೊತೆಗೆ ಗಡಿ ಬಗ್ಗೆ ಸಹ ಹೇಳುತ್ತಿದ್ದಾರೆ. ಈಗ ಗಡಿ ಪ್ರಶ್ನೆ ಎಲ್ಲಿದೆ? ಅವರು ಪಾಕೀಸ್ತಾನ ಮತ್ತು ಇಂಡಿಯಾ ಗಡಿ ಬಗ್ಗೆ ಏನಾದರೂ ಹೇಳುತ್ತಿದ್ದಾರೆಯೆ? ಅವರು ಬೆಳಗಾಂನಲ್ಲಿ ನಡೆದ ಗಲಭೆಯನ್ನು ಪ್ರಸ್ತಾಪ ಮಾಡಿ ಇಲ್ಲಿ ಗಲಭೆ ಆಗುವಂತೆ ಮಾಡುತ್ತಿದ್ದಾರೆ. ಇದನ್ನು ತಾವು ನಿಯಂತ್ರಣ ಮಾಡಬೇಕು.

ಅಧ್ಯಕ್ಷರು.—ತಾವು ವಿಷಯಾಂತರ ಮಾಡಬೇಡಿ.

SRI R. S. MANE.—On 1st June 1986 there was firing at about 4·30 near Hindalga. On that day Satyagraha was launched by the

Leader of the Opposition in the Maharastra Legislative Assembly Sri Sharad Pawar. At the time of Satyagraha some stones calme from the Government Polytechnic College and when the police were there I personally pointed out to the police that stonesare coming from the Polytechnic College.

(INTERRUPTIONS)

ಅಧ್ಯಕ್ಷರು.—ತಾವು ವಿಷಯಾಂತರ ಮಾಡಬೇಡಿ, ಜಾಗ್ರತೆ ಮುಗಿಸಿ.

Sri Mane, please conclude. Otherwise I will call another Member.

SRI R. S. MANE.—Even at the time of firing...........

ಅಧ್ಯಕ್ಷರು.—ತಾವು ದಯಮಾಡಿ ಮುಕ್ತಾಯ ಮಾಡಿ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಶ್ರೀ ಶರದ್‌ಪವಾರ್ ಅವರನ್ನು ಇವರು ಸಮರ್ಥನೆ ಮಾಡುತ್ತಿದ್ದಾರೆ. ಅದಕ್ಕೆ ತಾವು ಅವಕಾಶ ಕೊಡಬಾರದು.

SRI R. S. MANE.—I condemn the police firing which was done without any...........

(INTERRUPTIONS)

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ.

SRI R. S. MANE.—I will read my Adjourment Motion.........

(INTERRUPTIONS)

ಅಧ್ಯಕ್ಷರು.—ನೀವು ಕಾಂಟ್ರಾವರ್ಸಿಯಲ್ ಆಗಿ ಮಾತನಾಡುತ್ತಿದ್ದೀರಿ. ಅದು ಸರಿಯಲ್ಲ Sri Mane, please resume your seat. It wil not be recorded. ತಾವು ಮುಕ್ತಾಯ ಮಾಡಿ. ಮಾನ್ಯ ವೆಂಕಟರಾಮಯ್ಯನವರು ಅವರಿಗೆ ಗೈಡ್ ಮಾಡಬೇಕು. ತಾವು ಮುಕ್ತಾಯ ಮಾಡದಿದ್ದರೆ ನಾನು ಬೇರೆಯವರನ್ನು ಮಾತನಾಡಲು ಕರೆಯುತ್ತೇನೆ.

SRI R. S. MANE.—while supportiong the Adjourment Motion given by my friends I condemn the police firing at Belgum, Aland and Ramanagaram.

†ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ (ಧಾರವಾಡ).—ಮಾನ್ಯ ಅಧ್ಯಕ್ಷರೇ, ಬೆಳಗಾಂನಲ್ಲಿರುವಂತಹ ಕೆಲವು ರಾಜಕಾರಣಿಗಳು ಮತ್ತು ಬೆಳಗಾಂನಲ್ಲಿರುವಂತಹ ಎಂ. ಇ. ಎಸ್. ಸದಸ್ಯರು ಸೇರಿಕೊಂಡು ಗಡಿವಿಚಾರದಲ್ಲಿ ಬೆಳಗಾಂನಲ್ಲಿ ನಡೆಸುತ್ತಿರುವ ದೌರ್ಜನ್ಯ ಕೃತ್ಯಗಳ ಬಗ್ಗೆ ನಾವು ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ. ಕಳೆದ ಮೇ 31ನೇ ತಾರೀಕಿನ ದಿವಸ ಕೊಲ್ಲಾಪುರದಲ್ಲಿ ಸಂಯುಕ್ತ ಮಹಾರಾಷ್ಟ್ರ ಸೀಮಾ ಸಮಿತಿಯವರು ಒಂದು ಸಭೆ ಸೇರಿ ಜೂನ್ ಒಂದರಿಂದ ಒಂದು ವಿಷಯ ಎತ್ತಿಕೊಂಡು ಬೆಳಗಾಂನಲ್ಲಿ ಹಂತಹಂತವಾಗಿ ಸತ್ಯಾಗ್ರಹವನ್ನು ಪ್ರಾರಂಭ ಮಾಡುತ್ತೇವೆಂದು ಘೋಷಣೆ ಮಾಡಿದರು. ಆಗ ಸತ್ಯಾಗ್ರಹ ಮಾಡುವುದನ್ನು ನಿಲ್ಲಿಸಿ ತಮ್ಮ ಬಳಿ ಬಂದು ಇದರ ಬಗ್ಗೆ ಚರ್ಚೆ ಮಾಡಬಹುದೆಂದು ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಲ ಅವರಿಗೆ ತಿಳಿಸಿದರೂ ಸಹ ಅವರು ಬೆಳಗಾಂನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಹಂಬಲದಿಂದ ಭಾಷಾವಿಷಯವನ್ನು ಎತ್ತಿಕೊಂಡು ಬಹಳ ದೊಡ್ಡ ರೀತಿಯಲ್ಲಿ ಹಿಂಸಾಚಾರ ನಡೆಸಿದರು. ಅಲ್ಲಿನ ಕನ್ನಡಿಗರಿಗೆ ನಾನಾ ರೀತಿಯಿಂದ ಅನ್ಯಾಯ ಮಾಡಿದ್ದಾರೆ. ಇದೇ ಎಂ. ಇ. ಎಸ್. ಸದಸ್ಯರು ಅಲ್ಲಿನ ನಗರಸಭೆಯ ಕೆಲಸಕಾರ್ಯಗಳ ಕಡೆಗೆ ಹೆಚ್ಚಿನ ಲಕ್ಷ ಕೊಡದೆ, ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡದೆ ಅಲ್ಲಿನ ಮಹಾನಗರಸಭೆಯನ್ನು ಎಂ. ಇ. ಎಸ್. ನ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಒಂದು ಕಛೇರಿಯನ್ನಾಗಿ, ಒಂದು ಸಂಸ್ಥೆಯನ್ನಾಗಿ ಮಾಡಿಕೊಂಡು ಅಲ್ಲಿರುವ ಕನ್ನಡಿಗರ ಮೇಲೆ ದೌರ್ಜನ್ಯವನ್ನು ನಡೆಸುತ್ತಿದ್ದಾರೆ. ಇದನ್ನು ಮೊದಲು ತಡೆಗಟ್ಟಬೇಕೆಂದು ಅಲ್ಲಿನ ಮಹಾನಗರ ಸಭೆಯ ಕೆಲವು ಸದಸ್ಯರು ಬೆಂಗಳೂರಿಗೆ ಬಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಇದರ ಜೊತೆಗೆ ನಾವು ಸಹ ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆದರೆ ಸರ್ಕಾರ ಇನ್ನೂ ಕ್ರಮ ತೆಗೆದು ಕೊಡಿಲ್ಲ. ಬೆಳಗಾಂನಲ್ಲಿ ಹಿಂಸಾಚಾರ ನಡೆಸಲು ಅನೇಕ ದುಷ್ಟಶಕ್ತಿಗಳು ಮಹಾರಾಷ್ಟ್ರದಿಂದ ಬಂದು ಸೇರಿಕೊಂಡಿವೆ. ಈ ದುಷ್ಟಶಕ್ತಿಗಳಿಗೆ ರಾಜಕೀಯದಲ್ಲಿರುವಂತಹ ಕೆಲವು ವ್ಯಕ್ತಿಗಳು ಸಂರಕ್ಷಣೆ ನೀಡುತ್ತಿದ್ದಾರೆ. ಮೊನ್ನೆ ಅಲ್ಲಿ ನಡೆದಂಥ ಗಲಭೆಗೆ ಮುಖ್ಯ ಕಾರಣವೆಂದರೆ, ಭಾಷಾವಿಷಯವನ್ನು ಎತ್ತಿಕೊಂಡು ಅವರು ದೊಡ್ಡ ರೀತಿಯಲ್ಲಿ ದೌರ್ಜನ್ಯ ನಡಸಿದ್ದುದು. ಕಳೆದ ಜೂನ್ ಒಂದನೇ ತಾರೀಕು ಅವರು ಶಾಂತಿಯುತವಾಗಿ ಚಳುವಳಿ ಮಾಡುತ್ತೇವೆಂದು ಹೇಳಿದವರು, ರಸ್ತೆಯ ಮೇಲೆ ವಾಹನಗಳಲ್ಲಿ ಹೋಗುತ್ತಿದ್ದವರಿಗೆ ತೊಂದರೆ ಕೊಡುವ ಸಲುವಾಗಿ ರಸ್ತೆಗಳ ಮೇಲೆ ಕಲ್ಲುಗಳನ್ನು ಅಡ್ಡವಾಗಿಟ್ಟರು. ರಸ್ತೆಯಲ್ಲಿ ಓಡಾಡುತ್ತಿದ್ದ ಕನ್ನಡಿಗರ ಮೇಲೆ ಹಿಂಸಾಚಾರ ನಡೆಸಿದರು. ರೇಷ್ಮೆ ಇಲಾಖೆಗೆ ಸೇರಿದ ಕಛೇರಿಯನ್ನು ಹಾಗೂ ಫಾರಂನ್ನು ಪೂರ್ಣವಾಗಿ ಧ್ವಂಸ ಮಾಡಿದರು. ಹಿಂಡಲಗಾ ಬಳಿ ಇರುವಂತಹ ಪಂಪ್‌ಹೌಸ್‌ಗೆ ಹಾನಿ ಮಾಡಿದರು. ನೀರು ಸರಬರಾಜು ಮಾಡುವ ಕೊಳವೆಗಳನ್ನು ಕಿತ್ತುಹಾಕಿದರು. ಅಲ್ಲಿರುವಂತಹ ಜೈಲಿನೊಳಕ್ಕೆ ಕಲ್ಲುಗಳನ್ನು ಒಗೆದರು. ಇಷ್ಟೆಲ್ಲಾ ದೌರ್ಜನ್ಯಗಳನ್ನು ಅವರು ನಡೆಸಿದ ಕಾರಣದಿಂದ ಪೋಲೀಸರು ಅನಿವಾರ್ಯವಾಗಿ ಗೋಲಿಬಾರ್ ಮಾಡಬೇಕಾಗಿ ಬಂತು. ಅನೇಕ ದುಷ್ಕೃತ್ಯಗಳನ್ನು ನಡೆಸಿದ ನಂತರವೇ ಪೋಲೀಸರು ಕ್ರಮ ತೆಗೆದುಕೊಂಡಿದ್ದಾರೆಯೇ ಹೊರತು ಏಕಾಏಕಿ ಕ್ರಮ ತೆಗೆದುಕೊಂಡಿಲ್ಲ. ಜೂನ್ ಒಂದರಿಂದ ಇವರು ಹಂತಹಂತವಾಗಿ ಸತ್ಯಾಗ್ರಹವನ್ನು ನಡೆಸುತ್ತೇವೆಂದು ಮೊದಲೇ ಘೋಷಣೆ ಮಾಡಿದಾಗ್ಯೂ ಸಹ ಬೆಳಗಾಂನ ಜನರು ಇವರಿಗೆ ಪ್ರೋತ್ಸಾಹ ಕೊಡಲಿಲ್ಲ. ಈ ಕಾರಣದಿಂದ ಬೆಳಗಾಂನಲ್ಲಿರುವಂತಹ ಎಂ. ಇ. ಎಸ್ ಸದಸ್ಯರು ಅಲ್ಲಿರುವಂತಹ ಅನೇಕ ರಾಜಕೀಯ ಹಿತಾಶಕ್ತಿಗಳನ್ನು ಸೇರಿಸಿಕೊಂಡು ಅವರ ಸಹಾಯದಿಂದ ಮಹಾರಾಷ್ಟ್ರದಿಂದ ೨–೩ ಸಾವಿರ ಜನರನ್ನು ಆಮದುಮಾಡಿಕೊಂಡರು. ಅಲ್ಲಿಂದ ಬಂದ ಜನರ ಸಹಾಯದಿಂದ ಈ ಎಂ. ಇ. ಎಸ್. ಸದಸ್ಯರು ಬೆಳಗಾಂ ನಗರಕ್ಕೆ ನೀರು ಸರಬರಾಜು ಮಾಡುವಂತಹ ೮–೧೦ ಕಿಲೋಮೀಟರ್ ಉದ್ದದ ಪೈಪ್–ಲೈನನ್ನು ಪೂರ್ಣವಾಗಿ ಧ್ವಂಸ ಮಾಡಿದರು. ಇದರಿಂದ ಅನೇಕ ದಿನಗಳ ಕಾಲ ಅಲ್ಲಿನ ನಾಗರೀಕರಿಗೆ ನೀರು ಸರಬರಾಜು ಆಗಲಿಲ್ಲ. ಇಂತಹ ಒಂದು ಹೀನ ಕೃತ್ಯವನ್ನು ಅವರು ಮಾಡಿದ್ದಾರೆ. ಇವರ ಹೀನಕೃತ್ಯಗಳನ್ನು ತಪ್ಪಿಸಲು ಪೋಲೀಸರು ಹೋದಾಗ, ಪೋಲೀಸರ ಪೈಕಿ ಒಬ್ಬರನ್ನು ಈ ಜನರು ಹಿಡಿದುಕೊಂಡು ಅವರಿಗೆ ಬೆಂಕಿ ಹಚ್ಚಿ ಕೊಲೆ ಮಾಡಿದದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಅನೇಕ ಚಿತ್ರಗಳು ಕನ್ನಡಪ್ರಭ ಪತ್ರಿಕೆಯಲ್ಲಿವೆ ಮತ್ತು ಇದಕ್ಕೆ ಸಂಬಂಧಪಟ್ಟಂತೆ ವಿವರವಾದಂಥ ವರದಿಗಳನ್ನು ಕೊಟ್ಟಿದ್ದಾರೆ. ಈ ಹೀನಕೃತ್ಯ ನಡೆದಮೇಲೆ ಸನ್ಮಾನ್ಯ ಗೃಹ ಮಂತ್ರಿಗಳಾದ ರಾಚಯ್ಯನವರು ೮ನೇ ತಾರೀಕಿನ ದಿವಸ ಶ್ರೀ ಎಸ್. ಆರ್. ಬೊಮ್ಮಾಯಿ ಅವರನ್ನು ಶ್ರೀ ಬಿ. ಎಲ್. ಪಾಟೀಲ್ ಅವರನ್ನು ಹಾಗೂ ಶ್ರೀ ಇನಾಂದಾರ ಅವರನ್ನು ಕರೆದುಕೊಂಡು ನಡೆದ ಘಟನೆಗಳ ಬಗ್ಗೆ ಪೂರ್ಣವಾಗಿ ತನಿಖೆ ಮಾಡಲು ಹಾಗೂ ವಿಷಯ ತಿಳಿದುಕೊಳ್ಳಲು ಹೋಗಿದ್ದರು ಆ ಸಮಯದಲ್ಲಿ ಮಾನ್ಯ ಮಂತ್ರಿಗಳು ಇವರಲ್ಲಿ ಯಾರಯಾರ ಕೈವಾಡ ಇತ್ತು ಎಂಬುದನ್ನು ಮತ್ತು ಶ್ರೀ ಶರದ್‌ಪವಾರ್ ಅವರು ಯಾರ ಮನೆಯಲ್ಲಿದ್ದರು ಎಂಬುದನ್ನು ತಿಳಿದುಕೊಂಡಿದ್ದಾರೆ.

ಮದ್ದು ಗುಂಡುಗಳನ್ನು ಮತ್ತು ಆಯುಧಗಳನ್ನು ಎಲ್ಲೆಲ್ಲಿ ಇಟ್ಟುಕೊಂಡಿದ್ದರು ಎನ್ನುವ ವಿಷಯ ಸನ್ಮಾನ್ಯ ರಾಚಯ್ಯನವರು ಬೆಳಗಾಂ ಜಿಲ್ಲೆಗೆ ಭೇಟಿ ಕೊಟ್ಟಾಗ ತಿಳಿದು ಬಂದಂತಹ ಸಂಗತಿಯಾಗಿದ್ದು ಆದರೂ ಕೂಡ ಆ ವಿಚಾರವನ್ನು ಅವರು ಪತ್ರಿಕೆಗಳಿಗೆ ಹೇಳಲಿಲ್ಲ. ಮತ್ತೆ ಶರದ್‌ಪವಾರ್‌ರವರು. ಯಾರ ಮನೆಯಲ್ಲಿ ಇದ್ದರು, ಅವರಿಗೆ ಯಾರ್ಯಾರು ರಕ್ಷಣೆಯನ್ನು ಕೊಟ್ಟರು ಎನ್ನುವ ವಿಚಾರಗಳು ಸಹ ಸಾಬೀತು ಆಗಿವೆ ಆದರೂ ಕೂಡ ನಮ್ಮ ಸರ್ಕಾರದವರು ಸರಿಯಾದ ಕ್ರಮವನ್ನು ಅವರ ಮೇಲೆ ತೆಗೆದುಕೊಂಡಿಲ್ಲ. ಯಾರ್ಯಾರು ಇಂತಹ ಕೃತ್ಯಗಳಿಗೆ ಕುಮ್ಮಕ್ಕು ಕೊಟ್ಟರೋ ಅವರ ಮೇಲೆ ಸರ್ಕಾರದವರು ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದೇ ಪ್ರಕಾರವಾಗಿ ನಮ್ಮ ಬೆಳಗಾಂ ನಗರದಲ್ಲಿ ಕನ್ನಡಿಗರ ಮೇಲೆ ಅನೇಕ ದುಶ್ಕೃತ್ಯಗಳನ್ನು ಎಸಗಿದ್ದಾರೆ. ಮಹಾನಗರಪಾಲಿಕೆ ಎಂ.ಇ.ಎಸ್. ನವರ ಕೈಯಲ್ಲಿ ಇದೆ ಎಂದು ಅಲ್ಲಿಯೂ ಸಹ ಅವರು ಅನ್ಯಾಯವನ್ನು ಮಾಡುತ್ತಿದ್ದಾರೆ. ಈ ಎಲ್ಲಾ ದುಷ್ಕೃತ್ಯಗಳಿಗೆ ಮಹಾರಾಷ್ಟ್ರದ ಕೆಲವು ಏಜೆನ್ಸಿಗಳಿಂದ ದೊಡ್ಡ ಪ್ರಮಾಣದಲ್ಲಿ ದುಡ್ಡು ಬರುತ್ತಿದೆ ಎಂದು ಸಹ ನಮಗೆ ಗೊತ್ತಾಗಿದೆ. ಇದರ ಜೊತೆಗೆ ಅಲ್ಲಿನ ರಾಜಕಾರಣಿಗಳು ಸಹ ಇವರಿಗೆ ಸಹಕಾರವನ್ನು ಕೊಡುತ್ತಿದ್ದಾರೆ. ಇದರಿಂದ ನಮ್ಮ ಸರ್ಕಾರ ಬಹಳ ಬುದ್ಧಿವಂತಿಕೆಯಿಂದ ಅವರ ಮೇಲೆ

ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಗಡಿ ಪ್ರದೇಶದಲ್ಲಿರತಕ್ಕಂಥ ಬೆಳಗಾಂ ನಗರಕ್ಕೆ ಹೊರರಾಜ್ಯದಿಂದ ಏನೇನು ಸಪ್ಲೈ ಆಗುತ್ತಿದೆ ಎನ್ನುವುದು ನಮ್ಮ ಪೋಲೀಸ್ ಇಲಾಖೆಯ ಗುಪ್ತದಳಕ್ಕೆ ಗೊತ್ತಿರದಂತಹ ವಿಷಯವೇನೂ ಅಲ್ಲ. ಒಂದು ವೇಳೆ ಇದು ಗೊತ್ತಿಲ್ಲದಿದ್ದರೆ ವಿಷಾದನೀಯವಾದ ಸಂಗತಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಬೆಳಗಾಂ ನಗರದಲ್ಲಿ ಈ ಎಂ.ಇ.ಎಸ್. ನವರು ಹಿಂಸಾಚಾರವನ್ನು ಮಾಡುತ್ತಿದ್ದಾರೆ. ಅಲ್ಲಿನ ಕನ್ನಡಿಗರ ರಕ್ಷಣೆ ಅವರ ಆಸ್ತಿಪಾಸ್ತಿಗಳ ರಕ್ಷಣೆ ಇಲ್ಲದಂತಾಗುತ್ತದೆ. ಇದರ ಜೊತೆಗೆ ಬೆಳಗಾಂ ನಗರದಲ್ಲಿನ ಕನ್ನಡ ಪತ್ರಿಕಾಲಯ ಮೇಲೆ ದಬ್ಬಾಳಿಕೆಯನ್ನು ಮಾಡುವುದು, ಕಛೇರಿಗಳಿಗೆ ಬೆಂಕಿಯನ್ನು ಇಟ್ಟು ಸುಟ್ಟು ಹಾಕಿರತಕ್ಕಂಥ ವಿಷಯಗಳನ್ನು ನಾವು ಈಗಾಗಲೇ ಪತ್ರಿಕೆಗಳಲ್ಲಿ ಓದಿದ್ದೇವೆ. ಈ ಎಲ್ಲಾ ಹೀನಕೃತ್ಯಗಳನ್ನು ಮಾಡುವುದಕ್ಕೆ ಈ ಎಂ.ಇ.ಎಸ್. ನವರೇ ಕಾರಣ. ಆದ್ದರಿಂದ ನಮ್ಮ ಸರ್ಕಾರದವರು ಇವರ ಮೇಲೆ ತೀವ್ರವಾದಂಥ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಇನ್ನು ಮುಂದೆ ಇಂತಹ ದುರ್ಘಟನೆಗಳು ನಡೆಯದಂತೆ ತಕ್ಕ ಬಂದೋಬಸ್ತು ಸಹ ಮಾಡಬೇಕೆಂದು ನಾನು ಹೇಳುತ್ತೇನೆ. ಅದರಲ್ಲಿಯೂ ವಿಶೇಷವಾಗಿ ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಾದಂಥ ಶ್ರೀಮಾನ್ ರಾಜೀವ್ ಗಾಂಧಿಯವರು ಈ ಗಡಿ ಸಮಸ್ಯೆಯ ಬಗ್ಗೆ ನಮ್ಮ ಎಂ.ಇ.ಎಸ್. ನವರಿಗೆ ತಕ್ಕ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಅವರು ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಯಾವುದೇ ಒಂದು ಆಯೋಗವನ್ನು ಆಗಲಿ ಅಥವಾ ಯಾವುದೇ ಒಂದು ಕಮಿಷನ್ ಅನ್ನು ಆಗಲಿ ಸರ್ಕಾರಗಳು ನೇಮಕ ಮಾಡಿ ಆ ಆಯೋಗಗಳು ಒಂದು ನಿರ್ಣಯವನ್ನು ಕೊಟ್ಟ ಮೇಲೆ ಆ ನಿರ್ಣಯವನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಆ ನಿರ್ಣಯವನ್ನು ಒಪ್ಪಿಕೊಳ್ಳಲಿಲ್ಲವೆಂದ ಮೇಲೆ ಸರ್ಕಾರಕ್ಕೂ ಬೆಲೆಇಲ್ಲ ಆ ಆಯೋಗಕ್ಕೂ ಬೆಲೆ ಇಲ್ಲದಂತೆ ಆಗುತ್ತದೆಂದು ಹೇಳಿದ್ದಾರೆ. ನಿಜವಾಗಿಯೂ ಈ ಮಾತನ್ನು ನಾವೆಲ್ಲರೂ ಮೆಚ್ಚಿಕೊಳ್ಳಬೇಕು. ಕೇಂದ್ರ ಸರ್ಕಾರವೇ ಆಗಲಿ ಅಥವಾ ರಾಜ್ಯ ಸರ್ಕಾರವೇ ಆಗಲಿ ಯಾವುದಾದರೊಂದು ಕಮಿಷನ್ ಅನ್ನು ನೇಮಕಮಾಡಿ ಆ ಕಮಿಷನ್ ತನ್ನ ನಿರ್ಣಯವನ್ನು ಅಂತಿಮವಾಗಿ ಕೊಟ್ಟ ಮೇಲೆ ಆ ನಿರ್ಣಯಕ್ಕೆ ನಾವೆಲ್ಲರೂ ಮಾನ್ಯತೆಯನ್ನು ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಎಂ.ಇ.ಎಸ್. ನವರು ಮಹಾಜನ್ ಆಯೋಗದವರು ಕೊಟ್ಟಿರುವ ಹೈತೀರ್ಪನ್ನು ಒಪ್ಪಿಕೊಂಡು ಭಾಷಾ ವಿಷಯವಾಗಿ ಈ ರೀತಿ ಸಮಸ್ಯೆಯನ್ನುಂಟು ಮಾಡುವುದನ್ನು ಬಿಡಬೇಕು. ಅಲ್ಪಸಂಖ್ಯಾತರ, ಇನ್ನಿತರೇ ಯಾವುದೇ ಕೋಮಿನ ಭಾಷಾ ವಿಚಾರಗಳನ್ನು ಮುಂದಿಟ್ಟುಕೊಂಡು ಚಳುವಳಿ ಇತ್ಯಾದಿಗಳನ್ನು ಮಾಡುವುದು ಆ ರಾಜಕಾರಣಿಗಳಿಗೆ ಸರಿಯಲ್ಲ. ನಮ್ಮ ರಾಜ್ಯದಲ್ಲಿ ನಾವು ಭಾಷಾ ನೀತಿಯನ್ನು ತಂದಿದ್ದೇವೆ. ಆ ಪ್ರಕಾರ ಅವರು ನಡೆದುಕೊಳ್ಳಲಿ. ಅವರು ನಮ್ಮ ಕನ್ನಡ ನಾಡಿನ ಅನ್ನ ಮತ್ತು ಗಾಳಿಯನ್ನು ಸೇವನೆ ಮಾಡುತ್ತಿರುವಾಗ ಕನ್ನಡಿಗರೊಂದಿಗೆ ಸೌಹಾರ್ದದಿಂದ ವರ್ತಿಸಬೇಕು. ಕನ್ನಡಿಗರಲ್ಲಿ ಒಳ್ಳೆಯ ಸೌಜನ್ಯವಿದೆ. ಅದಕ್ಕೆ ನಮ್ಮ ಎಂ.ಇ.ಎಸ್. ನವರು ಕೃತಜ್ಞತೆಗಳನ್ನು ಸಲ್ಲಿಸಬೇಕು. ಇನ್ನು ಮುಂದಾದರೂ ಕನ್ನಡಿಗರೊಂದಿಗೆ ಸಹಬಾಳ್ವೆಯನ್ನು ನಡೆಸಿಕೊಂಡು ಜೀವನ ಮಾಡುವಂತೆ ನಮ್ಮ ಸರ್ಕಾರದವರು ಅವರಿಗೆ ಎಚ್ಚರಿಕೆಯನ್ನು ಕೊಡಬೇಕು. ಮತ್ತೆ ನಮ್ಮ ಸರ್ಕಾರದವರು ಈಗಾಗಲೇ ಕೆಲವು ಜನರನ್ನು ಅರಸ್ಟ್ ಮಾಡಿದ್ದಾರೆ. ಅವರೆಲ್ಲರನ್ನು ಬಿಡಿಸಿಕೊಳ್ಳುವುದಕ್ಕೆ ಕೆಲವು ಎಂ.ಇ.ಎಸ್. ನವರು ಮಧ್ಯಸ್ಥಿಕೆ ವಹಿಸಿ ಕುಮ್ಮಕ್ಕು ಮಾಡುತ್ತಿದ್ದಾರೆಂದು ಗೊತ್ತಾಗಿದೆ ನಮ್ಮ ಸರ್ಕಾರದವರು ಯಾವುದೇ ಅಂತಹ ಯಾವುದೇ ಕುಮ್ಮಕ್ಕು ಮಧ್ಯಸ್ಥಿಕೆಗೆ ಒಳಗಾಗದೆ, ಯಾವುದೇ ಒತ್ತಡಕ್ಕೆ ಒಳಗಾಗದೆ ಯಾರ್ಯಾರು ಏನೇನು ದುಷ್ಕೃತ್ಯಗಳನ್ನು ಮಾಡಿದ್ದಾರೋ ಅವರೆಲ್ಲರಿಗೂ ತಕ್ಕ ಶಿಕ್ಷೆಯನ್ನು ಕೊಡುವುದಕ್ಕೆ ನಮ್ಮ ಸರ್ಕಾರದವರು ಉಗ್ರವಾದಂಥ ಕ್ರಮ ತೆಗೆದುಕೊಳ್ಳಬೇಕು. ನಾನು ಮೊದಲೇ ಹೇಳಿದ ಹಾಗೆ ನಮ್ಮ ಎಂ.ಇ.ಎಸ್. ನವರು ಕನ್ನಡನಾಡಿನ ಕನ್ನಡಿಗರೊಂದಿಗೆ ಸಹಬಾಂಧವ್ಯ ಬೆಳೆಸಿಕೊಂಡು ಅವರ ಜೊತೆಯಲ್ಲಿ ಬಾಳಬೇಕೆಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದಂಥ ಶ್ರೀ ಜಮಖಂಡಿಯವರೇ ತಾವು ಮಾತನಾಡಿ......

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಈಗಾಗಲೇ ಸುಮಾರು ಆರೂಕಾಲು ಗಂಟೆಯಾಗಿದೆ. ನಾಳೆಗೆ ಇಂದಿನ ಚರ್ಚೆಯನ್ನು ಮುಂದೂಡಬಹುದಲ್ಲವೇ ? ಏತಕ್ಕೆಂದರೆ ನಮಗೂ ಒಂದು ರೀತಿಯಲ್ಲಿ ಹಿಂಸೆಯಾಗಿದೆ. ಇನ್ನು ಮಾತನಾಡುವ ಸದಸ್ಯರು ಇದ್ದಾರೆ. ಜೊತೆಗೆ ಪತ್ರಿಕಾ ವರದಿಗಾರರಿಗೂ ತೊಂದರೆಯಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ನಾಳೆಗೆ ಈ ವಿಷಯವನ್ನು ಮುಂದೂಡಲು ಸಾಧ್ಯವಿಲ್ಲ........

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ ಇದು ಬಹಳ ಗಂಭೀರವಾದಂಥ ವಿಷಯ.

(ಗೊಂದಲ)

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ನಾಳೆಗೆ ಇದನ್ನು ಮುಂದೂಡಿ. ಇನ್ನು ಮಾನ. ಸದಸ್ಯರು ಕೆಲವರು ಮಾತನಾಡುವವರಿದ್ದಾರೆ. ಮಾನ್ಯಮಂತ್ರಿಗಳಿಂದ ಉತ್ತರ ಆಗಬೇಕು ಇಷ್ಟೆಲ್ಲಾ ಇನ್ನು ಅರ್ಧಗಂಟೆಯಲ್ಲಿ ಹೇಗೆ ಮುಗಿಸುತ್ತೀರಿ ?

ಅಧ್ಯಕ್ಷರು.—ತಾವೆಲ್ಲಾ ದಯಮಾಡಿ ಕುಳಿತುಕೊಳ್ಳಿ. ಈ ವಿಷಯ ಇವತ್ತು ಮುಕ್ತಾಯ ವಾಗಲೇಬೇಕು. ಮಾನ್ಯ ಜಮಖಂಡಿಯವರೇ ತಾವು ಭಾಷಣ ಪ್ರಾರಂಭ ಮಾಡಿ......

(ಗೊಂದಲ)

ಶ್ರೀ ಧರ್ಮಸಿಂಗ್.—ಈ ವಿಷಯಕ್ಕೆ ಗಂಭೀರತೆ ಹೊರಟುಹೋಗುತ್ತದೆ......

ಅಧ್ಯಕ್ಷರು.—ದಯಮಾಡಿ ತಾವೆಲ್ಲ ಕುಳಿತುಕೊಳ್ಳಿ. ಇವತ್ತು ಈ ಮುಕ್ತಾಯ ಆಗಲೇಬೇಕು...

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಇದೇನು ಬಡ್ಜೆಟೇ ? ಇವತ್ತೆ ಪಾಸ್ ಮಾಡಿ ನಾವು ಮೇಲ್ಮನೆಗೆ ಕಳುಹಿಸಿಕೊಡಬೇಕು. ಅಲ್ಲಿಂದ ಮತ್ತೆ ವಾಪಸಾಗಿ ಬರಬೇಕೆಂದು ಎಂದೇನು ಇಲ್ಲ. ಈಗಾಗಲೇ ಸುಮಾರು ಆರೂಕಾಲುಗಂಟೆ ಆಗಿದೆ. ಸದಸ್ಯರಿಗೆ ಹಿಂಸೆಯಾಗುತ್ತಿದೆ ಪತ್ರಿಕಾ ವರದಿಗಾರರಿಗೂ ಹಿಂಸೆಯಾಗುತ್ತದೆ......

ಅಧ್ಯಕ್ಷರು.—ಇಲ್ಲ......

ಶ್ರಿ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾಳೆ ಇದನ್ನು ತೆಗೆದುಕೊಳ್ಳಿ.........

ಅಧ್ಯಕ್ಷರು.—ದಯಮಾಡಿ ತಾವೆಲ್ಲ ಕುಳಿತುಕೊಳ್ಳಿ. ಮಾನ್ಯ ಜಮಖಂಡಿಯವರೇ ತಾವು ಶುರು ಮಾಡಿ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ ಈ ವಿಷಯಕ್ಕೆ ೧೦–೦೦ ಗಂಟೆಗೆ ಮೇಲಾ ಗುತ್ತದೆ. ಇನ್ನು ಮಾತನಾಡುವ ಸದಸ್ಯರಿದ್ದಾರೆ......

ಅಧ್ಯಕ್ಷರು.—ತಾವು ಈ ರೀತಿ ಇಂಟರ್‌ಫಿಯರ್ ಮಾಡುವುದು ಸರಿಯಲ್ಲ. ಎಲ್ಲರಿಗೂ ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೇನೆ, ಈ ವಿಷಯವನ್ನು ಇವತ್ತೇ ಮುಗಿಸಬೇಕು. ನಿಯಮ ೬೮ರ ಪ್ರಕಾರ ಇದನ್ನು ಮುಂದಾಕುವುದಕ್ಕೆ ಬರುವುದಿಲ್ಲ. ದಯಮಾಡಿ ತಾವೆಲ್ಲಾ ಕುಳಿತುಕೊಳ್ಳಿ... .....

(ಗೊಂದಲ)

ಅಧ್ಯಕ್ಷರು.—ತಾವೆಲ್ಲ ಈ ರೀತಿ ಮಾಡಿದರೆ ನಾನು ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳ ಬೇಕಾಗುತ್ತದೆ. ದಯಮಾಡಿ ತಾವೆಲ್ಲ ಕುಳಿತುಕೊಳ್ಳಿ......

(ಗೊಂದಲ)

ಶ್ರೀ ಕೆ.ಹೆಚ್. ಶ್ರಿನಿವಾಸ್.—ಹಾಗಾದರೆ ತಾವು ಸಭೆಯ ಅಭಿಪ್ರಾಯವನ್ನೇ ತೆಗೆದುಕೊಳ್ಳಿ. ಅದೇ ಅಭಿಪ್ರಾಯವಿರುವುದರಿಂದ ನಾವು ಸಭೆಯನ್ನು ನಾಳೆಗೆ ಮುಂದೂಡಿ ಎಂದು ಹೇಳುತ್ತಿರುವುದು.

ಅಧ್ಯಕ್ಷರು.—ದಯಮಾಡಿ ತಾವು ಕುಳಿತುಕೊಳ್ಳಿ......

(ಗೊಂದಲ)

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ದಯಮಾಡಿ ತಾವೆಲ್ಲಾ ಕುಳಿತುಕೊಳ್ಳಿ. ಇನ್ನು ಅರ್ಧ ಗಂಟೆ ನೋಡಿ ವಿಚಾರ ಮಾಡೋಣ... ..

(ಗೊಂದಲ)

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ ಎಲ್ಲರಿಗೂ ಅವಕಾಶ ಕೊಡಬೇಕು. ರಾಮನಗರಂ ವಿಷಯಕ್ಕೆ ಗಂಟೆಗಟ್ಟಲೆ ಅವಕಾಶ ಕೊಟ್ಟಿದ್ದೀರಿ. ಈ ವಿಷಯಕ್ಕೆ ಅರ್ಧಗಂಟೆ ಎಂದರೆ ಹೇಗೆ ?......

ಅಧ್ಯಕ್ಷರು.—ದಯಮಾಡಿ ತಾವೆಲ್ಲಾ ಕುಳಿತುಕೊಳ್ಳಿ. ಮಾನ್ಯ ಜಮುಖಂಡಿಯವರು ಶುರು ಮಾಡಲಿ......

ಶ್ರೀ ಜಮುಖಂಡಿ.—ಮಾನ್ಯ ಅಧ್ಯಕ್ಷರೇ ಜೂನ್......

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಿಗೂ ಕೂಡ ಮಾನ್ಯ ಅಧ್ಯಕ್ಷರೇ ಎಂದು ಮಾತ್ರ ಹೇಳುತ್ತಿದ್ದಾರೆ. ಮುಂದೆ ಏನು ಮಾತನಾಡಬೇಕೆನ್ನುವುದಕ್ಕೆ ಅವರೂ ಕೂಡ ತಯಾರು ಇಲ್ಲ. ಅವರಿಗೂ ಕೂಡ ಆಗಿತೆ. ದಯಮಾಡಿ ನಾಳೆಗೆ ಮುಂದೂಡಿ......

(ಗೊಂದಲ)

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ಅವರನ್ನು ಕರೆದಿದ್ದೇನೆ. ಈಗ ಅವರು ಮಾತನಾಡಲಿ, ಮಾನ್ಯ ಜಮುಖಂಡಿಯವರೇ ನೀವು ಮಾತನಾಡಿ.

† ಶ್ರೀ ಬಿ. ಜಿ. ಜಮುಖಂಡಿ (ಮುಧೋಳ್).—ಸನ್ಮಾನ್ಯ ಅಧ್ಯಕ್ಷರೇ, ಜೂನ್ ತಿಂಗಳಲ್ಲಿ ಬೆಳಗಾಂ ಸುತ್ತಮುತ್ತಲಿರುವ ಪ್ರದೇಶಗಳಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಹೇಯ ಕೃತ್ಯಗಳನ್ನು ಮಾಡಿರುವುದು ಎಲ್ಲರಿಗೂ ಗೊತ್ತಿದೆ. ಈ ವಿಚಾರವಾಗಿ ಈಗಾಗಲೇ ಮಾನ್ಯ ಚಂದ್ರಕಾಂತ್ ಬೆಲ್ಲದ್‌ರವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಭಾಷಾ ನೀತಿಯ ನೆವದಲ್ಲಿ ಬೆಳಗಾಂ ಅನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಒಂದೇ ಒಂದು ಗುರಿ ಇಟ್ಟುಕೊಂಡು ಚಳುವಳಿ ಮಾಡಿದರು. ನಮ್ಮ ಸರ್ಕಾರ ಒಂದು ನಿಲುವನ್ನು ತೆಗೆದುಕೊಂಡಿದೆ. ಮಹಾಜನ್ ವರದಿಯನ್ನು ಜಾರಿಗೆ ತರಲೇಬೇಕು, ಮಹಾಜನ್ ವರದಿಯಲ್ಲಿ ಬೆಳಗಾಂ ಅನ್ನು ಮಹಾರಾಷ್ಟ್ರಕ್ಕೆ ಸೇರಿಸಕೂಡ ದೆಂದು ಇದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು, ಮಹಾರಾಷ್ಟ್ರದಲ್ಲಿರುವ ಕೆಲವು ಮುಖಂಡರು ಕೊಲ್ಲಾಪುರದಲ್ಲಿ ಸಭೆ ಸೇರಿದರು. ಅನಂತರ ಅಲ್ಲಿಂದ, ಅಲ್ಲಿ ಕೆಲವು ಹಮಾಲರು, ಪುಂಡಾಟಿಕೆಯವರನ್ನು ಕರೆದುಕೊಂಡು, ಭಾಷಾ ನೀತಿಯ ನೆವದಲ್ಲಿ ಬೆಳಗಾಂನಲ್ಲಿ ಗಲಭೆ ಎಬ್ಬಿಸಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿರುವುದು, ರೇಡಿಯೋದಲ್ಲಿ ಬಂದಿರುವುದನ್ನು ನಾವು ಕೇಳಿದ್ದೇವೆ. ಇವರು ಯಾವರೀತಿ ಪುಂಡಾಟಿಕೆ ಮಾಡಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿದೆ. ಹಾಗೆಯೇ ನಿಪ್ಪಾಣಿಯಲ್ಲಿ ಗಲಭೆ ಆಯಿತು. ಸಂಕೇಶ್ವರದಲ್ಲಿ ಶಿವಾಜಿ ಪ್ರತಿಮೆಗೆ ಚಪ್ಪಲಿ ಹಾರ ಹಾಕಿದರು ಎಂದು ಅಲ್ಲಿಯೂ ಗಲಭೆ ಮಾಡಿದರು. ವಾಸ್ತವವಾಗಿ ಅಲ್ಲಿ ಶಿವಾಜಿ ಪ್ರತಿಮೆಯೇ ಇಲ್ಲ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಬೆಳಗಾಂ ಸುತ್ತಮುತ್ತ ತಾಂಡವವಾಡುತ್ತಿದ್ದಾರೆ. ನಿಪ್ಪಾಣಿಯಲ್ಲಿ ಸಬ್ ರಿಜಿಸ್ಟ್ರಾರ್ ಅವರ ಕಛೇರಿಯನ್ನು ಸುಟ್ಟು ಭಸ್ಮ ಮಾಡಿದರು. ನಮ್ಮ ಸರ್ಕಾರದವರು ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಜೊತೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟರೂ, ಅದಕ್ಕೆ ಅವರು ಕಿವಿಗೊಡದೆ, ಬೆಳಗಾಂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪುಂಡಾಟಿಕೆ ಮಾಡುತ್ತಿದ್ದಾರೆ. ಕರ್ನಾಟಕದ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡಿದ್ದು, ಕನ್ನಡಿಗರ ಆಸ್ತಿಪಾಸ್ತಿಯನ್ನು ಹಾಳು ಮಾಡಿದ್ದಾರೆ. ದುರುದ್ದೇಶದಿಂದ ಈ ಪುಂಡಾಟಿಕೆಯನ್ನು ಮಾಡಿದ್ದಾರೆ. 8ನೇ ತಾರೀಖು, ಗೋವಾಂತಕ ಎಕ್ಸ್‌ಪ್ರೆಸ್ ರೈಲು ಬರುವ ಸಮಯದಲ್ಲಿ ಫಿಷ್‌ಪ್ಲೇಟನ್ನು ತೆಗೆದುಹಾಕಿ, ರೈಲ್ವೆ ಹಳಿ ಮೇಲೆ ಮರದ ಟೊಂಗೆಗಳನ್ನು ಇಟ್ಟು ಭೀಕರ ರೈಲ್ವೆ ಅಪಘಾತ ಮಾಡುವ ಸಂಚು ಮಾಡಿದರು. ಅವರು ಇಂತಹ ಒಂದು ಹೀನ ಕೃತ್ಯಕ್ಕೆ ಕೈಹಾಕಿದರು. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಭಾಷಾ ನೀತಿಯ ಹೆಸರಿನ ಮೇಲೆ ಈ ಪುಂಡಾಟಿಕೆ ಮಾಡುತ್ತಿದ್ದಾರೆ. ಈ ವಿಚಾರವಾಗಿ ನಮ್ಮ ಸರ್ಕಾರದವರು ಹಾಗೂ ಪೋಲೀಸಿನವರು ಕೆಲವು ಪುಂಡರನ್ನು ಬಂಧಿಸಿದ್ದಾರೆ, ಕೇಸ್ ಹಾಕಿದ್ದಾರೆ. ಈ ಕೇಸುಗಳನ್ನು ಹಿಂದಕ್ಕೆ ತೆಗೆದುಕೊಳ್ಳಬಾರದು. ಒಂದು ವೇಳೆ ಹಿಂದಕ್ಕೆ ತೆಗೆದುಕೊಂಡರೆ, ಮತ್ತೆ ಇದೇ ಪರಿಪಾಠ ಆಗುತ್ತದೆ. ಶ್ರೀಯುತ ಮಾನೆಯವರು ಹೇಳಿದಂತೆ ಎಲ್ಲಾ ಕಡೆ ಗೋಳಿಬಾರ್ ಮಾಡಲಿಲ್ಲ. ಸರ್ಕಾರ ಒಳ್ಳೆಯ ರೀತಿಯಿಂದ ಕ್ರಮ ಕೈಗೊಂಡಿದೆ. ಜೂನ್ ತಿಂಗಳಲ್ಲಿ ನಡೆದ ಗಲಭೆಯಲ್ಲಿ ಕಲ್ಲುಗಳನ್ನು ಹಿಡಿದು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೊಂಡು ಗಲಭೆ ಮಾಡುತ್ತಿರುವಾಗ ನಮ್ಮ ಸರ್ಕಾರ ಗೋಳಿಬಾರ್ ಮಾಡಿದ್ದಾರೆ. ಲಾಠಿಚಾರ್ಜ್ ಮಾಡುವ ಪರಿಸ್ಥಿತಿ ಬಂತು. ಅನಂತರ ಬೆಳಗಾಂ ನಗರದಲ್ಲಿ ಕುಡಿಯುವ ನೀರು ಇಲ್ಲದೆ ಪರಿತಪಿಸುತ್ತಿದ್ದಾರೆ. ಇಂತಹ ಒಂದು ಸಮಯದಲ್ಲಿ ಹಿಂಡಲಗಾ ಬಳಿ ಇರುವ ಪಂಪ್‌ಹೌಸ್ ಧ್ವಂಸ ಮಾಡಿದರು. ಇದನ್ನು ಮಾಡಿದವರು ಯಾರು? ಮಹಾರಾಷ್ಟ್ರ ಏಕೀಕರಣ ಸಮಿತಿಯವರು. ಅನಂತರ ರಕ್ಕಸಕೊಪ್ಪದಿಂದ ಬೆಳಗಾವಿಗೆ ಬರುವಂಥ ಎಲ್ಲಾ ನೀರಿನ ಪೈಪನ್ನೂ ಒಡೆದುಹಾಕಿ, ನೀರು ಸರಬರಾಜು ವ್ಯವಸ್ಥೆಯನ್ನು ಕೆಡಿಸಿದರು. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಹೋಗಿ, ಇದನ್ನು ದುರಸ್ತಿ ಮಾಡಿ, ನೀರು ಕೊಡುವಂಥ ವ್ಯವಸ್ಥೆ ಮಾಡಿದರು. ಇದಕ್ಕೆ ಕರ್ನಾಟಕದಲ್ಲಿರುವಂಥ ಎಲ್ಲರೂ ಸಹಕಾರ ಕೊಟ್ಟರು. ಇನ್ನೂ ಕೆಲವು ಕಡೆ ರಸ್ತೆಗಳಿಗೆ, ವಾಹನಗಳು ಬರದಂತೆ ಅಡ್ಡಿಯುಂಟುಮಾಡಿದರು. ನಮ್ಮ ಸರ್ಕಾರದವರು ತಾಳ್ಮೆಯಿಂದ, ಜಿಲ್ಲೆಯ ಮಂತ್ರಿಗಳು ಹಾಗೂ ಶಾಸಕರು, ಸ್ಥಳಕ್ಕೆ ಭೇಟಿ ನೀಡಿ ಶಾಂತಿ ನೆಲೆಸುವಂತೆ ಮಾಡಬೇಕೆಂದು ತಿಳಿಸಿದ್ದಾರೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಹಾಗೂ ಚಗನ್ ಭುಜಬಲ್ ಎಂಬುವರು ಈ ಗಲಭೆಗಳಿಗೆ ಪ್ರಚೋದನೆ ಮಾಡಿದ್ದಾರೆ. ಒಮ್ಮೆ ಒಬ್ಬ ಪೋಲೀಸಿನವರ ಮೇಲೆ ಸೀಮೆಎಣ್ಣೆ ಹಾಕಿ ಸುಡುವಂತಹ ವ್ಯವಸ್ಥೆ ಮಾಡಿದರು. ಆಗ ಅಲ್ಲಿದ್ದ ಒಬ್ಬ ಪೋಲೀಸ್ ಅಧಿಕಾರಿ ತಮ್ಮ ಜೀವದ ಹಂಗು ತೊರೆದು, ಆ ಒಂದು ಬೆಂಕಿಯನ್ನು ಆರಿಸುವಂತಹ ಪರಿಸ್ಥಿತಿ ಬಂತು. ಶ್ರೀಮಾನ್ ಮಾನೆಯವರು ಹೇಳಿದರು, ಮಾನ್ಯ ಶರದ್‌ಪವಾರ್ ಅವರು ಬಂದಾಗ ಕಲ್ಲುಗಳನ್ನು ತೂರಿದರು ಎಂದು. ತಮ್ಮ ಮೇಲೆ ಕಲ್ಲು ಬೀಳುವಂತೆ ಅವರೇ ಮಾಡಿಕೊಂಡರು. ಶರದ್‌ಪವಾರ್ ಅವರು ಬಂದಾಗ ನಮ್ಮ ರಾಜ್ಯದ ಪೋಲೀಸ್ ಅಧಿಕಾರಿಗಳು ಅವರಿಗೆ ರಾಜ್ಯದ ಅತಿಥಿ ಎಂದು ಪರಿಗಣಿಸಿ ಸೂಕ್ತ ರಕ್ಷಣೆ ಹಾಗೂ ಆತಿಥ್ಯವನ್ನು ನೀಡಿದರು. ಅವರನ್ನು ಸುರಕ್ಷಿತವಾಗಿ ತಲುಪಿಸಿದ್ದಾರೆ. ಇದನ್ನು ಅವರು ತಮ್ಮ ಹೃದಯವಂತಿಕೆಯಿಂದ ಹೇಳಬೇಕು. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ರಾಜಕೀಯವನ್ನು ಬೆಳೆಸಬೇಕೆಂದು ಹೋರಾಡುತ್ತಿದ್ದಾರೆ. ಅವರಿಗೆ ಕನ್ನಡ ಬಂದರೂ ಇಲ್ಲಿ ಕನ್ನಡದಲ್ಲಿ ಮಾತನಾಡುವುದಕ್ಕೆ ತಯಾರಿಲ್ಲ. ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ. ಕಾರಣ ಏನೆಂದರೆ, ಕರ್ನಾಟಕ ಸರ್ಕಾರ ಅಲ್ಪಸಂಖ್ಯಾತರಿಗೆ ಕುಂದಕೊರತೆ ಆಗದಂತೆ, ಅಲ್ಪಸಂಖ್ಯಾತರಿಗೆ ಹಾನಿಯಾಗದಂತೆ, ಅವರ ಹಿತವನ್ನು ಬಯಸುತ್ತಿದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಇದನ್ನು ತಿಳಿದುಕೊಳ್ಳಬೇಕೆಂದು ಹೇಳಿ ನನಗೆ ಇಷ್ಟುಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ತಾವು ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ನಾಳೆ ಮಾತನಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ರೂಲ್ ೭೮ರ ಪ್ರಕಾರ ಇದರಲ್ಲಿ ಪ್ರಸ್ತಾಪವಾಗತಕ್ಕಂಥ ವಿಷಯಗಳನ್ನು ಮುಂದೂಡುವುದಕ್ಕೆ ಅವಕಾಶ ಇಲ್ಲ. ಆದರೆ ಸಭೆ ಇವತ್ತು ಮುಗಿಯುವುದಿಲ್ಲವೆಂಬ ತೀರ್ಮಾನಕ್ಕೆ ಬಂದ ಸಮಯದಲ್ಲಿ ತಾವು ರೂಲ್ ೭೮ನ್ನು ಸಡಿಲಗೊಳಿಸಿ, it should not be quoted as a precedent. ಸ್ವಲ್ಪ ಮಟ್ಟಿಗೆ ಬದಲಿಸಬಹುದು, ಇದು ಮೊದಲನೆಯದು. ಅನಂತರ ನಾಡಿದ್ದರ ಲೆಜಿಸ್ಲೇಚರ್ ಬಿಸಿನೆಸ್ ಆದ ನಂತರ ೪ ಗಂಟೆಗೆ ಗೊತ್ತು ಮಾಡಿ ಅಥವಾ ಮೂರುವರೆ ಗಂಟೆಗೆ ಇದನ್ನು ಗೊತ್ತುಮಾಡಿ. ನಿಗದಿಪಡಿಸಿದ ಕಾರ್ಯಕ್ರಮಗಳು ಪೂರ್ಣವಾದ ನಂತರ ಈ ವಿಷಯವನ್ನು ತೆಗೆದುಕೊಳ್ಳಬಹುದು. It should not be quoted as precedent. Since the House appears to be in a mood to take up further discussion on a different date, my submission is that it may be so done on these conditions.

ಅಧ್ಯಕ್ಷರು.—ಈ ಕಡೆ ಇನ್ನೂ ಆರು ಜನ ಸದಸ್ಯರು ಮಾತನಾಡುವವರು ಇದ್ದಾರೆ. ಆದ್ದರಿಂದ ನಾಡಿದ್ದು ಮಧ್ಯಾಹ್ನ ೪ ಗಂಟೆಗೆ ಇದನ್ನು ಇಡುತ್ತೇನೆ, ಇಂದಿನ ಸಭೆಯನ್ನು ನಾಳೆ ೧೧ ಗಂಟೆಗೆ ಮುಂದೂಡಲಾಗಿದೆ.

(ಸಭೆಯು ಸಂಜೆ ೬-೩೦ಕ್ಕೆ ಮುಕ್ತಾಯವಾಗಿ ನಾಳೆ ತಾ. ೨೦-೮-೮೬ರ ಬೆಳಿಗ್ಗೆ ೧೧-೦೦ ಗಂಟೆಗೆ ಪುನಃ ಸೇರಲು ನಿರ್ಧರಿಸಿತು.)